
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

13 ಏಪ್ರಿಲ್ 2016 ಪುಟ 20 ರೂ. 15/-



ಗಾನ ಗಂಧರ್ವನ ಜೊತೆ



ಚಿರು ಮಗಳ ಮರು ಮದುವೆ

ಮೈಸೂರು



ಸುಖದಾಸೆಗೆ ಬಲಿಯಾದ ರಕ್ಷಿತಾ

ಕೊಡಗು

ಸುಳ್ಳನ್ನೇ ಸತ್ಯವಾಗಿಸಿದ ಶಿಖಾ



ಮಂಡ್ಯ




ವರದಕ್ಷಿಣೆ ಪೀಡಕರಿಗೆ ಗೂಸಾ




ಮಂಗಳೂರು

ಬಾಳಿಗಾ ಹತ್ಯೆಯಲ್ಲಿ ಶೆಣೈ ಕೈವಾಡ?



ಸುಳ್ಳನ್ನೇ ಸತ್ಯವಾಗಿಸಿದ ಶಿಖಾ ವರದಿ



ಒಚ್ಚ ಆಗದು ಇಲಿಯನ್ನು ಮೈಸೂರು ಜಿಲ್ಲಾಧಿಕಾರಿ ಸಿ. ಶಿಖಾ ಹಿಡಿದಿದ್ದಾರೆ. ನವೆಂಬರ್ ತಿಂಗಳಿನಲ್ಲಿ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಲು ರಾಜ್ಯ ಸರಕಾರ ತೀರ್ಮಾನಿಸಿತ್ತು. ಕೊಡಗು ಜಿಲ್ಲೆಯಲ್ಲಿ, ವಿಶೇಷವಾಗಿ ಮಡಿಕೇರಿಯಲ್ಲಿ ಗಲಭೆ ನಡೆದು, ಇಬ್ಬರು ವ್ಯಕ್ತಿಗಳು ಸಾವನ್ನಪ್ಪಿದ್ದರು. ಇದರ ಬಗ್ಗೆ ಮೆಜಿಸ್ಟೀರಿಯಲ್ ವಿಚಾರಣೆ ನಡೆಸಲು ಕರ್ನಾಟಕ ರಾಜ್ಯ ಸರಕಾರ ತೀರ್ಮಾನಿಸಿ, ಮೈಸೂರು ಜಿಲ್ಲಾಧಿಕಾರಿಗಳಿಗೆ ತನಿಖೆ ನಡೆಸಲು ಆದೇಶಿಸಿತ್ತು.

ಒಂದು ತಿಂಗಳ ಒಳಗೆ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಬೇಕೆಂದು ರಾಜ್ಯ ಸರಕಾರ ಆದೇಶಿಸಿತ್ತು. ಸುಮಾರು ನಾಲ್ಕು ತಿಂಗಳ ನಂತರ ಈಗ ಶಿಖಾರವರು ವರದಿಯನ್ನು ಸಲ್ಲಿಸಿದ್ದಾರೆ ಎಂಬ ಮಾಹಿತಿ ಬಂದಿದ್ದು, ವರದಿಯಲ್ಲಿ ಗಲಭೆಗೆ ಜಿಲ್ಲಾಡಳಿತದ ವೈಫಲ್ಯ ಕಾರಣ ಎಂದು ಅವರು ತಿಳಿಸಿದ್ದಾರೆ ಎಂದು ವರದಿಗಳು ಆಗಿವೆ.

ಆ ಸಂದರ್ಭದಲ್ಲಿ ಗಲಭೆ ಆಗುವ ಮುನ್ಸೂಚನೆ ಇತ್ತು, ಅದನ್ನು ತಡೆಯುವ ಯತ್ನವನ್ನು ಜಿಲ್ಲಾ ಪೊಲೀಸ್ ಆಗಲಿ, ಜಿಲ್ಲಾಡಳಿತವಾಗಲಿ ಮಾಡಿಲ್ಲ ಎಂದು ವರದಿಯಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ. ಟಿಪ್ಪು ಜಯಂತಿಯ ವಿಚಾರದಲ್ಲಿ ಗಲಾಟೆ ಆಗುವುದನ್ನು ಮನಗಂಡು, ಜಿಲ್ಲೆಯ ಜನಪ್ರತಿನಿಧಿಗಳು, ಸಂಘಸಂಸ್ಥೆಗಳು ಮತ್ತು ಇತರರ ಜೊತೆಯಲ್ಲಿ ಸಮಾಲೋಚನೆಯನ್ನು ನಡೆಸಬೇಕಾಗಿತ್ತು. ಆದರೆ ಹಾಗೆ ನಡೆಸಲಿಲ್ಲ, ಮಾತ್ರವಲ್ಲ ಇದು ಸರಕಾರದ ಕಾರ್ಯಕ್ರಮವಾದ್ದರಿಂದ, ಕಾರ್ಯಕ್ರಮವನ್ನು ನಡೆಸುವ ಅನಿವಾರ್ಯತೆಯೂ ಇತ್ತು ಎಂಬುದನ್ನು ಜನಪ್ರತಿನಿಧಿಗಳಿಗೆ ತಿಳಿಸುವ ಅಗತ್ಯತೆ ಇತ್ತು ಎಂದು ವರದಿಯಲ್ಲಿ ಶಿಖಾರವರು ಉಲ್ಲೇಖಿಸಿದ್ದಾರೆ ಎಂದು ಹೇಳಲಾಗಿದೆ.

ಕುಟ್ಟಪ್ಪ ಸಾವಿಗೆ ಕಾರಣ ಏನು ಎಂಬುದು ತಿಳಿದಿಲ್ಲ, ಪೊಲೀಸರ ತನಿಖೆಯಿಂದ ಸತ್ಯಾಂಶ ಹೊರಬರಬೇಕಾಗಿದೆ ಎಂದು ಶಿಖಾರವರು ತಮ್ಮ ವರದಿಯಲ್ಲಿ ಹೇಳಿದ್ದಾರೆ ಎಂಬ ಅಂಶಗಳು ಈಗ ಚರ್ಚೆಯಾಗುತ್ತಿದೆ. ವಿಧಾನಸಭಾ ಅಧಿವೇಶನವು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ವರದಿಯು ಬಹಿರಂಗವಾಗದಂತೆ ಎಚ್ಚರಿಕೆಯನ್ನು ವಹಿಸಲಾಗಿತ್ತು ಎನ್ನಲಾಗಿದೆ. ಆದರೆ ಈಗ ವರದಿ ಬಹಿರಂಗಗೊಂಡಿದೆ. ಅಂದರೆ ಸೋರಿಕೆಯಾಗಿದೆಯೋ ಅಥವ ಉದ್ದೇಶ ಪೂರ್ವಕವಾಗಿ ಬಹಿರಂಗಗೊಳಿಸಲಾಗಿದೆಯೋ ತಿಳಿಯದು.

ಇಲ್ಲಿ ಶಿಖಾರವರು ನೀಡಿರುವ ವರದಿಯನ್ನು ಗಮನಿಸಿದರೆ ನಗಬೇಕೋ ಅಥವ ಅಳಬೇಕೋ ಎಂಬುದು ತಿಳಿಯದು. ಏಕೆಂದರೆ ಈ ವರದಿಯಲ್ಲಿ ಹೊಸತೇನೂ ಇಲ್ಲ, ಇಡೀ ಜಗತ್ತಿಗೆ ತಿಳಿದಿರುವ ಸತ್ಯವೇನೆಂದರೆ, ಈ ಪ್ರಕರಣವನ್ನು ನಿಭಾಯಿಸುವಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿತ್ತು ಎಂಬುದಾಗಿದೆ. ಆದರೆ ಇದನ್ನೇ ತನಿಖೆ ನಡೆಸಿ, ನಾಲ್ಕು ತಿಂಗಳುಗಳ ಕಾಲ ತೆಗೆದುಕೊಂಡು ವರದಿಯನ್ನು ನೀಡಿದ್ದಾರೆ ಎನ್ನುವುದೇ ನಾಚಿಕೆಗೇಡಿನ ವಿಚಾರ.

ವರದಿಯಲ್ಲಿ ಗಲಭೆಗೆ ಕೇರಳದಿಂದ ಜನರು ಬಂದಿದ್ದು ಕಾರಣ ಎಂದು ಅವರು ತಿಳಿಸಿದ್ದಾರೆ ಎಂಬ ಅಂಶವನ್ನು ಗಮನಿಸಿದರೆ, ಶಿಖಾರವರು ಯಾವುದೇ ರೀತಿಯ ತನಿಖೆಯನ್ನು ನಡೆಸದೆ ಈ ವರದಿಯನ್ನು ನೀಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು. ತಿಪ್ಪೆ ಸಾರಿಸುವ ಕೆಲಸವನ್ನು ಶಿಖಾ ಮಾಡಿದ್ದಾರೆ.

ಕೇರಳದಿಂದ ಜನರು ಕೊಡಗಿಗೆ ಆಗಮಿಸಿದ್ದರು ಎಂಬುದನ್ನು ಗೃಹ ಸಚಿವರು ಅಧಿಕೃತವಾಗಿ ವಿಧಾನಸಭೆಯಲ್ಲಿ ತಿಳಿಸಿದ್ದರಿಂದ, ಗೃಹ ಸಚಿವರ ಹೇಳಿಕೆಯನ್ನು ಸಮರ್ಥಿಸಿ ಕೊಳ್ಳಲು ಶಿಖಾರವರು ಈ ರೀತಿ ವರದಿಯನ್ನು ನೀಡಿರಬೇಕೇ ವಿನಹ, ಖಂಡಿತವಾಗಿಯೂ ತನಿಖೆಯನ್ನು ವ್ಯವಸ್ಥಿತವಾಗಿ ಮಾಡಿದ್ದರೆ, ಈ ರೀತಿಯಲ್ಲಿ ಅವರು ವರದಿ ನೀಡಲು ಸಾಧ್ಯವಿರುತ್ತಿರಲಿಲ್ಲ.

ಟಿಪ್ಪು ಜನ್ಮ ದಿನಾಚರಣೆ ವೇಳೆಯಲ್ಲಿ ಆದ ಗಲಭೆಗೆ ಜಿಲ್ಲಾಡಳಿತ ಯಾವ ಪ್ರಮಾಣದಲ್ಲಿ ಕಾರಣವೋ, ಅದೇ ಪ್ರಮಾಣದಲ್ಲಿ ಕೊಡಗು ಜಿಲ್ಲೆಯ ಶಾಸಕರು ಹಾಗೂ ಸಂಸದರು ಕಾರಣ ಎಂಬುದನ್ನು ಅವರು ತಮ್ಮ ವರದಿಯಲ್ಲಿ ಉಲ್ಲೇಖಿಸಬೇಕಾಗಿತ್ತು. ಟಿಪ್ಪು ಜನ್ಮ ದಿನಾಚರಣೆಯನ್ನು ರಾಜ್ಯದಾದ್ಯಂತ ಆಚರಿಸಬೇಕು ಎಂದು ರಾಜ್ಯ ಸರಕಾರ ಆದೇಶ ಹೊರಡಿಸಿದಾಗ, ಕೊಡಗು ಜಿಲ್ಲೆಯಲ್ಲಿ ಟಿಪ್ಪು ಜನ್ಮ ದಿನಾಚರಣೆಯನ್ನು ಮಾಡಲು ಬಿಡುವುದಿಲ್ಲ ಮತ್ತು ಅಂದು ಜನರು ಸ್ವಯಂಪ್ರೇರಿತರಾಗಿ ಬಂದ್ ಮಾಡಿ ಪ್ರತಿಭಟಿಸಬೇಕು ಎಂದು ಬಿಜೆಪಿ ಶಾಸಕರುಗಳಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಹಾಗೂ ಸಂಸದ ಪ್ರತಾಪ ಸಿಂಹರವರು ಹೇಳಿಕೆ ನೀಡಿದ್ದರು. ಈ ಹೇಳಿಕೆಯೇ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣ ಎಂಬುದು ಪುಟ್ಟ ಮಗುವಿಗೂ ತಿಳಿದಿರುವ ಮತ್ತು ಅರ್ಥವಾಗುವ ವಿಚಾರ. ಇದನ್ನು ಅವರು ತಮ್ಮ ವರದಿಯಲ್ಲಿ ಹೇಳಿಲ್ಲ ಎಂದಾದರೆ, ಘಟನೆ ಮತ್ತು ಘಟನೆಗೆ ಪೂರ್ವದಲ್ಲಿ ಆದಂತಹ ವಿಚಾರಗಳ ಬಗ್ಗೆ ಶಿಖಾರವರು ಅವಲೋಕನ ನಡೆಸಿಲ್ಲ ಎಂಬ ಅಂಶ ಬೆಳಕಿಗೆ ಬರುತ್ತದೆ. ಬಂದ್‌ಗೆ ಕರೆ ನೀಡಿದ್ದೇ ಇಷ್ಟೆಲ್ಲಾ ಗಲಭೆಗೆ ಕಾರಣ. ಜೊತೆಗೆ ಜಿಲ್ಲಾಡಳಿತವೇ ಅಲ್ಪಸಂಖ್ಯಾತರ ಇಲಾಖೆಯ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಎಲ್ಲಾ ಜಮಾಯತ್‌ಗಳಿಗೆ ಮನವಿ ಮಾಡಿಕೊಂಡು, ಆನಂತರ ಕಾರ್ಯಕ್ರಮಕ್ಕೆ ಬಂದಾಗ, ಅವರ ಮೇಲೆ ಹಲ್ಲೆ ನಡೆದಿದೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಬೇಕಾಗಿತ್ತು.



ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ರಕ್ಷಣೆ ನೀಡಲು ಜಿಲ್ಲಾ ಪೊಲೀಸ್ ವ್ಯವಸ್ಥೆಗೆ ಸಾಧ್ಯವಾಗಲಿಲ್ಲ, ಅವರು ಭದ್ರತೆಯನ್ನು ಕಲ್ಪಿಸುವ ಬದಲು, ಕಾರ್ಯಕ್ರಮವನ್ನು ವಿರೋಧಿಸುವವರ ರಕ್ಷಣೆಗೆ ಬದ್ಧರಾಗಿದ್ದರು ಮತ್ತು ಮಡಿಕೇರಿಯಲ್ಲಿ ಪೊಲೀಸರು ಏಕಪಕ್ಷೀಯವಾಗಿ ವರ್ತಿಸಿದ್ದರು ಎಂಬುದು ತನಿಖೆಯಿಂದ ಬಹಿರಂಗಗೊಳ್ಳಬೇಕಾಗಿತ್ತು, ಆದರೆ ಇಂತಹ ಪ್ರಮುಖ ವಿಚಾರಗಳು ವರದಿಯಲ್ಲಿ ಪ್ರಸ್ತಾಪವಾಗಿರುವಂತೆ ಕಂಡುಬರುತ್ತಿಲ್ಲ.

ಕುಟ್ಟಪ್ಪ ಸಾವಿಗೆ ಕಾರಣವೇನು ಎಂಬುದು ತಿಳಿದಿಲ್ಲ ಎಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ ಎಂದಾದರೆ, ಸಂಪೂರ್ಣವಾಗಿ ಶಿಖಾರವರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿದ್ದಾರೆ. ಕುಟ್ಟಪ್ಪ ಸಾವಿನ ವಿಚಾರ ಮತ್ತು ಶಾಹುಲ್ ಹಮೀದ್ ಸಾವಿನ ವಿಚಾರದ ಬಗ್ಗೆ ತನಿಖೆಗಳು ಪ್ರಮುಖವಾಗಿ ಆಗಬೇಕಾಗಿತ್ತು, ಏಕೆಂದರೆ ಕುಟ್ಟಪ್ಪ ಸಾವಿಗೆ ಸಂಬಂಧಪಟ್ಟಂತೆ ಅವರ ಪುತ್ರ ನೀಡಿದ ಪುಕಾರಿನ ಆಧಾರದಲ್ಲಿ ಪೊಲೀಸ್ ಇಲಾಖೆ ಮೊಕದ್ದಮೆಯನ್ನು ದಾಖಲಿಸಿಕೊಂಡಿತ್ತು. ಅವರು ಯಾರ ಹೆಸರುಗಳನ್ನು ನೀಡಿದ್ದರೋ, ಅವರಲ್ಲಿ ಹಲವರು ಟಿಪ್ಪು ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಅಥವ ಪ್ರೇಕ್ಷಕರಾಗಿ ಭಾಗವಹಿಸಿದ ದಾಖಲೆಗಳು ಇದ್ದವು. ಹಾಗಿರುವಾಗ ಸುಳ್ಳು ಪುಕಾರಿನ ಆಧಾರದಲ್ಲಿ ಪೊಲೀಸರು ಮೊಕದ್ದಮೆಯನ್ನು ದಾಖಲಿಸಿಕೊಂಡಿದ್ದಾರೆ ಎಂಬುದುನ್ನು ತಮ್ಮ ದಾಖಲೆಯಲ್ಲಿ ಉಲ್ಲೇಖಿಸಬೇಕಾಗಿತ್ತು, ಆದರೆ ಇಂತಹ ಯಾವ ವಿಚಾರಗಳು ಅವರ ವರದಿಯಲ್ಲಿ ಚರ್ಚೆಯಾದಂತೆ ಕಂಡುಬರುತ್ತಿಲ್ಲ.

ರಾಜ್ಯ ಗೃಹ ಇಲಾಖೆಯು ಈ ಗಲಭೆಯ ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ಜನರು ಆಗಮಿಸಿದ್ದು ಕಾರಣ ಎಂಬುದನ್ನು ಹೇಳುತ್ತಾ ಬಂದಿತ್ತು, ಇದನ್ನು ಉಲ್ಲೇಖಿಸುವ ಮೂಲಕ ಶಿಖಾರವರು ಸಚಿವರ ಹೇಳಿಕೆಯನ್ನು ಸಮರ್ಥಿಸುತ್ತಾ ರಕ್ಷಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

ಏಕೆಂದರೆ ಗಲಭೆ ನಡೆಸಲು ಹೊರರಾಜ್ಯಗಳಿಂದ ಜನರು ಬಂದಿದ್ದರು ಎಂದಾದರೆ, ಪೊಲೀಸರು ಗ... ಸಂಬಂಧಪಟ್ಟಂತೆ ದಾಖಲಿಸಿಕೊಂಡಿರುವ ಮೊಕದ್ದ... ಹೊರ ರಾಜ್ಯದವರ ಹೆಸರುಗಳು ಕೂಡ ಇರಬೇ... ಮತ್ತು ಗಲಭೆಗಾಗಿ ಆಗಮಿಸಿದ್ದವರ ... ಸಂಖ್ಯೆಗಳು ಕೂಡ ನಮೂದಾಗ ಬೇ... ಆದರೆ ಮೊಕದ್ದಮೆ ಯಲ್ಲಿ ಈ ... ಅಂಶಗಳು ಇಲ್ಲ ಎಂಬುದು ಗಮನಾ... ವಿಚಾರ.

ಪೊಲೀಸ್ ಇಲಾಖೆ ತನಿಖೆಯನ್ನು... ಮೊಕದ್ದಮೆ ದಾಖಲಿಸಿದ್ದು ಹೇಗೆ ಎ... ಅವರೇ ನೀಡಿರುವಂತಹ ಹೇಳಿಕೆಗಳ... ಎಂದರೆ ಸಂಪೂರ್ಣ ಘಟನಾವಳಿಗಳನ್ನು ವೀ... ಚಿತ್ರೀಕರಣ ಮಾಡಲಾಗಿದೆ. ಆ ವೀಡಿಯೋ ಚಿತ್ರೀಕ... ವೀಕ್ಷಿಸಿ, ಈ ಘಟನೆಯಲ್ಲಿ ಯಾರೆಲ್ಲಾ ಶಾಮೀಲ... ಎಂಬುದನ್ನು ಪತ್ತೆಹಚ್ಚಿ, ಅದರ ಆಧಾರದ ... ಮೊಕದ್ದಮೆಯನ್ನು ದಾಖಲಿಸಲಾಗಿದೆ ಎಂದಿದ್ದಾರೆ. ... ಪೊಲೀಸರ ತನಿಖೆಯ ವೇಳೆಯಲ್ಲಿ ಅವರಿಗೆ ... ರಾಜ್ಯದಿಂದ ಅಥವ ಬೇರೆ ಯಾವುದೇ ರಾಜ್ಯದಿಂದ... ಆಗಮಿಸಿದ್ದರ ಬಗ್ಗೆ ವೀಡಿಯೋದಲ್ಲಿ ಚಿತ್ರೀಕರಣ... ಇದು ವಾಸ್ತವಾಂಶ. ಹಾಗಿರುವಾಗ ಕೇರಳ ರಾ... ಜನರು ಬಂದಿದ್ದರು ಎನ್ನುವುದಾಗಲಿ, ಬರುವ ಮು... ಇತ್ತು ಎಂಬುದಾಗಲಿ ಕಪೋಲಕಲ್ಪಿತ ಎಂ... ಹೇಳಬಹುದಾಗಿದೆ.

ಅಂದರೆ ಶಿಖಾರವರು ಗೃಹ ಇಲಾಖೆ ಮತ್ತು... ಹಾಗೂ ಸಂಘ ಪರಿವಾರದವರು ಘಟನೆಗೆ ಸಂಬಂಧ... ಹೊರ ಜಿಲ್ಲೆಯವರು ಬಂದಿದ್ದೇ ಕಾರಣ ಎಂ... ಹೇಳಿದ ವಿಚಾರವನ್ನು ಸಮರ್ಥಿಸಿಕೊಳ್ಳಲು ವರದಿ... ನೀಡಿದ್ದಾರೆ ಎಂದು ಹೇಳಬಹುದಾಗಿದೆ. ವರದಿಯ ... ಅಂಶವನ್ನು ಗಮನಿಸಿದರೆ ಖಂಡಿತವಾಗಿಯೂ... ವಾಸ್ತವಾಂಶದ ಆಧಾರದಲ್ಲಿ, ತನಿಖೆಗಳು ... ಎಂಬುದಾಗಿ ಹೇಳಬಹುದು. ಕಾಟಾಚಾ... ವಿಚಾರಣೆಯನ್ನು ನಡೆಸಿ, ಒಂದು ವರದಿಯನ್ನು... ತಿಪ್ಪೆ ಸಾರಿಸುವ ಕೆಲಸವನ್ನು ಮಾಡಿದ್ದಾರೆ. ಶಾ... ಹಮೀದ್ ಕೊಲೆ ಪ್ರಕರಣ ಏತಕ್ಕಾಗಿ ಆಯಿತು ಎ... ಬಗ್ಗೆ ವರದಿಯಲ್ಲಿ ಚರ್ಚೆಯಾದರೂ ಆಗಬೇ... ಶಾಹುಲ್ ಹಮೀದ್ ಮತ್ತು ಕುಟ್ಟಪ್ಪ ಕೊಲೆ... ಎಂಬುದಷ್ಟನ್ನೇ ವರದಿಯಲ್ಲಿ ಹೇಳುವುದಾದರೆ, ... ಒಂದು ತನಿಖೆಯನ್ನು ನಡೆಸುವ ಅಗತ್ಯತೆ ಇರಲಿಲ್ಲ, ... ರಕ್ಷಿಸಲು ಮತ್ತು ಏತಕ್ಕಾಗಿ ರಕ್ಷಿಸಲು ಇಂತಹ ... ವರದಿಯನ್ನು ಶಿಖಾರವರು ನೀಡಿದ್ದಾರೆ ಎಂದು ... ಅಗತ್ಯತೆ ಇದೆ.

■ ಬಿ.ಎನ್.ಮನು

ಸ್ಕೇಟಿಂಗ್ ಜಗತ್ತಿನ ವಿಸ್ಮಯ: ಶಾಮಿಲ್

ಮಂಗಳೂರಿನ ಸ್ಕೇಟಿಂಗ್ ತಾರೆ ಸೀಲಿಯ ಸಿಮ್ಮಿತ್ ಬಗ್ಗೆ ಸ್ಕೇಟಿಂಗ್ ಕ್ರೀಡೆಯ ಆಸಕ್ತರಲ್ಲಿ ಹೆಚ್ಚಿನವರಿಗೆ ಗೊತ್ತಿರಬಹುದು. ಆಕೆ ತನ್ನ ಎಂಟರ ಹರೆಯಕ್ಕೆ ಸ್ಕೇಟಿಂಗ್ ಜಗತ್ತಿಗೆ ಕಾಲಿರಿಸಿ ಹದಿನಾಲ್ಕು ವರ್ಷಕ್ಕೆ ಕಾಲಿಡುವಾಗ ಅಂತರ್ಶಾಲಾ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗಿನ ವಿವಿಧ ಸ್ಪರ್ಧೆಗಳಲ್ಲಿ 65 ಪದಕಗಳನ್ನು ಜಯಿಸಿ ಅಚ್ಚರಿ ಮೂಡಿಸಿದ್ದಳು. ಇದೀಗ ಎಂಬಿಬಿಎಸ್ ಓದುತ್ತಿರುವ ಸೀಲಿಯಾಳದ್ದು ಮಹಿಳಾ ಸ್ಕೇಟಿಂಗ್ ಜಗತ್ತಿನಲ್ಲಿ ದೊಡ್ಡ ಹೆಸರು. ಇದೇ ಮಂಗಳೂರಿನ ಮಣ್ಣಿನಲ್ಲಿ ಸೀಲಿಯಾಳನ್ನೇ ಮೀರಿಸುವಂತಹ ಇನ್ನೋರ್ವ ಬಾಲ ಸ್ಕೇಟಿಂಗ್ ಪ್ರತಿಭೆ ಮುಹಮ್ಮದ್ ಶಾಮಿಲ್ ಅರ್ಶದ್ ಹುಟ್ಟಿ ಬಂದಿದ್ದಾನೆ. ಶಾಮಿಲ್‌ಗೆ ಇನ್ನೂ ಎಂಟರ ಹರೆಯ. ಈತ ಇಷ್ಟು ಚಿಕ್ಕ ವಯಸ್ಸಿಗೆ ಅಂತರ್ಶಾಲಾ, ಜಿಲ್ಲಾ, ರಾಜ್ಯ, ದಕ್ಷಿಣ ಭಾರತ ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪದಕಗಳ ಅರ್ಧಶತಕ ಬಾರಿಸಿದ್ದಾನೆ. ಈ ಶಾಮಿಲ್ ಎಂತಹ ಪ್ರತಿಭಾವಂತ ಸ್ಕೇಟಿಂಗ್ ಪಟುವೆಂದರೆ ತನ್ನ ಮೂರು ವರ್ಷಗಳ ಕ್ರೀಡಾಬದುಕಿನಲ್ಲಿ ಈವರೆಗೆ ಪದಕದ ಹೊರತಾಗಿ ಕೂಟದಿಂದ ಮರಳಿದ ಏಕೈಕ ನಿದರ್ಶನವೂ ಇಲ್ಲ, ಈತ ಪದಕಗಳನ್ನು ಬೆನ್ನಟ್ಟಿ ಹಿಡಿಯುತ್ತಾನೋ ಅಥವಾ ಪದಕಗಳೇ ಈತನ ಬೆನ್ನಟ್ಟಿ ಬಂದು ಕೊರಳಿಗೆ ಬೀಳುತ್ತವೋ ಏನೋ ಎಂಬಂತೆ ಸಾಗಿದೆ ಈತನ ಪದಕ ವಿಕ್ರಮದ ಹಾದಿ. ಅದೇನೋ ಹೇಳ್ತಾರಲ್ಲ.... "ಆನೆ ನಡೆದದ್ದೇ ದಾರಿ" ಹಾಗಿದೆ ಶಾಮಿಲ್‌ನ ಪದಕಗಳ ಬೇಟೆ.



ಕಾಲಿಗೆ ಚಕ್ರಕಟ್ಟಿಕೊಂಡು ಓಡುವ ಈ ಕ್ರೀಡೆಯಲ್ಲಿ ಶಾಮಿಲ್‌ನ ಸಾಧನೆ ಅನುಪಮ. ಸ್ಕೇಟಿಂಗ್‌ನಲ್ಲಿ ಒಂದಿನಿತು ಹೆಜ್ಜೆ ತಪ್ಪಿದರೂ ಮುಖ ಮೂತಿ ಮುರಿದುಕೊಳ್ಳುವುದು ಖಚಿತ. ಇದು ಮಂಗಳೂರಿನಲ್ಲಿ ಅಂತಹ ಜನಪ್ರಿಯ ಕ್ರೀಡೆಯೇನಲ್ಲ, ಹೇಳಿಕೇಳಿ ಮಂಗಳೂರಿನಲ್ಲಿ ಇರುವ ಸ್ಕೇಟಿಂಗ್ ತರಬೇತುದಾರರ ಸಂಖ್ಯೆ ಕೇವಲ ಎರಡು. ಇವೆಲ್ಲಾ ಋಣಾತ್ಮಕ ಅಂಶಗಳಿದ್ದೂ ಶಾಮಿಲ್ ಈ ಕ್ರೀಡೆಗೆ ಪ್ರವೇಶಿಸಿದ ಪರಿ ವಿಶಿಷ್ಟವಾದುದು.

ಶಾಮಿಲ್‌ನ ಅಣ್ಣ ಸಾಹಿಲ್ ಕೂಡಾ ಸ್ವಲ್ಪಕಾಲ ಸ್ಕೇಟಿಂಗ್ ಆಡಿದ್ದ. ಶಾಮಿಲ್ ಎರಡೂವರೆ ವರ್ಷದ ಮಗುವಾಗಿದ್ದಾಗ ತುಸು ಹೆಚ್ಚೇ ತುಂಟನಾಗಿದ್ದ. ಈತನ ತುಂಟತನವನ್ನು ನಿಭಾಯಿಸಿ ಮನೆ ಕೆಲಸ ಮುಗಿಸುವಷ್ಟರಲ್ಲಿ ಅಮ್ಮ ರಮ್ಲತ್‌ಗೆ ಸಾಕುಸಾಕಾಗಿ ಹೋಗುತ್ತಿತ್ತಂತೆ. ಶಾಮಿಲ್ ಎರಡರ ಹರೆಯದ ಮಗುವಾಗಿದ್ದಾಗ ಎಲ್ಲಾ ಮಕ್ಕಳಂತೆಯೇ ಮನೆಯ ಕಿಟಕಿಗಳ ಸರಳುಗಳಿಗೆ ಏರುತ್ತಿದ್ದ. ಎಲ್ಲಿ ಮಗು ಬಿದ್ದು ಕೈ ಕಾಲು ಮುರಿಯುತ್ತದೋ ಎಂಬ ಭಯದಿಂದ ರಮ್ಲತ್ ಅಡುಗೆ ಮನೆಯಲ್ಲಿ ಕೆಲಸಮಾಡುವಾಗ ಮಗು ಶಾಮಿಲ್‌ನ ಕಾಲುಗಳನ್ನು ತನ್ನ ಚೂಡಿದಾರದ ಶಾಲುಗಳಿಂದ ಕುರ್ಚಿಗೆ ಬಿಗಿದು ಕಟ್ಟುತ್ತಿದ್ದರಂತೆ. ಮಗು ಎಷ್ಟೇ ರಂಪ ಮಾಡಿದರೂ ರಮ್ಲತ್ ತನ್ನ ... ಮುಗಿಯುವವರೆಗೂ ಬಿಚ್ಚುತ್ತಿರಲಿಲ್ಲವಂತೆ. ಕೆಲವು ... ಬಳಿಕ ಕಾಲನ್ನು ಬಿಚ್ಚುವ ಪ್ರಯತ್ನದಲ್ಲಿ ಮಗು ಕುರ್ಚಿ... ಎಳೆಯುತ್ತಾ ಸ್ವಲ್ಪ ಸ್ವಲ್ಪ ಮುಂದೆ ಸಾಗುತ್ತಾ ... ಮುಂದಿನ ಬಾಗಿಲಿನವರೆಗೆ ಹೋಯಿತಂತೆ. ಇನ್ನು... ಮುಂದೆ ಹೋಗಿದ್ದರೆ ಮಹಡಿ ಮೆಟ್ಟಲುಗಳಿಂದ ... ಕೆಳಗೆ ಬೀಳುತ್ತಿತ್ತಂತೆ. ಶಾಮಿಲ್ ಇಂತಹ ... ಮಾಡಿದ್ದರಿಂದ ತಾಯಿ ಹೊಸ ತಂತ್ರ ರೂ... ಬೇಕಾಯಿತು. ಒಂದು ಮುಂಜಾನೆ ರಮ್ಲತ್ ಮನೆ... ತೊಡಗುವ ಮುನ್ನ ಹಿರಿಮಗ ಸಾಹಿಲ್‌ನ ಹಳೆ ಸ್ಕೇ... ಬೂಟ್‌ಗಳನ್ನು ತೊಡಿಸಿ ಶಾಮಿಲ್‌ನ ಪುಟ್ಟ ಕಾಲು... ಬೂಟುಗಳ ನಡುವಿನ ಅಂತರಕ್ಕೆ ಬಟ್ಟೆಗಳನ್ನು ತ... ಮಾಡಿದರು. ಕಾಲನ್ನು ಮುಂದಿಡುವಾಗ... ಚಲಿಸುವುದರಿಂದ ಹೆದರಿದ ಮಗು ಮೇಜಿನ ಕಾಲ... ಹಿಡಿದು ಅಲ್ಲೇ ನಿಂತು ರಂಪಾಟ ಮಾಡಿದರೂ ... ತನ್ನ ಕೆಲಸ ಮುಗಿಯುವವರೆಗೂ ಚಕ್ರದ ಬೂಟು... ಬಿಚ್ಚಲಿಲ್ಲ. ಮಾರನೇ ದಿನವೂ ಚಕ್ರದ ಬೂಟು ... ರಮ್ಲತ್ ಮನೆಗೆಲಸದಲ್ಲಿ ಮಗ್ನರಾಗಿದ್ದರು. ಸ್ವಲ್ಪ ... ಬಳಿಕ ಮಗು ಮೆಲ್ಲಮೆಲ್ಲನೇ ಕಾಲುಗಳನ್ನು ಎಳೆ... ಅಡುಗೆಕೋಣೆಯವರೆಗೆ ಬಂದದ್ದನ್ನು ಕಂಡು ರ... ಅಚ್ಚರಿಯೋ ಅಚ್ಚರಿ. ಎರಡೂವರೆ ... ಮಗುವಾಗಿದ್ದಾಗಲೇ ಚಕ್ರದ ಬೂಟಿನಲ್ಲಿ ... ಚಲಿಸಿದ್ದರಿಂದ ರಮ್ಲತ್ ಅಂದಿನಿಂದಲೇ ಮಗುವಿಗೆ ... ನೀಡತೊಡಗಿದರು. ಸ್ವಲ್ಪಕಾಲದ ಬಳಿಕ ಶಾಮಿ... ಸ್ಕೇಟಿಂಗ್ ತರಬೇತಿಗೆ ಸೇರ್ಪಡೆಗೊಳಿಸಿದರು.

ಶಾಮಿಲ್‌ಗೆ ನಾಲ್ಕು ವರ್ಷ ತುಂಬು... ಮಂಗಳೂರಿನ ಕೆನರಾ ಆಂಗ್ಲಮಾಧ್ಯಮ ... ದಾಖಲಿಸಿದರು. ಶಾಮಿಲ್ ಐ.ಎ.ಉ ವಿದ್ಯಾರ್ಥಿಯ...

⇨

1984 ಮತ್ತು 2002 ಗಲಭೆಗಳ ನಡುವಿನ ವ್ಯತ್ಯಾಸ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

1984ರಲ್ಲಿ ನಡೆದ ಸಿಖ್ಖರ ಮಾರಣಹೋಮಕ್ಕೂ, 2002ರಲ್ಲಿ ನಡೆದ ಮುಸಲ್ಮಾನರ ಮಾರಣಹೋಮಕ್ಕೂ ವ್ಯತ್ಯಾಸ ಇದೆ ಎಂದು ಕನ್ಹಯ್ಯ ಕುಮಾರ್ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

ಎರಡೂ ದಂಗೆಗಳಲ್ಲಿ ಸಾವಿರಾರು ಅಮಾಯಕ ಜನರು ಸತ್ತರು. ಸತ್ತವರು ವಿವಿಧ ಧರ್ಮಗಳಿಗೆ ಸೇರಿದ ಅಲ್ಪಸಂಖ್ಯಾತರಾಗಿದ್ದರು. ಎರಡೂ ಗಲಭೆಗಳಲ್ಲಿ ಅತ್ಯಾಚಾರ, ಜೀವ ದಹನ, ಆಸ್ತಿಪಾಸ್ತಿಯ ಲೂಟಿಗಳು ನಡೆದವು. ಎರಡೂ ಪ್ರಕರಣಗಳ ಹಿಂದೆ ಸರ್ಕಾರದ ಕೈವಾಡವಿತ್ತು. ಹೀಗಿರುವಾಗ ಅವೆರಡರ ನಡುವೆ ಏನು ವ್ಯತ್ಯಾಸ ಎಂದು ಹಲವರು ಕನ್ಹಯ್ಯನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. "ಈತನ ನಿಜಬಣ್ಣ ಹೊರಬಿದ್ದಿದೆ. ಈತ ಕಾಂಗ್ರೆಸ್ ಪಕ್ಷಕ್ಕೆ ಸೇರಲು ಸಿದ್ಧವಾಗುತ್ತಿರುವುದರಿಂದಲೇ ಹೀಗೆ ಮಾತನಾಡಿದ್ದಾನೆ" ಎಂದು ಹಲವರು ಕುಟುಕುತ್ತಿದ್ದಾರೆ.

ಹೌದು, ಎರಡೂ ಗಲಭೆಗಳಲ್ಲಿ ಅಮಾಯಕರು ಕೊಲೆಯಾಗಿದ್ದು ಎಲ್ಲ ರೀತಿಯಿಂದಲೂ ಖಂಡನಾರ್ಹವೇ. ಹಾಗೆ ಖಂಡಿಸುವಲ್ಲಿ ಯಾವ ಹಿಂಜರಿಕೆಯೂ ಇರುವುದು ಬೇಡ. ಅಂದಮಾತ್ರಕ್ಕೆ ಎರಡರ ನಡುವೆ ವ್ಯತ್ಯಾಸಗಳೇ ಇಲ್ಲ ಎನ್ನುವುದೂ ತಪ್ಪಾಗುತ್ತದೆ. ಯಾಕೆಂದರೆ ಅವುಗಳ ಮಧ್ಯೆ ಹಲವಾರು ವ್ಯತ್ಯಾಸಗಳಿವೆ.

ಕಾಂಗ್ರೆಸ್ ಪಕ್ಷ ಉತ್ತಮ ಪಕ್ಷವೇನಲ್ಲ. ಅದು ಈ ದೇಶಕ್ಕೆ ಒಳಿತನ್ನು ಮಾಡಿರುವಂತೆ ಕೆಡುಕನ್ನೂ ಮಾಡಿದೆ. ಜಾತ್ಯತೀತ ಪಕ್ಷದಂತೆ ಪೋಜು ಕೊಡುತ್ತಲೇ ಮೃದು ಹಿಂದೂತ್ವವನ್ನು ಪಾಲಿಸಿಕೊಂಡು ಬಂದಿದೆ. ತಾನು ಮಾಡಿದ ತಪ್ಪಿಗೆ ತಕ್ಕ ಶಾಸ್ತಿಯನ್ನೂ ಹಲವಾರು ಬಾರಿ ಅನುಭವಿಸಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್ ಆನಂತರ ತುರ್ತುಪರಿಸ್ಥಿತಿಯನ್ನೇ ದೇಶದ ಮೇಲೆ ಹೇರಿತ್ತು. ಮುಸಲ್ಮಾನರ ಮೌಲ್ವಿಗಳನ್ನು ಮತ್ತು ಪುರುಷರನ್ನು ಓಲೈಸಲು ಷಾ ಬಾನೋ ಎಂಬ ಅಮಾಯಕ ಬಡಮಹಿಳೆಗೆ ಕಾಂಗ್ರೆಸ್ ಅನ್ಯಾಯ ಎಸಗಿತ್ತು, ಹಾಗೆಯೇ ಸಲ್ಮಾನ್ ರಷ್ದಿಯ 'ಸಟಾನಿಕ್ ವರ್ಸಸ್' ಪುಸ್ತಕವನ್ನು ಬ್ಯಾನ್ ಮಾಡಿತ್ತು. ಸಂವಿಧಾನ ರಚನೆಗೊಳ್ಳುತ್ತಿದ್ದಾಗ ಹಿಂದೂ ಪುರುಷರ ಒತ್ತಾಯಕ್ಕೆ ಮಣಿದು ಅಂಬೇಡ್ಕರರು ಮಂಡಿಸಿದ್ದ ಹಿಂದೂ ಕೋಡ್ ಬಿಲ್ ನೆಲಕಚ್ಚುವಂತೆ ಮಾಡಿದ್ದ ಕಾಂಗ್ರೆಸ್ ಅದೇ ಮೂಲಭೂತ ಹಿಂದೂಗಳನ್ನು ತೃಪ್ತಿಪಡಿಸಲು ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿಯ ಬಾಗಿಲುಗಳನ್ನು ತೆರೆಸಿ ಅಲ್ಲಿ ಚೆಡ್ಡಿಗಳು ಶಿಲಾನ್ಯಾಸ ಮಾಡಲು ಅನುವು ಮಾಡಿಕೊಟ್ಟಿತ್ತು, ಈಶಾನ್ಯ ಭಾರತದಲ್ಲಿ ಪ್ರತ್ಯೇಕತೆಯ ಕೂಗು ಎದ್ದಾಗ ಬಂಡುಕೋರರನ್ನು ಕೊಂದುಹಾಕಲು ಆರ್ಮ್ಡ್ ಫೋರ್ಸಸ್ ಸ್ಪೆಷಲ್ ಪವರ್ಸ್ ಆಕ್ಟ್ ಅನ್ನು ಜಾರಿ ಮಾಡಿದ್ದೂ ಕಾಂಗ್ರೆಸ್ ಸರ್ಕಾರವೇ. ಪಂಜಾಬಿನಲ್ಲಿ ಇಂದಿರಾ ಗಾಂಧಿ ಮಾಡಿದ ಕುತಂತ್ರಕ್ಕೆ ತನ್ನ ಪ್ರಾಣವನ್ನೇ ಕೊಡಬೇಕಾಯಿತು. ಶ್ರೀಲಂಕಾಗೆ ಭಾರತದ ಸೈನ್ಯವನ್ನು ಕಳುಹಿಸಿದ್ದಕ್ಕೆ ರಾಜೀವ್ ಗಾಂಧಿಯೂ ತನ್ನ ಪ್ರಾಣವನ್ನು ತೆರಬೇಕಾಯಿತು. ಜೊತೆಗೆ ಕೋಮು ಗಲಭೆಗಳು ನಡೆದಾಗ ಕಾಂಗ್ರೆಸ್ ನಿಷ್ಕ್ರಿಯವಾಗಿತ್ತು, ಅಲ್ಪಸಂಖ್ಯಾತರಿಗೆ ಅನ್ಯಾಯವಾದಾಗ ಕಣ್ಣುಮುಚ್ಚಿ ಕೂತಿತ್ತು, ಮಹಿಳೆಯರ, ದಲಿತರ ದಮನವಾದಾಗ ತೆಪ್ಪಗಿತ್ತು, ಇದೆಲ್ಲದರ ಮಧ್ಯೆ ಹಲವಾರು ಭ್ರಷ್ಟಾಚಾರಗಳಲ್ಲಿ ಮುಳುಗಿಹೋಗಿತ್ತು. ಕಾಂಗ್ರೆಸ್ ಪಕ್ಷದ ಇಂತಹ ನಡವಳಿಕೆಗಳ ಸರಮಾಲೆಯಿಂದಾಗಿಯೇ ಇವತ್ತು ನಮ್ಮ ದೇಶ ಹಿಂದೂಕೋಮುವಾದಿಗಳ ಸರ್ಕಾರದಡಿ ನರಳುವಂತಹ ದುರಂತಕ್ಕೆ ಬಂದುನಿಂತಿದೆ. ಬಿಜೆಪಿ ಇವತ್ತು ಬಹುಮತ ಗಳಿಸಿದ್ದರೆ ಅದಕ್ಕೆ ಕಾರಣ ಅದರ ಸಿದ್ಧಾಂತಕ್ಕೆ ಭಾರತೀಯರ ಒಪ್ಪಿಗೆ ಇದೆ ಎಂಬುದಲ್ಲ, ಬದಲಾಗಿ ಭಾರತೀಯರಿಗೆ ಕಾಂಗ್ರೆಸ್ ಪಕ್ಷದ ಎಲ್ಲಾ ವೈಫಲ್ಯಗಳಿಂದ ರೋಸಿಹೋಗಿತ್ತು ಎಂಬುದೇ ಪ್ರಮುಖ ಕಾರಣ.

ಈಗ 1984ರ ಸಿಖ್ಖರ ಮಾರಣಹೋಮಕ್ಕೆ ಕಾರಣಗಳು ಯಾವುದು ಎಂದು ನೋಡೋಣ. ಪಂಜಾಬಿನಲ್ಲಿ ಅಕಾಲಿದಳದ ವಿರುದ್ಧ ಇಂದಿರಾ ಗಾಂಧಿ ಉಗ್ರಗಾಮಿ ಸಿಖ್ಖರನ್ನು ಎತ್ತಿಕಟ್ಟಿದರು. ಕೊನೆಗೆ ಅದು ಭಿಂದ್ರೇನ್‌ವಾಲಾ ಎಂಬ ಹುಚ್ಚನ ರೂಪ ತಾಳಿತು. ಪ್ರತ್ಯೇಕ ಖಲಿಸ್ತಾನಕ್ಕಾಗಿ ಕೂಗು ಮತ್ತು ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾದವು. ಅವುಗಳಿಗೆ ಕೇಂದ್ರಸ್ಥಳವಾಗಿದ್ದೇ ಸಿಖ್ಖರ ಪುಣ್ಯ ಸ್ಥಳವಾದ ಸ್ವರ್ಣಮಂದಿರ. ಆಗ ಪ್ರಧಾನಿ ಇಂದಿರಾ ಗಾಂಧಿ ಸ್ವರ್ಣಮಂದಿರಕ್ಕೇ ಸೈನ್ಯವನ್ನು ನುಗ್ಗಿಸಿ ಭಿಂದ್ರೇನ್‌ವಾಲಾನನ್ನು ಕೊಂದು ಹಾಕಿಸಿದರು. ಆಗ ಬಹುತೇಕ ಸಿಖ್ಖರು ತಮ್ಮ ಪುಣ್ಯಸ್ಥಳ ಅಪವಿತ್ರಗೊಂಡಿತು ಎಂದು ಆಕ್ರೋಶಗೊಂಡಿದ್ದರು. ಅಂಥ ಆಕ್ರೋಶವನ್ನು ಹೊಂದಿದ್ದ ಸತ್ವಂತ್ ಸಿಂಗ್ ಮತ್ತು ಬಿಯಾಂತ್ ಸಿಂಗ್ ಎಂಬ ತಮ್ಮ ಇಬ್ಬರು ಆತ್ಮರಕ್ಷಕರಿಂದಲೇ ಇಂದಿರಾ ಹತರಾದರು.

ಇಂದಿರಾ ಗಾಂಧಿ ಹತ್ಯೆಯಾದ ನಂತರ ದೆಹಲಿ ಸಿಖ್ಖರ ವಿರುದ್ಧದ ಗಲಭೆಗೆ ಸಾಕ್ಷಿಯಾಯಿತು. ಹಲವರ ಪ್ರಕಾರ ಹಲವು ದಿನಗಳ ಕಾಲ ನಡೆದ ಆ ಗಲಭೆಯಲ್ಲಿ ಸುಮಾರು ಮೂರು ಸಾವಿರ ಜನರು ತಮ್ಮ ಪ್ರಾಣವನ್ನು ಕಳೆದುಕೊಂಡರು. ಆ ಗಲಭೆಯಲ್ಲಿ ಹಲವಾರು ಕಾಂಗ್ರೆಸ್ ನಾಯಕರ ಪಾತ್ರವೂ ಇತ್ತು. ಸಜ್ಜನ್ ಕುಮಾರ್, ಲಲಿತ್ ಮಕೆನ್, ಜಗದೀಶ್ ಟೈಟ್ಲರ್, ಎಚ್.ಕೆ.ಎಲ್.ಭಗತ್ ಅವರುಗಳು ಗಲಭೆಕೋರರನ್ನು ಪ್ರಚೋದಿಸಿದ್ದರು, ಹಣ ಕೊಟ್ಟಿದ್ದರು, ಕುಡಿಯಲು ಗುಂಡು ಪೂರೈಸಿದ್ದರು ಎಂಬ ಆರೋಪಗಳು ಕೇಳಿಬಂದಿದ್ದವು. ಈ ಕಾಂಗ್ರೆಸ್ ನಾಯಕರೊಂದಿಗೆ ದೆಹಲಿ ಪೊಲೀಸರೂ ಕೈಜೋಡಿಸಿದ್ದರು ಎಂದು ಆರೋಪಿಸಲಾಗಿತ್ತು. ಗಲಭೆಯಾದದ್ದು ಎಷ್ಟು ಖಂಡನಾರ್ಹವೋ ಅಷ್ಟೇ ಮುಖ್ಯವಾದದ್ದು ಆಮೇಲೆ ಏನಾಯಿತು ಎಂಬುದು.

ಆ ಗಲಭೆಯಾದ ನಂತರ ಸಜ್ಜನ್ ಕುಮಾರ್‌ನನ್ನು ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ನಿರ್ಲಕ್ಷಿಸಿತು. ಆತನ ವಿರುದ್ಧ ಇದ್ದ ಆರೋಪಗಳನ್ನು ಕೆಳಗಿನ ನ್ಯಾಯಾಲಯವು ಖುಲಾಸೆಗೊಳಿಸಿದ್ದರೂ ಅದಿನ್ನೂ ದೆಹಲಿ ಹೈಕೋರ್ಟ್ ಮುಂದಿದೆ.

ಇನ್ನು ಲಲಿತ್ ಮಕೆನ್ ಮತ್ತು ಆತನ ಪತ್ನಿ ಗೀತಾಂಜಲಿಯನ್ನು ಹಲವು ಸಿಖ್ ಉಗ್ರರು 1985ರಲ್ಲಿ ಕೊಂದು ಹಾಕಿದರು. 1980ರ ದಶಕದಲ್ಲಿ ಎಚ್.ಕೆ.ಎಲ್.ಭಗತ್ ದೆಹಲಿಯಲ್ಲಿ ಅಪಾರ ಜನಪ್ರಿಯತೆ ಹೊಂದಿದ್ದ ಕಾಂಗ್ರೆಸ್ ನಾಯಕ. ಆದರೆ 1984 ಗಲಭೆಯ ನಂತರ ಆತನನ್ನೂ ಕಾಂಗ್ರೆಸ್ ದೂರ ಇಟ್ಟಿತು. ಆಮೇಲೆ ಭಗತ್‌ಗೆ ಜನರ ಮಧ್ಯೆಯಾಗಲಿ, ಕಾಂಗ್ರೆಸ್ ಪಕ್ಷದಲ್ಲಾಗಲಿ ಯಾವ ಸ್ಥಾನಮಾನವೂ ಸಿಗದೆ ಆತನ ರಾಜಕೀಯ ಬದುಕೇ ಅಂತ್ಯಗೊಂಡಿತು. ಜಗದೀಶ್ ಟೈಟ್ಲರ್ ವಿರುದ್ಧದ ಸಾಕ್ಷಿಗಳು "ಅಷ್ಟು ಗಟ್ಟಿಯಾಗಿಲ್ಲ" ಎಂದು ನ್ಯಾಯಮೂರ್ತಿ ನಾನಾವತಿ ಅವರೇ ಹೇಳಿದ್ದಾರೆ. ಮೊದಮೊದಲು ಕಾಂಗ್ರೆಸ್ ಪಕ್ಷ ಟೈಟ್ಲರ್ ಜೊತೆ ನಿಂತಿತ್ತಾದರೂ ಆಮೇಲೆ ಆತನನ್ನು ಮೊದಲ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಸಚಿವ ಸ್ಥಾನದಿಂದ ಇಳಿಸಿತಲ್ಲದೆ ಆನಂತರದ ಚುನಾವಣೆಯಲ್ಲಿ ಆತನಿಗೆ ಟಿಕೆಟ್ ನೀಡಲೂ ನಿರಾಕರಿಸಿತು.

ಜೊತೆಗೆ, 1984ರ ಸಿಖ್ ಗಲಭೆಗೆ ಸ್ವತಃ ಮನಮೋಹನ್ ಸಿಂಗ್ ಮತ್ತು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ (ಆ ಗಲಭೆಯಲ್ಲಿ ಇವರ ಪಾತ್ರ ಇರದಿದ್ದರೂ) ಹಲವಾರು ಬಾರಿ ಸಾರ್ವಜನಿಕವಾಗಿ ಕ್ಷಮೆಯಾಚಿಸಿದರು. ಅಷ್ಟೇ ಅಲ್ಲ, ಸೋನಿಯಾ ಗಾಂಧಿಗೆ ಪ್ರಧಾನಿ ಆಗುವ ಅವಕಾಶ ಒದಗಿಬಂದಾಗಲೂ ಅವರು ತಮ್ಮ 'ಒಳದನಿ'ಗೆ ಕಿವಿಗೊಟ್ಟು ಸಿಖ್ ಸಮುದಾಯದ ಮನಮೋಹನ್ ಸಿಂಗ್ ಅವರನ್ನೇ ಪ್ರಧಾನಿ ಸ್ಥಾನದಲ್ಲಿ ಕೂರಿಸಿದರು.

1984ರ ಗಲಭೆಯಲ್ಲಿ ಸಿಖ್ಖರ ಮಾರಣಹೋಮ ನಡೆದದ್ದು ನಿಜವಾದರೂ ಆನಂತರದ ದಿನಗಳಲ್ಲಿ ಕಾಂಗ್ರೆಸ್ ಸಿಖ್ಖರ ವಿರುದ್ಧದ ರಾಜಕೀಯ ಮಾಡಿಕೊಂಡು ಬಂದಿಲ್ಲ. ಸಿಖ್ಖರೂ ಕಾಂಗ್ರೆಸ್ ಪಕ್ಷವನ್ನು ತಮ್ಮ ವಿರೋಧಿ ಪಕ್ಷ ಎಂದೇನು ಪರಿಗಣಿಸಿಲ್ಲ. ಬದಲಾಗಿ ಪಂಜಾಬ್‌ನ ವಿಧಾನಸಭಾ ಚುನಾವಣೆಯಲ್ಲಿ ಎರಡು ಬಾರಿ (1992 ಮತ್ತು 2002ರಲ್ಲಿ) ಸಿಖ್ಖರು ಕಾಂಗ್ರೆಸ್ ಪಕ್ಷವನ್ನೇ ಗೆಲ್ಲಿಸಿದ್ದಾರೆ.

ಈಗ 2002ರ ಗುಜರಾತ್ ಹತ್ಯಾಕಾಂಡಕ್ಕೆ ಬರೋಣ. 2001 ರಲ್ಲಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದ ಕೇಶುಭಾಯ್ ಪಟೇಲರ ಆರೋಗ್ಯ ಕೈಕೊಟ್ಟಿತು. ಅದಕ್ಕೂ ಮುನ್ನ ಭ್ರಷ್ಟಾಚಾರದ ಹಗರಣಗಳು ಸದ್ದು ಮಾಡಿದ್ದವಲ್ಲದೆ, ಉಪಚುನಾವಣೆಯಲ್ಲಿ ಬಿಜೆಪಿ ಸೋಲುಗಳನ್ನು ಕಂಡಿತ್ತು. ಆಗ ಬಿಜೆಪಿಯ ಹೈಕಮಾಂಡ್ ಕೇಶುಭಾಯ್ ಪಟೇಲರ ಸ್ಥಾನಕ್ಕೆ ತಂದು ಕೂರಿಸಿದ್ದು ಮೋದಿಯನ್ನು. ಅಲ್ಲಿಯತನಕ ಯಾವ ಚುನಾವಣೆಯನ್ನೂ ಎದುರಿಸದಿದ್ದ ಮೋದಿಯ ಆಡಳಿತ ಶುರುವಾದನಂತರವೂ ಬಿಜೆಪಿಗೆ ಹಿನ್ನಡೆಗಳಾದವು. ಪಂಚಾಯತಿ ಚುನಾವಣೆಯಲ್ಲೂ ಬಿಜೆಪಿ ಮಣ್ಣು ಮುಕ್ಕಿತು.

ಆಗ ನಡೆದದ್ದೇ ಗೋಧ್ರಾ ರೈಲು ದುರಂತ. ಈಗಲೂ ಈ ದುರಂತಕ್ಕೆ ಕಾರಣ ಆದವರು ಯಾರು ಎಂಬುದು ನಿಗೂಢವಾಗಿದೆ. ಆ ದುರಂತದಲ್ಲಿ ಅಸುನೀಗಿದ 56 ಜನರ ಸುಟ್ಟ ದೇಹಗಳನ್ನು ಅಕ್ರಮವಾಗಿ ವಿಶ್ವ ಹಿಂದೂ ಪರಿಷತ್ತಿಗೆ ನೀಡಿದ್ದು ಮೋದಿ. ಜೊತೆಗೆ ಆ ಶವಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಮೂಲಕ ಹಿಂದೂಗಳು ಮುಸಲ್ಮಾನರ ವಿರುದ್ಧ ಆಕ್ರೋಶಗೊಳ್ಳುವಂತೆ ಮಾಡಿದ್ದು, ಅವರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುವಾಗ ಅಡ್ಡಿಬರಬಾರದೆಂದು ಪೊಲೀಸರಿಗೆ ಆದೇಶಿಸಿದ್ದೂ ಮೋದಿಯೇ. ಜತೆಗೆ ಆರೆಸ್ಸೆಸ್, ಬಿಜೆಪಿ, ಭಜರಂಗದಳ ಇತ್ಯಾದಿ ಚೆಡ್ಡಿಗಳ ಗೂಂಡಾಗಳನ್ನು ಕಟ್ಟಿಕೊಂಡು ಮುಸಲ್ಮಾನರ ವಿರುದ್ಧ ಚೆಡ್ಡಿಗಳ ನಾಯಕರು ಗಲಭೆ ಮಾಡಿದಾಗ ಸುಮ್ಮನಿದ್ದದ್ದೂ ಮೋದಿಯೇ. ಆ ಗಲಭೆಯಲ್ಲೂ ಸುಮಾರು ಮೂರು ಸಾವಿರ ಜನರು ತಮ್ಮ ಪ್ರಾಣ ಕಳೆದುಕೊಂಡರು.

ಈಗ ಗುಜರಾತ್ ಗಲಭೆಯ ನಂತರದ ವಿದ್ಯಮಾನಗಳನ್ನು ನೋಡೋಣ. ಗಲಭೆಯಿಂದಾಗಿ ನಿರಾಶ್ರಿತರಾದವರಿಗೆ ಮೋದಿ ಸರ್ಕಾರ ನಯಾಪೈಸೆಯ ನೆರವು ನೀಡುವುದಿರಲಿ, ನಿರಾಶ್ರಿತರ ಶಿಬಿರಗಳನ್ನು 'ಮಕ್ಕಳನ್ನು ಹುಟ್ಟಿಸುವ ಕಾರ್ಖಾನೆಗಳು' ಎಂದು ಸ್ವತಃ ಮೋದಿ ಜರೆದಿದ್ದ. ಆಮೇಲೆ ತಾನು 'ಹಿಂದೂ ಹೃದಯ ಸಾಮ್ರಾಟ' ಎಂದು ಪೋಸು ಕೊಟ್ಟು ಚುನಾವಣೆಗೆ ಮುಂದಾದ. ಆ ಚುನಾವಣಾ ಪ್ರಚಾರದಲ್ಲಿ ಮುಸಲ್ಮಾನರನ್ನು 'ನಾಲ್ವರು ಪತ್ನಿಯರನ್ನು ಕಟ್ಟಿಕೊಂಡು 25 ಮಕ್ಕಳನ್ನು ಹುಟ್ಟಿಸುವವರು' ಎಂದು ಲೇವಡಿ ಮಾಡಿದ. ಮುಸಲ್ಮಾನರಿಗೆ ತಕ್ಕ ಪಾಠ ಕಲಿಸಿದ ನಾಯಕ ಎಂದು ತನ್ನನ್ನು ಬಿಂಬಿಸಿಕೊಂಡ. ಹೀಗೆ ಅಲ್ಪಸಂಖ್ಯಾತರ ವಿರುದ್ಧದ ಆಂದೋಲನ ಮಾಡಿಯೇ ಮೋದಿ 2002 ಚುನಾವಣೆಯನ್ನು ಗೆದ್ದ. ಅರ್ಥಾತ್ 2002ರ ಕೋಮು ಗಲಭೆ ನಡೆಯದಿದ್ದರೆ ಮೋದಿ ಆಮೇಲೆ ಪ್ರಧಾನಿ ಆಗುವುದಿರಲಿ ಆ ಚುನಾವಣೆಯಲ್ಲಿ ಗೆಲ್ಲುವುದೇ ಸಾಧ್ಯವಿರಲಿಲ್ಲ.

ಅಂದಹಾಗೆ, ಇಂದಿರಾ ಗಾಂಧಿಯ ಹತ್ಯೆಯ ನಂತರ ರಾಜೀವ್ ಗಾಂಧಿ ಬಹುಮತದಿಂದ ಗೆದ್ದರು. ಆದರೆ ಅದಕ್ಕೆ ಕಾರಣವಾಗಿದ್ದು ಸಿಖ್ಖರ ವಿರುದ್ಧದ ಕೋಪವಲ್ಲ, ಬದಲಾಗಿ ಇಂದಿರಾ ಸಾವಿನ ಬಗೆಗೆ ಜನರಲ್ಲಿದ್ದ ಅನುಕಂಪದ ಅಲೆ. ಆದರೆ ಮೋದಿ ಗೆಲುವಿನ ಹಿಂದೆ ಇದ್ದದ್ದು ಅನುಕಂಪವಲ್ಲ, ಬದಲಾಗಿ ಕೋಮುದ್ವೇಷದ ವಿಷ.

ಮೋದಿ ಗೆದ್ದ ಮೇಲೆ ಮುಸಲ್ಮಾನರ ಮೇಲೆ ದಾಳಿ ನಡೆಸಿದ್ದ ಮಾಯಾ ಕೊಡ್ನಾನಿ ಎಂಬ ಬಿಜೆಪಿ ಶಾಸಕಿಯನ್ನು ತನ್ನ ಮಂತ್ರಿಮಂಡಲಕ್ಕೆ ಸೇರಿಸಿಕೊಂಡ. ಗಲಭೆಯಲ್ಲಿ ಭಾಗಿಯಾಗಿದ್ದ ಬಾಬು ಭಜರಂಗಿ ಎಂಬಾತನಿಗೆ ರಕ್ಷಣೆ ಕೊಟ್ಟ. ನ್ಯಾಯಾಲಯದಲ್ಲಿ ಮುಸಲ್ಮಾನರು ಸಾಕ್ಷಿ ಹೇಳದೆ ಇರುವಂತೆ ಅವರನ್ನು ಬೆದರಿಸಿದ. ಗಲಭೆಯ ವಿರುದ್ಧ ದನಿ ಎತ್ತಿದ್ದ ತೀಸ್ತಾ ಸೆಟ್ಲವಾಡ್ ತರಹದ ಮಾನವ ಹಕ್ಕು ಹೋರಾಟಗಾರರ ವಿರುದ್ಧ ಪೊಲೀಸರನ್ನು, ಅಧಿಕಾರಿಗಳನ್ನು ಛೂಬಿಟ್ಟ.


ಕೊನೆಗೂ ಮಾಯಾ ಕೊಡ್ನಾನಿ ಮತ್ತು ಬಾಬು ಭಜರಂಗಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದ್ದು ಮೋದಿ ಸರ್ಕಾರ ಅವರಿಬ್ಬರ ವಿರುದ್ಧ ನಿಂತಿತು ಎಂಬ ಕಾರಣಕ್ಕಲ್ಲ, ಬದಲಾಗಿ ತೀಸ್ತಾ ಸೆಟ್ಲವಾಡ್ ಯಾವ ಬೆದರಿಕೆಯನ್ನೂ ಲೆಕ್ಕಿಸದೆ ಗಟ್ಟಿಯಾಗಿ ನಿಂತಿದ್ದರಿಂದ. ಆದರೂ, ಮೋದಿ ಪ್ರಧಾನಿ ಆದ ಮೇಲೆ ಅವರಿಬ್ಬರೂ ತಾತ್ಕಾಲಿಕ ಜಾಮೀನಿನ ಮೇಲೆ ಹೆಚ್ಚುಕಾಲ ಜೈಲಿನಿಂದ ಹೊರಗೇ ಕಳೆಯುತ್ತಿದ್ದಾರೆ.


1984ರಲ್ಲಿ ಆದದ್ದಕ್ಕೆ ಸಿಂಗ್ ಮತ್ತು ಸೋನಿಯಾ ಕ್ಷಮೆ ಯಾಚಿಸಿರುವಂತೆ ಮೋದಿ ಕಿಂಚಿತ್ತೂ ಪಾಪಪ್ರಜ್ಞೆ ತೋರಿಲ್ಲ, ಬದಲಾಗಿ ಗಲಭೆಯಲ್ಲಿ ಸತ್ತವರನ್ನು ಕಾರಿನ ಚಕ್ರಗಳಿಗೆ ಸಿಕ್ಕಿಹಾಕಿಕೊಂಡು ಸಾಯುವ ಕುನ್ನಿಗಳೊಂದಿಗೆ ಹೋಲಿಸುವ ದುಷ್ಟತನವನ್ನು ಪ್ರದರ್ಶಿಸಿದ.


ಗುಜರಾತಿನ ಜನರಿಗೆ ಮಂಕುಬೂದಿ ಎರಚಿ ಮುಖ್ಯಮಂತ್ರಿಯಾಗಿದ್ದ ಮೋದಿ ಆನಂತರ 'ಅಭಿವೃದ್ಧಿ' ಎಂಬ 'ಜುಮ್ಲಾ' ಮಾಡಿ ಪ್ರಧಾನಿ ಆದದ್ದು ಎಲ್ಲರಿಗೂ ಗೊತ್ತಿದೆ. ಈತ ಅಧಿಕಾರಕ್ಕೆ ಬಂದನಂತರ ದನದ ಮಾಂಸ ತಿಂದರು ಎಂಬ ಸಂಶಯದ ಮೇಲೆ ದಾದ್ರಿಯಲ್ಲಿ ಒಬ್ಬರನ್ನು ಕೊಂದು ಹಾಕಲಾಯಿತು. ವಿದ್ವಾಂಸ ಎಂ.ಎಂ.ಕಲಬುರ್ಗಿಯ ಕೊಲೆಯಾಯಿತು. ಮುಸಲ್ಮಾನರನ್ನು ಬಿಜೆಪಿ ಸಂಸದೆ 'ಹರಾಮ್‌ಜಾದಾಗಳು' ಎಂದು ಕರೆದಳು. ದನದ ಮಾಂಸ ತಿನ್ನುವವರು ಪಾಕಿಸ್ತಾನಕ್ಕೆ ಹೋಗಿ ಎಂದು ಸಂಸದ ಆದಿತ್ಯನಾಥ್ ಮತ್ತು ಮಂತ್ರಿ ಮುಖ್ತರ್ ಅಬ್ಬಾಸ್ ನಖ್ವಿ ಅಬ್ಬರಿಸಿದರು. ಮುಸಲ್ಮಾನ ಎಂಬ ಕಾರಣಕ್ಕೆ ಪುಣೆಯಲ್ಲಿ ಒಬ್ಬ ಯುವಕನನ್ನು ಕೊಂದರು. ಬುದ್ಧಿಜೀವಿಗಳನ್ನು ಲೇವಡಿ ಮಾಡಿದರು. ಅಂಬೇಡ್ಕರ್ ಚಿಂತನೆ ಮತ್ತು ಎಡಪಂಥೀಯ ನಿಲುವನ್ನು ಹೊಂದಿರುವ ವಿದ್ಯಾರ್ಥಿಗಳನ್ನು ರಾಷ್ಟ್ರದ್ರೋಹಿಗಳು ಎಂದು ಬಣ್ಣಿಸಿ ಸಾವಿಗೆ ದೂಡಿದರು ಮತ್ತು ಜೈಲಿಗೆ ಹಾಕಿದರು. ಸೋನಿ ಸೋರಿ ಎಂಬ ಆದಿವಾಸಿ ಮಹಿಳೆಯ ಮುಖಕ್ಕೆ ಆ್ಯಸಿಡ್ ಎರಚಿದರು. ಈಗ ಛತ್ತೀಸಗಢದಲ್ಲಿ ಮಾನವ ಹಕ್ಕು ಹೋರಾಟಗಾರರು, ವಕೀಲರು, ಪತ್ರಕರ್ತರನ್ನು ಬಂಧಿಸಲಾಗುತ್ತಿದೆ. ನಿನ್ನೆ ದೆಹಲಿಯಲ್ಲಿ ಮೂವರು ಮುಸಲ್ಮಾನ ವಿದ್ಯಾರ್ಥಿಗಳು 'ಭಾರತ್ ಮಾತಾ ಕೀ ಜೈ' ಎನ್ನಲಿಲ್ಲ ಎಂಬ ಕಾರಣಕ್ಕೆ ಬಡಿಯಲಾಗಿದೆ. ಒಟ್ಟಾರೆ ಮೋದಿ ಮತ್ತಾತನ ಬಳಗ ಭಾರತವನ್ನೇ ನಾಶ ಮಾಡುತ್ತಿದೆ.

ಕನ್ಹಯ್ಯ ಮೊನ್ನೆ ದೆಹಲಿಯಲ್ಲಿ ಮಾತನಾಡುತ್ತಾ "ತುರ್ತುಪರಿಸ್ಥಿತಿಗೂ, ಫ್ಯಾಸಿಸಂಗೂ ವ್ಯತ್ಯಾಸ ಇದೆ. ತುರ್ತುಪರಿಸ್ಥಿತಿಯಲ್ಲಿ ಒಂದು ಪಕ್ಷದ ಗೂಂಡಾಗಳು ಗೂಂಡಾಗಿರಿಯಲ್ಲಿ ತೊಡಗಿದರೆ, ಫ್ಯಾಸಿಸಂನಲ್ಲಿ ಇಡೀ ಆಡಳಿತಾಂಗ ಯಂತ್ರವೇ ಗೂಂಡಾಗಿರಿಯಲ್ಲಿ ಭಾಗಿಯಾಗಿರುತ್ತೆ. 2002ರ ದಂಗೆಗೂ 1984ರ ದಂಗೆಗೂ ವ್ಯತ್ಯಾಸ ಇರುವುದೇ ಇಲ್ಲಿ" ಎಂದಿದ್ದಾನೆ. ಅಷ್ಟೇ ಅಲ್ಲ, "ನಾವು ಇಂದು ಯಾವ ಒಂದು ಪಕ್ಷಕ್ಕೆ ಬದ್ಧರಾಗಿರದೆ, ಪ್ರಜಾತಂತ್ರದಲ್ಲಿ ನಂಬಿಕೆ ಇಟ್ಟು ಎಲ್ಲರೂ ಜತೆಗೂಡಿ ಸಂವಿಧಾನದ ಆಶಯಗಳಿಗಾಗಿ ಹೋರಾಡಬೇಕಿದೆ" ಎಂದಿದ್ದಾನೆ.


ಆತ ಹೇಳಿರುವುದರಲ್ಲಿ ತಪ್ಪೇನಿದೆ?







ಶಿರಸಿ: ಮುನ್ಸಿಪಾಲ್ಟಿ ಗದ್ದುಗೆ ಭಾಗ್ಯ ಯಾರಿಗೆ?




ಕಾಗೇರಿ ಭೀಮಣ್ಣ ನಾಯ್ಕ್ ದೇಶಪಾಂಡೆ

ಶಿರಸಿ ನಗರಸಭೆ ಪಡಸಾಲೆಯಲ್ಲೀಗ ಗದ್ದುಗೆ ಗುದ್ದಾಟ! ಉತ್ತರ ಕನ್ನಡದ ರಾಜಕಾರಣದ ಶಕ್ತಿ ಕೇಂದ್ರ ಈ ಶಿರಸಿ; ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ್, ಆಳಿದುಳಿದ ಬಿಜೆಪಿಯ ಏಕೈಕ ಶಾಸಕ ಕಾಗೇರಿ ಮಾಣಿ, ಆತನ ಆಜನ್ಮ ವೈರಿ ಸಂಸದ ಅನಂತ್ಕುಮಾಣಿಗಳ ತವರೂರು. ಇಂತಿಪ್ಪ ಶಿರಸಿಯಲ್ಲೀಗಷ್ಟೇ ದಲಿತನ ವರಿಸಿದ ಹಾರುವ ಹೆಣ್ಣೆಂಬ ಪ್ರತೀತಿಯ ಮಾರಿಕಾಂಬೆಯ ಸುಪ್ರಸಿದ್ಧ ಜಾತ್ರೆ ಮುಗಿದಿದೆ. ಬೆನ್ನಿಗೇ ಶುರುವಾಗಿದೆ ಮುನ್ಸಿಪಾಲ್ಟಿ ಅಧಿಪತಿಗಳ ಆಯ್ಕೆಯ ಕದನ ಕುತೂಹಲ!

ಕಾಂಗ್ರೆಸ್ ಪಾರ್ಟಿಗೆ ಮುನ್ಸಿಪಾಲ್ಟಿಯಲ್ಲಿ ಭರ್ಜರಿ ಬಹುಮತವಿದೆ. ಮಜಾ ಎಂದರೆ, ಈ ಭಾರಕ್ಕೆ ಆ ಪಕ್ಷ ಕುಸಿದು ಕುಂತಿದೆ. ಬರೋಬ್ಬರಿ ಎರಡಾಗಿ ಒಡೆದಿರುವ ನಗರಸಭೆಯ ಕಾಂಗ್ರೆಸ್ ಸದಸ್ಯರು ಅಧ್ಯಕ್ಷ ಉಪಾಧ್ಯಕ್ಷ ಗಾದಿಗೆ ಕಸರತ್ತು ನಡೆಸುತ್ತಿದ್ದಾರೆ. ಆಳುವ ಕಾಂಗ್ರೆಸ್‌ನ ಒಳಸುಳಿಯ ದುರ್ಲಾಭವೇನಾದರೂ ತಮಗೆ ದಕ್ಕೀತೇ ಎಂಬ ದೂ(ದು)ರಾಲೋಚನೆಯಲ್ಲಿ ಬಿಜೆಪಿ ಭೂಪರು ಮನಸ್ಸಿನಲ್ಲೇ ಮಂಡಿಗೆ ಮುರಿಯುತ್ತಿದ್ದಾರೆ. ಶಿರಸಿ ಕಾಂಗ್ರೆಸ್‌ಗೆ ಶಾಂತಾರಾಮ ಹೆಗಡೆ, ಭೀಮಣ್ಣ ನಾಯ್ಕ್, ನಯಾಪೈಸೆ ಗಾಂವ್ಕರ್‌ನಂಥ ದಂಡಪಿಂಡಗಳೇ ಅಧಿನಾಯಕರು. ಇವರ ಬಗಲಬಚ್ಚಾನಂತಿರುವ ಹಾಲಿ ಅಧ್ಯಕ್ಷ ಶ್ರೀಕಾಂತ ತಾರಿಬಾಗಿಲ್ ಮತ್ತೊಮ್ಮೆ ಅಧಿಕಾರ ಪೀಠ ಏರುವ ಕಸರತ್ತು ನಡೆಸಿದ್ದಾನೆ.

ಪಾಪದ ಪ್ರಾಣಿಯಂತೆ ಸೋಗು ಹಾಕುತ್ತಲೇ ಮುನ್ಸಿಪಾಲ್ಟಿಯಲ್ಲಿ ಸಾಕಷ್ಟು ಗೋಲ್‌ಮಾಲ್ ಮಾಡಿರುವ ಈ ಹಗಲುಗುಡುಕನಿಗೆ ಯಾವ ಕಾರಣಕ್ಕೂ ಮತ್ತೆ ಅಧ್ಯಕ್ಷನಾಗಲು ಬಿಡಬಾರದೆಂಬ



ಶ್ರೀಕಾಂತ್ ಫ್ರಾನ್ಸಿಸ್ ಪ್ರದೀಪ್ ಶೆಟ್ಟಿ ರಮೇಶ್ ದುಬಾಶಿ ಜಗದೀಶ್ ಗೌಡ

ಹಠಕ್ಕೆ ಬಿದ್ದಿದ್ದಾರೆ ಕಾಂಗ್ರೆಸ್‌ನ 10-12 ಕೌನ್ಸಿಲರ್‌ಗಳು. ಈ ಬಣಕ್ಕೆ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಪ್ರದೀಪ್ ಶೆಟ್ಟಿ ಮತ್ತು ಹಾಲಿ ಉಪಾಧ್ಯಕ್ಷ ಲುಕ್ಕು ಯಾನೆ ಫ್ರಾನ್ಸಿಸ್ ನೊರಾನ್ಹಾ ಮುಂದಾಳುಗಳು! ಎರಡೂವರೆ ವರ್ಷದ ಹಿಂದೆ ಶ್ರೀಕಾಂತ್ ತಾರಿಬಾಗಿಲ್ ರಿಯಲ್ ಎಸ್ಟೇಟ್ ಲಾಬಿ ತಂತ್ರಗಾರಿಕೆಯಿಂದ ನಗರಸಭೆ ಕುರ್ಚಿಗೇರಿದಾಗಲೇ ನಾಲ್ಕೈದು ನಿಷ್ಠಾವಂತ ಕಾಂಗ್ರೆಸ್ ಕೌನ್ಸಿಲರ್‌ಗಳು ತಿರುಗಿಬಿದ್ದಿದ್ದರು. ಈ ತಂಡ ತಾರಿಬಾಗಿಲನ ಅಧಿಕಾರಾವಧಿಯ ಉದ್ದಕ್ಕೂ ವಿರೋಧ ಪಕ್ಷದಂತೆಯೇ ಕಾರ್ಯಾಚರಣೆಗೆ ಇಳಿದಿತ್ತು.

ಶಿರಸಿಯ ರಿಯಲ್ ಎಸ್ಟೇಟ್ ಮಾಫಿಯಾದ ಕಣ್ಮಣಿಯಾದ ತಾರಿಬಾಗಿಲ್ ಮತ್ತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ದುಬಾಶಿ ಗಳಸ್ಯಕಂಠಸ್ಯ ದೋಸ್ತಿಗಳು. ದೋನಂಬರ್ ಕಂಟ್ರಾಕ್ಟರ್ ದುಬಾಶಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ ಅತ್ಯಾಪ್ತ ಸಹಚರ. ಇದು 'ಬಂ'ರ ಸಮಾಜವಾದಿ ಪಾರ್ಟಿಯಿಂದ ಅಂಟಿದ ನಂಟು. ಸರ್ಕಾರಿ ಗುತ್ತಿಗೆದಾರಿಕೆ ಜತೆಜತೆಯೇ ರಿಯಲ್ ಎಸ್ಟೇಟ್ ದಂಧೆ ಮಾಡುವ ದುಬಾಶಿಗೆ ಮತ್ತೊಂದು ಅವಧಿಗೆ ಸನ್ಮಿತ್ರ ಶ್ರೀಕಾಂತ ತಾರಿಬಾಗಿಲು ಮುನ್ಸಿಪಾಲ್ಟಿ ಪೀಠದಲ್ಲಿದ್ದರೆ ಸೈಟ್ ದಂಧೆಗೆ ಬಂಪರ್ ಮಾರುಕಟ್ಟೆ ಕುದುರುತ್ತದೆಂಬ ದುರಾಸೆ. ಈ ಜೋಡಿಗೆ ಬೆಂಗಾವಲಾಗಿ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ ನಿಂತಿದ್ದಾನೆ.

ಮುನ್ಸಿಪಾಲ್ಟಿಯ ಎರಡನೇ ಅವಧಿಯ ಅಧ್ಯಕ್ಷ ಮೀಸಲಾತಿ ಶ್ರೀಕಾಂತ ತಾರಿಬಾಗಿಲುಗೆ ಅನುಕೂಲಕರವಾಗಿ ಬಂದಿದೆ. ಇದು ಭೀಮಣ್ಣನ ಪವಾಡ ಎಂಬ ಜೋಕು ಶಿರಸಿಪೇಟೆಯಲ್ಲಿ ಜಗಿದಾಡುತ್ತಿದೆ. ಜಿಲ್ಲಾ ಮಂತ್ರಿ ದೇಶಪಾಂಡೆ ಸಾಹೇಬರಿಂದ ಕರಾಮತ್ತು ಮಾಡಿಸಿ ಭೀಮಣ್ಣ ತನ್ನ ಚೇಲನನ್ನು ಮತ್ತೊಮ್ಮೆ ಅಧ್ಯಕ್ಷ ಸ್ಥಾನದಲ್ಲಿ ಪ್ರತಿಷ್ಠಾಪಿಸಲು 'ಆಟ' ಆಡುತ್ತಿದ್ದಾನೆ! ತಾರಿಬಾಗಿಲು ನಗರಸಭೆ ಅಧಿಪತಿಯಾದರೆ ಸಂತುಷ್ಟರಾಗುವ ರಿಯಲ್ ಎಸ್ಟೇಟ್ ಮಂದಿ ತನ್ನನ್ನು ಎಮ್ಮೆಲ್ಲೆ ಮಾಡುತ್ತಾರೆಂಬುದು ಬೋಗಸ್ ಭೀಮಣ್ಣನ ಲೆಕ್ಕಾಚಾರ. ಇದು ಗೊತ್ತಾಗಿಯೇ ಶಾಂತಾರಾಮ ಹೆಗಡೆ ಬಳಗ ತಮ್ಮ ಗುಲಾಮನೊಬ್ಬನನ್ನು ಮುನ್ಸಿಪಾಲ್ಟಿ ಗದ್ದುಗೆಯಲ್ಲಿ ಕುರಿಸುವ ಸ್ಕೆಚ್ ಒಳಗೊಳಗೇ ಹಾಕುತ್ತಿದ್ದಾರೆ.

ಅಧ್ಯಕ್ಷನಾಗಲು ತಿಪ್ಪರಲಾಗ ಹಾಕುತ್ತಿರುವ ಶ್ರೀಕಾಂತ ತಾರಿಬಾಗಿಲಿನ ಪೂರ್ವಾಶ್ರಮ ಜನತಾದಳ. ಮಾಜಿ ಮಂತ್ರಿ ಪಿ.ಎಸ್. ಜೈವಂತ್ ಮೆರೆದಾಡುತ್ತಿದ್ದ ಕಾಲದಲ್ಲಿ ಆತನ ಶಿಷ್ಯನಾಗಿದ್ದ ತಾರಿಬಾಗಿಲು ಮುನ್ಸಿಪಾಲ್ಟಿ ಅಧ್ಯಕ್ಷನಾಗಿದ್ದ. ಜೈವಂತ್ ಕಾಂಗ್ರೆಸ್ ಪಾಲಾದಾಗ ಆತನ ಹಿಂಬಾಲಿಸಿದ್ದ ತಾರಿಬಾಗಿಲು ಇಲ್ಲೇ ಗಟ್ಟಿಯಾಗಿ ಝೂಂಡಾ ಊರಿಬಿಟ್ಟ. ಕಾಂಗ್ರೆಸ್‌ನಲ್ಲಿ ಏಗಲಾಗದೆ ಜೈವಂತ್ 'ಬಂ' ಬಾಲ ಹಿಡಿದು ಸಮಾಜವಾದಿ ಪಕ್ಷ, ಜನತಾದಳ ಎಂದೆಲ್ಲಾ ಅಂಡಲೆದು ಈಗ ಸುಸ್ತಾಗಿದ್ದಾರೆ. ಶ್ರೀಕಾಂತನ ಉಮೇದಿ ಕಾಂಗ್ರೆಸಲ್ಲಿ ದಿನದಿನವೂ ಜೋರಾಗುತ್ತಿದೆ. ಕಾಂಗ್ರೆಸ್ ಬಾವುಟ ಹಿಡಿದು ಮತ್ತೆ ಮುನ್ಸಿಪಾಲ್ಟಿ ಅಧ್ಯಕ್ಷನಾದ ತಾರಿಬಾಗಿಲಿನ ಆ 'ಸಾಧನೆ' ಹಿಂದೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದುಬಾಶಿಯ ರಿಯಲ್ ಎಸ್ಟೇಟ್ ಮತ್ತು ಕಳಪೆ ಕಂಟ್ರಾಕ್ಟರ್ ಲಾಬಿಯ ಮಾಯೆ ಅಡಗಿತ್ತು!

ಕಳೆದ ಎರಡೂವರೆ ವರ್ಷದ ಶ್ರೀಕಾಂತ ತಾರಿಬಾಗಿಲಿನ ನಗರಸಭೆ ಆಧಿಪತ್ಯದಲ್ಲಿ ಸದ್ದಿಲ್ಲದೆ ಅಕ್ರಮ-ಅವ್ಯವಹಾರ-ಅವಾಂತರ ಆಗಿದೆ. ತಾನೊಬ್ಬ ಸಾಧು ಸ್ವಭಾವದ ಪುಢಾರಿ ಎಂದು ಪೋಸು ಕೊಡುತ್ತಲೇ ತನ್ನ ರಿಯಲ್ ಎಸ್ಟೇಟ್ ಗ್ಯಾಂಗನ್ನು ಕೊಬ್ಬಿಸುವ ತರಲೆ ತಾರಿಬಾಗಿಲು ಮಾಡಿದ್ದಾನೆ. ಮುನ್ಸಿಪಾಲ್ಟಿಯ ಕೊಂಡವಾಡದಲ್ಲಿ ಕೂಡಿಹಾಕಿದ್ದ ಬೀಡಾಡಿ ದನ-ಎತ್ತು-ಎಮ್ಮೆಗಳನ್ನು ಮಾರಿ ತಿಂದ ಆರೋಪಕ್ಕೆ ತುತ್ತಾಗಿರುವ ಈ ಅಧಿಕಪ್ರಸಂಗಿ ಅಧ್ಯಕ್ಷ ಬರೋಬ್ಬರಿ 64 ಲಕ್ಷ ರೂ. ಖರ್ಚು ಮಾಡಿ ಬನವಾಸಿ ರಸ್ತೆಯಿಂದ ಕರಿಗುಂಡಿತನಕ ತಯಾರಿಸಿರುವ ಬೈಪಾಸ್ ರಸ್ತೆಯಿಂದ ಹೆಚ್ಚು ಲಾಭ ಆಗಿರೋದು ರಿಯಲ್ ಎಸ್ಟೇಟ್ ಮಾಫಿಯಾಕ್ಕೆ. ಇದೊಂದು ಅನವಶ್ಯಕ ರಸ್ತೆ ಎಂಬುದು ನಗರಸಭೆಯ ಜನಪರ ಸದಸ್ಯರ ವಾದ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಗೆದ್ದಿರುವ ಒಂದು ಡಜನ್‌ನಷ್ಟು ಲ್ಯಾಂಡ್ ಲಫಡಾ ಮೆಂಬರ್‌ಗಳು ಇದು ಅನಿವಾರ್ಯ ರೋಡ್ ಎಂದು ಬೊಬ್ಬಿರಿಯುತ್ತಿದ್ದಾರೆ.

ಸದ್ರಿ ರಸ್ತೆಯ ಅಕ್ಕಪಕ್ಕದಲ್ಲಿ ತಾರಿಬಾಗಿಲಿನ ರಿಯಲ್ ಎಸ್ಟೇಟ್ ಲೇಔಟ್ ಇದೆ. ಒಂದು ಪಕ್ಕದಲ್ಲಿ 28 ಗುಂಟೆ ಜಾಗವಿದ್ದರೆ ಮತ್ತೊಂದು ಪಕ್ಕದಲ್ಲಿ ಒಂದು ಎಕರೆ ಸೈಟ್ ಇದೆ. ಇಲ್ಲಿಯ ಒಂದು ಗುಂಟೆ ಜಾಗಕ್ಕೆ ಅಬ್ಬಬ್ಬಾ ಎಂದರೆ 3-4 ಲಕ್ಷ ಬೆಲೆಯಿತ್ತು. ಯಾವಾಗ ಮುನ್ಸಿಪಾಲ್ಟಿಯಿಂದ ರಸ್ತೆ, ಚರಂಡಿ, ವಿದ್ಯುತ್ ದೀಪದ ವ್ಯವಸ್ಥೆಯಾಯ್ತೋ ಆಗ, ಒಂದು ಗುಂಟೆಗೆ 8-10 ಲಕ್ಷದ ರೇಟು ಬಂತು. ತಾರಿಬಾಗಿಲುಗೆ ಭರ್ಜರಿ ಲಾಭವಾಯ್ತು ಕಳ್ಳ ಭೂಮಿದಂಧೆಯಲ್ಲಿ! ಇದರಲ್ಲಿ ದುಬಾಶಿಗೂ ಪಾಲು ಸಿಕ್ಕಿತು. ಖೋಟಾ ಕಂಟ್ರಾಕ್ಟರ್‌ಗಳಿಗೂ ಶ್ರೀಕಾಂತ ತಾರಿಬಾಗಿಲೆಂದರೆ ಅಚ್ಚುಮೆಚ್ಚಿನ ಮುನ್ಸಿಪಾಲ್ಟಿ ಪ್ರೆಸಿಡೆಂಟ್ ಸಾಹೇಬ! ಈತ ಗುತ್ತಿಗೆದಾರರಿಗೆ ಅನುಕೂಲವಾಗುವಂತೆಯೇ ಅಧಿಕಾರ ದಂಡ ಚಲಾಯಿಸುತ್ತ ಬಂದಿದ್ದಾನೆ. ಅದೆಂಥ ಕಳಪೆ ಕಾಮಗಾರಿಯೇ ಆಗಿರಲಿ, ಈತ ಗುತ್ತಿಗೆದಾರರಿಗೆ ತೊಂದರೆ ಮಾತ್ರ ಕೊಡದಂಥ ಉದಾರ ಆಡಳಿತಗಾರ. ಹೀಗಾಗಿ ಕಂಟ್ರಾಕ್ಟರ್ಸ್ ಮಾಫಿಯಾ ಮತ್ತೊಂದು ಅವಧಿಗೆ ತಾರಿಬಾಗಿಲನನ್ನು ಅಧ್ಯಕ್ಷನಾಗಿಸಲು ಹಣ ಹಂಚುತ್ತಿರುವ ಸುದ್ದಿಗಳು ಶಿರಸಿಯಲ್ಲಿ ಚಾಲ್ತಿಯಲ್ಲಿವೆ. ಗೆಳೆಯ ದುಬಾಶಿಗೆ ತಲಾ 85 ಲಕ್ಷದ ಎರಡು ವಾಟರ್ ಟ್ಯಾಂಕ್ ಗುತ್ತಿಗೆ ಶ್ರೀಕಾಂತ್ ತಾರಿಬಾಗಿಲು ಕೊಟ್ಟಿದ್ದಾನೆ. ಇದರಲ್ಲಿ ಒಂದು ಪೂರ್ತಿಯಾಗಿದೆ. ಈ ಕಾಮಗಾರಿಯಲ್ಲಿ ಬರೋಬ್ಬರಿ 24 ಲಕ್ಷ ಹೆಚ್ಚುವರಿ ಬಿಲ್ ದುಬಾಶಿ ಪಡೆದಿದ್ದಾನೆ. ಅಂದರೆ 85 ಲಕ್ಷದ ಕಾಮಗಾರಿಗೆ ಒಟ್ಟು 1.9 ಕೋಟಿ ರೂ. ದುಬಾಶಿಗೆ ಸಂದಾಯವಾಗಿದೆ. ಮತ್ತೊಂದು ಟ್ಯಾಂಕ್‌ನಲ್ಲಿ ಇನ್ನೂ ಹೆಚ್ಚು ಗೆಬರುವ ಸಿದ್ಧತೆಯಲ್ಲಿದ್ದಾನಂತೆ ದುಬಾಶಿ. ಹಾಗಂತ ಮುನ್ಸಿಪಾಲ್ಟಿಯ ಎಲ್ಲ ಪಕ್ಷದ ಸದಸ್ಯರೂ ಹೇಳುತ್ತಿದ್ದಾರೆ. ವಿಕಲಚೇತನರ ಹೆಸರಲ್ಲಿ 7 ಲಕ್ಷದ ವಾಹನ 11.5 ಲಕ್ಷಕ್ಕೆ ಖರೀದಿಸಿ ಸ್ವಾಹಾ ಮಾಡಿರುವ ತಾರಿಬಾಗಿಲ್‌ನ ತರಲೆ ಬರದಂತೆ ಉಕ್ಕುತ್ತದೆ!

ಇಂಥ ಕರ್ಮಕಾಂಡಗಳ ತಾರಿಬಾಗಿಲು-ದುಬಾಶಿ-ಭೀಮಣ್ಣನ ತಂಡ ನಿಷ್ಠಾವಂತ-ಅರ್ಹ ಕಾಂಗ್ರೆಸ್ ಕೌನ್ಸಿಲರ್‌ಗಳಿಗೆ ಅನ್ಯಾಯ-ವಂಚನೆ ಮಾಡಿ ನಗರಸಭೆ ಆಡಳಿತದ ಮೇಲೆ ಹಿಡಿತ ಸಾಧಿಸಲು ಹವಣಿಸುತ್ತಿದೆ. ಈ ಗ್ಯಾಂಗಲ್ಲಿ ದುರಹಂಕಾರಿ ಕಮಿಷನರ್ ಮಹೇಂದ್ರಕುಮಾರ್ ಸೇರಿಕೊಂಡಿರುವುದು ಪ್ರತ್ಯೇಕ ಪುರಾಣದಷ್ಟಿದೆ. ತಾರಿಬಾಗಿಲಿನ ತಾಳಕ್ಕೆ ತಕ್ಕಂತೆ ಕುಣಿಯುವ ಕಮೀಷನರ್‌ಗೆ ಶಿರಸಿ ಮುನ್ಸಿಪಾಲಿಟಿ ರಾಜಕಾರಣದ ನಾಡಿಬಡಿತದ ಅರಿವಿದೆ. ಹಿಂದೊಮ್ಮೆ ಇಲ್ಲಿ ಕಮೀಷನರ್ ಆಗಿದ್ದ ಈ ರಸಿಕ ಶಿಖಾಮಣಿಯಿಂದಾಗಿ ಅಂದಿನ ನಗರಸಭೆ ಸದಸ್ಯೆಯೊಬ್ಬಳ ಹೆಸರು ಹಾಳಾಗಿತ್ತು. ಈ ಚಪಲ ಚೆನ್ನಿಗರಾಯ ಕೌನ್ಸಿಲರ್‌ಗಳ ದೌರ್ಬಲ್ಯ ಅರ್ಥಮಾಡಿಕೊಂಡು ಹಣ ಮಾಡುವ ಕಲೆ ಕರಗತ ಮಾಡಿಕೊಂಡಿದ್ದಾನೆ. ಕಾಂಗ್ರೆಸ್ ಹೈಕಮಾಂಡ್ ಕೃಪಾಕಟಾಕ್ಷ ಪಡೆದಿರುವ ಈ ದಗಲುಬಾಜಿಗಳ ಬಣಕ್ಕೆ ಪ್ರದೀಪ್ ಶೆಟ್ಟಿ-ಲುಕ್ಕು ಬಂಡಾಯ ಬಳಗ ಪ್ರಬಲ ಪ್ರತಿರೋಧ ಒಡ್ಡುತ್ತಿದೆ!

ನಗರಸಭೆಯ ಸದಸ್ಯರ ಬಲಾಬಲ ನೋಡಿದರೆ ಕಾಂಗ್ರೆಸ್ ನಿರಾಯಾಸವಾಗಿ ಅಧಿಕಾರ ಉಳಿಸಿಕೊಳ್ಳಬೇಕು. ಆದರೆ ಲೆಕ್ಕಾಚಾರ ಅಷ್ಟು ಸರಳವಾಗಿಲ್ಲ, ಒಟ್ಟು 31 ಸದಸ್ಯರಲ್ಲಿ ಕಾಂಗ್ರೆಸ್ 18, ಬಿಜೆಪಿ 11 ಮತ್ತು ಬಿಎಸ್‌ಆರ್ ಪಾರ್ಟಿ 1 ಸ್ಥಾನ ಹೊಂದಿದೆ. ಕಾಂಗ್ರೆಸ್‌ನ ಒಬ್ಬರು ನಿಧನರಾಗಿದ್ದಾರೆ. ಬಿಜೆಪಿಯ ಶಾಸಕ ಮತ್ತು ಸಂಸದರಿಗೂ ಮತದಾನದ ಹಕ್ಕಿರುವುದರಿಂದ ಬಿಜೆಪಿ ಬಲ 13 ಆಗುತ್ತದೆ. ಆ ಪಾರ್ಟಿಗೆ ಮ್ಯಾಜಿಕ್ ನಂಬರ್ 16 ತಲುಪಲು 3 ಸದಸ್ಯರ ಕೊರತೆಯಿದೆ. ಕಾಂಗ್ರೆಸ್‌ನ ಪ್ರದೀಪ್ ಶೆಟ್ಟಿ, ಫ್ರಾನ್ಸಿಸ್, ಕೀಲೂವಾಜ್ ಮತ್ತು ಶ್ರೀಧರ್ ಮೊಗೇರ್ ಯಾವ ಕಾರಣಕ್ಕೂ ಮತ್ತೊಂದು ಛಾನ್ಸ್ ತಾರಿಬಾಗಿಲಿಗೆ ಕೊಡಲು ಸಿದ್ಧರಿಲ್ಲ; ಬಿಜೆಪಿಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವುದಕ್ಕೂ ಈ ಭಿನ್ನಮತೀಯರು ಒಪ್ಪುತ್ತಿಲ್ಲ. ಆದರೆ ಬಿಜೆಪಿ ಕಾಂಗ್ರೆಸ್‌ನ ಒಳಗಿನ ಕಿತ್ತಾಟವೇ ತಮಗೆ ಅಧಿಕಾರ ಕೊಡಿಸಲಿದೆ ಎಂಬ ಗಣಿತ ಹಾಕುತ್ತಿದ್ದಾರೆ. ಮಾಜಿ ಅಧ್ಯಕ್ಷ ರಮೇಶ್ ಆಚಾರಿ ಎಂಬ ಕಾಡುಗಳ್ಳನ ಮುಂದಿಟ್ಟುಕೊಂಡು ಪಗಡೆ ಆಡಿಸುತ್ತಿದೆ ಬಿಜೆಪಿ ಬಾಸ್ ಬಳಗ!

ಹೊಸಮುಖಕ್ಕೆ ಅವಕಾಶ ಕೊಡಿಯೆಂದು ದೇಶಪಾಂಡೆ ಶಿರಸಿ ಕಾಂಗ್ರೆಸ್ ಕಿಂಗ್‌ಗಳಿಗೆ ಒಂದು ಹಂತದಲ್ಲಿ ಹೇಳಿದ್ದಾರೆ. ಆದರೆ ಭೀಮಣ್ಣನ ಬೆಟಾಲಿಯನ್‌ಗೆ ಶ್ರೀಕಾಂತ ತಾರಿಬಾಗಿಲನೇ 'ಅರ್ಹ'ನಾಗಿ ಕಾಣಿಸುತ್ತಿದ್ದಾನೆ. ತಾರಿಬಾಗಿಲಿನ ಬಿಟ್ಟು ಬೇರೆ ಯಾರಿಗೆ ಅಧ್ಯಕ್ಷನ ಮಾಡಿದರೂ ಭಿನ್ನರು ಸಹಿಸಿಕೊಳ್ಳುತ್ತಾರೆ. ಇತ್ತ ಭೀಮಣ್ಣನ ಗ್ಯಾಂಗು ಪ್ರದೀಪ್ ಶೆಟ್ಟಿ ಮತ್ತು ಫ್ರಾನ್ಸಿಸ್ ಎಂಬ ಪ್ಯಾಗಿ-ನಿವೇದಿತ್ ಆಳ್ವ ತಂಡದ ಇಬ್ಬರ ಬಿಟ್ಟು ಮತ್ಯಾರಿಗಾದರೂ ಒಪ್ಪಬೇಕಾದ ಇಕ್ಕಟ್ಟಿಗೆ ಸಿಲುಕಿದೆ. ಪಾರ್ಟಿ ವಿಪ್‌ಗೂ ಕೇರ್ ಮಾಡದೆ ಬಂಡೇಳುವ ದೃಢ ನಿರ್ಧಾರಕ್ಕೆ ಬಂಡುಕೋರರು ಬಂದಿದ್ದಾರೆ. ಈ ನಾಲ್ವರನ್ನು ಸಮಾಧಾನಪಡಿಸಲು ಡಿಸಿಸಿ ಅಧ್ಯಕ್ಷ ಭೀಮಣ್ಣ-ಶಾಂತಣ್ಣರ ಯಜಮಾನರ ಪಡೆ ಭಿನ್ನರು ಮುಂದೆ ಮಾಡಿರುವ ಜಗದೀಶ್ ಗೌಡನಿಗೆ ಅಧ್ಯಕ್ಷ ದೀಕ್ಷೆ ಕೊಡುವ ಯೋಚನೆಗೆ ಬಿದ್ದಿದೆ!

ಈಗಿರುವುದು ಎರಡೇ ಸಾಧ್ಯತೆ. ಕಾಂಗ್ರೆಸ್‌ನ ಭಿನ್ನರ ಬಳಗಕ್ಕೆ ಅಧ್ಯಕ್ಷ ಸ್ಥಾನ ಬಿಟ್ಟುಕೊಟ್ಟು ಉಪಾಧ್ಯಕ್ಷ ಸ್ಥಾನ-ಬಿಜೆಪಿ ಒಪ್ಪಿಕೊಳ್ಳುವುದು ಅಥವಾ ಕಾಂಗ್ರೆಸ್ ಹೋಳಾಗೋದು ತಪ್ಪಿಸಲು (?) ಶ್ರೀಕಾಂತ ತಾರಿಬಾಗಿಲು ಮತ್ತು ರಮೇಶ್ ದುಬಾಶಿ ಗ್ಯಾಂಗಿನವರನ್ನು ಬಿಟ್ಟು ತಟಸ್ಥನೊಬ್ಬನಿಗೆ ಅಧ್ಯಕ್ಷಗಿರಿ ಪಾರ್ಟಿ ಕಿಂಗ್‌ಗಳು ವಹಿಸೋದು. ಆದರೆ ತಾರಿಬಾಗಿಲು ತಂಡ ಬಿಜೆಪಿಯನ್ನೇ ಒಡೆದು ಅಧಿಕಾರಕ್ಕೇರಿ ಭಿನ್ನಮತೀಯರ ಮೆಂಬರಿಕೆ ರದ್ದಾಗುವಂತೆ ಮಾಡುವ ತಂತ್ರಗಾರಿಕೆ ನಡೆಸಿದೆ. ಕಾಂಗ್ರೆಸ್ ಒಡಕಿನ ಲಾಭ ಪಡೆಯುವ ಕನಸು ಕಾಣುತ್ತಿದ್ದ ಚೆಡ್ಡಿ ಪಡೆ ಈಗ ತನ್ನ ಪಕ್ಷದ ಕೌನ್ಸಿಲರ್‌ಗಳ ಕಾಪಾಡಿಕೊಳ್ಳಬೇಕಾದ ಕಷ್ಟಕ್ಕೆ ಬಿದ್ದಿದೆ.. ದುಬಾಶಿ-ಭೀಮಣ್ಣ-ತಾರಿಬಾಗಿಲುಗಳ ಲ್ಯಾಂಡ್ ಲಫಡಾ ಬಿಸ್ನೆಸ್ ಮಾಫಿಯಾದ ಕುರುಡು ಕಾಂಚಾಣದ ಕುಣಿತವೇ ಹಾಗಿದೆ. ದಿನಕ್ಕೊಂದು ಆಯಾಮ ಪಡೆಯುತ್ತಿರುವ ಗದ್ದುಗೆ ಗುದ್ದಾಟಕ್ಕೆ ಬಿದ್ದಿರುವ ಮೂರು ತಂಡಕ್ಕೆ ಗೆಲ್ಲುವ ಧೈರ್ಯವೇ ಇಲ್ಲ; ಪೀಠ ಪ್ರದಾನ ಸಂದರ್ಭದ ಪಿತೂರಿ ಏನಾಗುತ್ತದೆಂಬುದು ಯಾರಿಗೂ ಗೊತ್ತಿಲ್ಲ!

ಸದ್ಯಕ್ಕಂತೂ ಎಲ್ಲರಿಗೆ ಸಮಯಸಾಧಕತವೇ ಸಿದ್ಧಾಂತ!

■ ನಹುಷ

ಮಂಡ್ಯ: ವರದಕ್ಷಿಣೆ ರಕ್ಕಸರಿಗೆ ಬಿದ್ದವು ಭರ್ತಿ ಗೂಸಾ



ಪ್ರಿಯಾಂಕ ಮಗ ದೇವಂತ್‌ನೊಂದಿಗೆ

ಇನ್ಫೋಸಿಸ್ ಟೆಕ್ಕಿಯ ದೌರಿದಾಹಕ್ಕೆ ಎಂಟೆಕ್ ದವೀಧರೆ ಜೀವಾಂತ್ಯ ಮಾಡಿಕೊಂಡ ಪ್ರಕರಣ ಮಾಸುವ ುನ್ನವೇ ಮಂಡ್ಯ ನೆಲದಲ್ಲಿ ಮತ್ತೊಬ್ಬ ಹೆಣ್ಮಗಳು ವರದಕ್ಷಿಣೆ ುಕುಳಕ್ಕೆ ಬಲಿಯಾಗಿರೋದನ್ನು ಪತ್ರಿಕೆ ವ್ಯಥೆಯಿಂದಲೇ ಾಖಲಿಸುತ್ತಿದೆ. ಕೆ.ಆರ್.ಪೇಟೆ ತಾಲ್ಲೂಕಿನ ಾಡಭೋಗನಹಳ್ಳಿಯ ಪ್ರಿಯಾಂಕಳೇ ಆ ನತದೃಷ್ಟ ಣ್ಮಗಳು. 26 ವಯಸ್ಸಿನ ಆಕೆಯ ಮೂರು ವರ್ಷದ ುದ್ದಾದ ಮಗು ದೇವಂತ್ ಅನಾಥವಾಗಿ ಅಮ್ಮನ ಣದ ಮುಂದೆ ಕಣ್ಣೀರಿಡುತ್ತಿದ್ದ ದೃಶ್ಯ ಎಂಥಾ ಲ್ಲೆದೆಯವರನ್ನೂ ಕಣ್ಣೀರಾಗಿಸುವಂತಿತ್ತು. ನೇಣಿನ ಣಿಕೆಯಲ್ಲಿ ನೇತಾಡುತ್ತಿದ್ದ ಪ್ರಿಯಾಂಕಳ ದೇಹ ಧನದಾಹಿ ಂಡ ಮಂಜಪ್ಪ ಮತ್ತವನ ತಂದೆ, ತಂಗಿ, ಭಾವ, ಚಿಕ್ಕಮ್ಮ, ಕ್ಕಪ್ಪರಿಗೆ ಹಿಡಿಶಾಪ ಹಾಕಿರಬೇಕು, ನೆರೆದಿದ್ದ ಜನರ ನುಷ್ಯತ್ವದ ಕಟ್ಟೆಯೊಡೆದು ಅಷ್ಟೂ ಜನರನ್ನು ಅಲ್ಲಿಯೇ ಗ್ಗಾಮುಗ್ಗಾ ಥಳಿಸಿದ್ದರು.

ಕೆ.ಆರ್.ಪೇಟೆ ತಾಲೂಕಿನ ಅಕ್ಕಿ ಹೆಬ್ಬಾಳು ಹೋಬಳಿಯ ಂಡುಕನಹಳ್ಳಿ ಗ್ರಾಮದ ತಮ್ಮಯ್ಯಪ್ಪ ಹಾಗೂ ತೀರ್ಥಮಣಿ ಂಪತಿಗೆ ನಾಲ್ವರು ಹೆಣ್ಣುಮಕ್ಕಳು. ಅವರಲ್ಲಿ ೂರನೆಯವಳೇ ಪ್ರಿಯಾಂಕ. ಆಕೆಯನ್ನು 7 ವರ್ಷಗಳ ಂದೆ ನಾಡಭೋಗನಹಳ್ಳಿಯ ಮಂಜುನಾಥನ ಮಗ ಂಜಪ್ಪನಿಗೆ ಸಾಕಷ್ಟು ವರದಕ್ಷಿಣೆ ಕೊಟ್ಟೇ ಮದುವೆ ಾಡಲಾಗಿತ್ತು. ಮಂಜಪ್ಪನದೂ ಸಾಕಷ್ಟು ಹಣವಂತ ುಟುಂಬವೆ. ಅಪ್ಪ ಮಂಜುನಾಥ ಸಾಕಷ್ಟು ಆಸ್ತಿ-ಪಾಸ್ತಿ ಾಡಿಟ್ಟಿದ್ದ. ಅಷ್ಟಿದ್ದರೂ ಅಪ್ಪ-ಮಗನಿಗೆ ಎಲ್ಲಿಲ್ಲದ ನದಾಹ. ಪ್ರಿಯಾಂಕಳ ತವರುಮನೆ ಆಸ್ತಿಯ ಮೇಲೆ ಣ್ಣಿಟ್ಟಿದ್ದ ಇವರು ಕಳೆದ ಎರಡು ವರ್ಷಗಳಿಂದ ನಿನ್ನ ಾಲಿನ ಆಸ್ತಿ ತೆಗೆದುಕೊಂಡು ಬಾ ಅಂತ ಪ್ರಿಯಾಂಕಗೆ ಿರುಕುಳ ನೀಡಲು ಆರಂಭಿಸಿದ್ದರು.

ಇದಕ್ಕೆ ಗಂಡನ ಸಹೋದರಿ ಇಂದ್ರಾಮಣಿ, ಚಿಕ್ಕಪ್ಪ ಂಜಪ್ಪ, ಚಿಕ್ಕಮ್ಮ ಮಂಜುಳಾ ಹಾಗೂ ಚಿಕ್ಕಪ್ಪನ ಮಗ ಡಾ ಸಾತ್ ನೀಡಿದ್ದರು. ಪ್ರತಿನಿತ್ಯ ಪ್ರಿಯಾಂಕಳಿಗೆ ಎಲ್ಲರೂ ರಿಯೇ ಕಿರುಕುಳ ನೀಡುತ್ತಿದ್ದರು. ಈ ಮಧ್ಯೆ 8 ತಿಂಗಳ ಂದೆ ಪ್ರಿಯಾಂಕಳ ತಂದೆ ತಮ್ಮಯ್ಯಪ್ಪ ಅನಾರೋಗ್ಯದಿಂದ ಧನರಾದಾಗ ಗಂಡುಮಕ್ಕಳಿಲ್ಲದ ಪರಿಸ್ಥಿತಿ ತಿಳಿದ ಮಾವ ಂಜುನಾಥ ಹಾಗೂ ಗಂಡ ಮಂಜಪ್ಪ ಸೇರಿಕೊಂಡು ಯಾಂಕಳಿಗೆ ನೀಡುತ್ತಿದ್ದ ಕಿರುಕುಳ ಹೆಚ್ಚಿಸಿದರು. ಆಸ್ತಿಯನ್ನು ಗೆದುಕೊಂಡು ಬಾ, ಇಲ್ಲದಿದ್ದರೆ ನಿನಗೆ ಡೈವೋರ್ಸ್ ಟ್ಟು ನನ್ನ ಮಗ ಮಂಜಪ್ಪನಿಗೆ ಬೇರೊಂದು ವಿವಾಹ ಾಡುತ್ತೇನೆ ಅಂತ ಮಾವ ಮಂಜುನಾಥ ಧಮಕಿ ಕತೊಡಗಿದ್ದ. ಅಪ್ಪನ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದ ಿ ಮಂಜಪ್ಪ ಕೂಡ ಆಸ್ತಿ ತರದಿದ್ದರೆ ಬೇರೊಂದು ಮದುವೆ ಆಗೇ ಆಗ್ತೀನಿ ಎಂದು ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸಿಸಲಾರಂಭಿಸಿದ್ದ.

ಗಂಡ ಮಂಜಪ್ಪನ ಕಿರುಕುಳದಿಂದ ರೋಸಿ ಹೋಗಿದ್ದರೂ ಮಗ ದೇವಂತ್‌ಗೋಸ್ಕರ ಪ್ರಿಯಾಂಕ ಎಲ್ಲವನ್ನು ಸಹಿಸಿಕೊಂಡಿದ್ದಳು. ಅಪ್ಪ ಸತ್ತನಂತರ ಇವರ ಕಿರುಕುಳ ವಿಪರೀತವಾದಾಗ ತಾಯಿ ಹಾಗೂ ಬಂಧುಗಳ ಬಳಿ ಗೋಳು ತೋಡಿಕೊಂಡಿದ್ದಳು. ಹಾಗಾಗಿ ಗಂಡ ಮಂಜಪ್ಪ ಹಾಗೂ ಮಾವ ಮಂಜುನಾಥನನ್ನು ಕೂರಿಸಿಕೊಂಡು ಹಿರಿಯರು ನ್ಯಾಯಪಂಚಾಯ್ತಿ ಮಾಡಿದ್ದರು. ಪಂಚಾಯ್ತಿದಾರರ ಮುಂದೆ ಇನ್ಮುಂದೆ ಕಿರುಕುಳ ನೀಡುವುದಿಲ್ಲ ಎಂದು ಮಾತು ಕೊಟ್ಟಿದ್ದ ಅಪ್ಪ-ಮಗ 3-4 ದಿನ ಕಳೆಯುವಷ್ಟರಲ್ಲೇ ತಮ್ಮ ವರಾತ ಶುರು ಮಾಡಿಕೊಂಡಿದ್ದರು. ಈಗ್ಗೆ 20 ದಿನಗಳ ಹಿಂದೆಯೂ ಪ್ರಿಯಾಂಕ ತನ್ನ ಬಂಧುಗಳ ಜೊತೆ ಗೋಳನ್ನು ತೋಡಿಕೊಂಡಿದ್ದಳು. ಆಗ ಮತ್ತೊಮ್ಮೆ ಪಂಚಾಯ್ತಿ ಸೇರಿಸಿ ಕೊನೆ ಮಗಳ ಮದುವೆಯಾದ ನಂತರ ನಾಲ್ಕು ಹೆಣ್ಣುಮಕ್ಕಳಿಗೂ ಆಸ್ತಿ ಭಾಗ ಮಾಡುವ ಭರವಸೆ ನೀಡಿದ್ದರು. ಆಗ ಪ್ರಿಯಾಂಕಳ ತಂಗಿಯ ಮದುವೆಯಾದರೆಷ್ಟು ಬಿಟ್ಟರೆಷ್ಟು ನನ್ನ ಹೆಂಡತಿ ಪಾಲಿನ ಆಸ್ತಿ ಕೊಡಿ ಅಂತ ಮಂಜಪ್ಪ ಅಮಾನುಷವಾಗಿ ವರ್ತಿಸಿದ್ದ.




ಬೆಂಕಿಗಾಹುತಿಯಾದ ಎತ್ತಿನ ಗಾಡಿ

ಕೊಲೆ ಶಂಕೆ

ಮಾರ್ಚ್ 29ರ ಬೆಳಗ್ಗೆ ಗಂಡ ಮಂಜಪ್ಪನ ಮನೆಯಲ್ಲೇ ಪ್ರಿಯಾಂಕಳ ಕೈ-ಕಾಲು ಕಟ್ಟಿ ನೇಣು ಬಿಗಿದ ಸ್ಥಿತಿಯಲ್ಲಿ ಶವವಾಗಿ ನೇತಾಡುತ್ತಿದ್ದಳು. ಗಂಡ ಮಂಜಪ್ಪ ಪ್ರಿಯಾಂಕ ನೇಣು ಹಾಕಿಕೊಂಡಿದ್ದಾಳೆ ಎಂದು ಊರಿನ ಗ್ರಾಮಸ್ಥರಿಗೆ ವಿಷಯ ಮುಟ್ಟಿಸಿದ. ಅಪ್ಪ-ಮಗನ ವರದಕ್ಷಿಣೆ ದಾಹ ಅರಿತಿದ್ದ ಗ್ರಾಮಸ್ಥರು ಪ್ರಿಯಾಂಕಳ ಶವ ನೋಡಿದವರೇ ಇದು ಖಂಡಿತಾ ಆತ್ಮಹತ್ಯೆಯಲ್ಲ, ಇದೊಂದು ಕೊಲೆ ಎಂದು ಗಂಡ ಮಂಜಪ್ಪ ಚಿಕ್ಕಪ್ಪ ನಂಜಪ್ಪ ಹಾಗೂ ಚಿಕ್ಕಮ್ಮ ಮಂಜುಳಾರನ್ನು ಮನೆಯೊಳಗೆ ಕೂಡಿ ಹಾಕಿ ಪ್ರಿಯಾಂಕಳ ತವರುಮನೆಗೆ ಸುದ್ದಿ ಮುಟ್ಟಿಸಿದರು. ಈ ಮಧ್ಯೆ ಪ್ರಿಯಾಂಕಳ ಮಾವ ಮಂಜುನಾಥ, ನಾದಿನಿ ಇಂದ್ರಾಮಣಿ, ಆಕೆಯ ಗಂಡ ಹಾಗೂ ಚಿಕ್ಕಪ್ಪನ ಮಗ ಊರಿನಿಂದ ಕಾಲ್ಕಿತ್ತಿದ್ದರು. ಪ್ರಿಯಾಂಕಳನ್ನು ನೇಣು ಹಾಕಿದ್ದಾರೆ ಎಂಬ ಸುದ್ದಿ ತಿಳಿದೊಡನೆ ನಾಡಭೋಗನಹಳ್ಳಿಗೆ ನೂರಾರು ಸಂಖ್ಯೆಯಲ್ಲಿ ಪ್ರಿಯಾಂಕಳ ಬಂಧುಗಳು ದಾಳಿ ಇಟ್ಟವರೇ ಆಕೆಯ ಗಂಡ ಮಂಜಪ್ಪ ಚಿಕ್ಕಪ್ಪ ನಂಜಪ್ಪ ಚಿಕ್ಕಮ್ಮ ಮಂಜುಳಾರಿಗೆ ಮನಬಂದಂತೆ ಥಳಿಸಿದ್ದಾರೆ. ಇದಕ್ಕೆ ನಾಡಭೋಗನಹಳ್ಳಿ ಗ್ರಾಮಸ್ಥರು ಕೈಜೋಡಿಸಿ ಅವರು ಸರಿಯಾಗಿ ಗೂಸಾ ಕೊಟ್ಟಿದ್ದಾರೆ.

ಮಗ ದೇವಂತ್‌ಗಾಗಿ ಗಂಡನ ಮನೆಯವರ ಕಿರುಕುಳ ಸಹಿಸಿಕೊಂಡಿದ್ದ ಪ್ರಿಯಾಂಕ, ತಾನಾಗೇ ಆತ್ಮಹತ್ಯೆ ಮಾಡಿಕೊಳ್ಳುವ ಹೆಣ್ಣುಮಗಳಲ್ಲ. ಆದರೆ ಪ್ರಿಯಾಂಕ ನೇಣು ಬಿಗಿದುಕೊಂಡ ದೃಶ್ಯವನ್ನು ನೋಡಿದ ಎಂತಹವರಿಗಾದರೂ ಇದು ಆತ್ಮಹತ್ಯೆಯಲ್ಲ, ಕೊಂದು ನೇಣು ಹಾಕಿದ್ದಾರೆ ಎನ್ನುವ ಅನುಮಾನ ಮೂಡುತ್ತದೆ. ನೇಣು ಬಿಗಿದ ಸ್ಥಿತಿಯಲ್ಲಿ ಕಂಡ ಪ್ರಿಯಾಂಕಳ ಕಾಲುಗಳು ನೆಲಕ್ಕೆ ತಾಗುವಂತಿದ್ದವು. ಅಲ್ಲದೆ ಆಕೆಯ ಕಾಲಿಗೆ ಅವಳ ವೇಲನ್ನು ಕಟ್ಟಲಾಗಿತ್ತು, ಜೊತೆಗೆ ಮುಖಕ್ಕೆ ಬಟ್ಟೆಯನ್ನು ಬಿಗಿಯಲಾಗಿತ್ತು. ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳುವವರು ಕಾಲುಗಳನ್ನು, ಮುಖವನ್ನು ಏಕೆ ಕಟ್ಟಿಕೊಳ್ಳುತ್ತಾರೆ. ಅನುಮಾನವೇ ಬೇಡ. ಗಂಡ ಮಂಜಪ್ಪ, ಹಾಗೂ ಮನೆಯವರು ಎಲ್ಲರೂ ಸೇರಿ ಪ್ರಿಯಾಂಕಳನ್ನು ಕೊಂದಿದ್ದಾರೆ ಎಂಬುದು ಪ್ರಿಯಾಂಕ ಹೆತ್ತವರು ಹಾಗೂ ನಾಡಭೋಗನಹಳ್ಳಿಯ ಜನರ ವಾದ. ಪ್ರಿಯಾಂಕ ಹತ್ಯೆ ಸುದ್ದಿ ಕೇಳಿ ಆಕೆಯ ಪೋಷಕರು, ಸಂಬಂಧಿಕರು ಮಂಜಪ್ಪನ ಮನೆ, ಬೈಕ್, ಎತ್ತಿನಗಾಡಿ ಎಲ್ಲವನ್ನು ಸುಟ್ಟು ಭಸ್ಮ ಮಾಡುವಾಗ ನಾಡಭೋಗನಹಳ್ಳಿಯ ಗ್ರಾಮಸ್ಥರು ಕೂಡ ಕೈಜೋಡಿಸಿದ್ದರು. ಸ್ವತಃ ಗ್ರಾಮಸ್ಥರೇ ಕೈಜೋಡಿಸಿದರೆಂದರೆ ಆರೋಪಿ ಮಂಜಪ್ಪ ಮನೆಯವರ ಕಿರಾತಕ ಕೃತ್ಯ ಎಂತಹುದು ಎಂಬುದು ಅರಿವಾಗುತ್ತದೆ.



ಕೈಗೆ ಸಿಕ್ಕ ಮಂಜಪ್ಪ, ಚಿಕ್ಕಪ್ಪ ನಂಜಪ್ಪ, ಚಿಕ್ಕಮ್ಮ ಮಂಜುಳಾರಿಗೆ ಪ್ರಿಯಾಂಕಳ ಬಂಧುಗಳು ಚೆನ್ನಾಗಿ ಥಳಿಸುತ್ತಿದ್ದರೆ, ಗ್ರಾಮಸ್ಥರು ಕೂಡ ಹಿಗ್ಗಾಮುಗ್ಗಾ ಥಳಿಸಿ ಆ ಮುಗ್ಧ ಹೆಣ್ಮಗಳ ಸಾವಿನ ಆಕ್ರೋಶವನ್ನು ತೀರಿಸಿಕೊಂಡರು.

ಪ್ರಿಯಾಂಕ ಬಂಧುಗಳು ಹಾಗೂ ನಾಡಭೋಗನಹಳ್ಳಿ ಗ್ರಾಮಸ್ಥರ ಆಕ್ರೋಶಕ್ಕೆ ಮಂಜಪ್ಪನ ಮನೆ, ಬೈಕ್, ಎತ್ತಿನಗಾಡಿ, 10 ಸಾವಿರದಷ್ಟಿದ್ದ ತೆಂಗಿನಕಾಯಿ ರಾಶಿ ಎಲ್ಲವೂ ಭಸ್ಮವಾಗಿವೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವ ಸುದ್ದಿ ತಿಳಿದ ಮೈಸೂರು ವಲಯ ಐಜಿಪಿ ಬಿಜಯ್‌ಕುಮಾರ್ ಸಿಂಗ್, ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ, ಎಎಸ್ಪಿ ಪುಟ್ಟಮಾದಪ್ಪ ಡಿವೈಎಸ್ಪಿ ಜನಾರ್ದನ್, ಸಿಪಿಐ ಯೋಗೇಶ್, ಪಿಎಸ್‌ಐ ಪುನೀತ್, ವಿನಯ್ ಸೇರಿದಂತೆ 50ಕ್ಕೂ ಹೆಚ್ಚು ಪೊಲೀಸರು ಬಂದಿದ್ದರು. ಪೊಲೀಸರು ಬಂದು ಉದ್ರಿಕ್ತ ಜನರನ್ನು ಚದುರಿಸುವಷ್ಟರಲ್ಲಿ ಮಂಜಪ್ಪನ ಹಾಗೂ ಆತನ ಚಿಕ್ಕಪ್ಪ ಚಿಕ್ಕಮ್ಮನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ್ದರು. ಒಂದು ವೇಳೆ ಮಂಜಪ್ಪನ ತಂದೆ ಮಂಜುನಾಥ್, ಸಹೋದರಿ ಇಂದ್ರಾಮಣಿ ಸಿಕ್ಕಿದ್ದರೆ ಅವರಿಬ್ಬರನ್ನು ಕೊಂದೇ ಹಾಕುತ್ತಿದ್ದರು. ಪೊಲೀಸರು ಬರುವುದು ಸ್ವಲ್ಪ ತಡವಾಗಿದ್ದೂ ಮಂಜಪ್ಪನನ್ನು ಪ್ರಿಯಾಂಕಳ ಜಾಗಕ್ಕೇ ಕಳುಹಿಸುತ್ತಿದ್ದರು.

ಜನರ ಹೊಡೆತದಿಂದ ಸಾಕಷ್ಟು ಹೈರಾಣಾಗಿದ್ದ ಪ್ರಿಯಾಂಕಳ ಗಂಡನ ಕಡೆಯವರನ್ನು ಪೊಲೀಸರ ಚೆಂಗಾವಲಿನಲ್ಲಿ ಮಂಡ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಪ್ರಿಯಾಂಕಳ ಸಾವಿಗೆ ಕಾರಣರಾದ ಗಂಡ ಮಂಜಪ್ಪ, ಮಾವ ಮಂಜುನಾಥ, ಚಿಕ್ಕಪ್ಪ ಮಂಜಪ್ಪ ಚಿಕ್ಕಮ್ಮ ಮಂಜುಳಾ, ನಾದಿನಿ ಇಂದ್ರಾಮಣಿ, ಆಕೆಯ ಗಂಡ, ಚಿಕ್ಕಪ್ಪನ ಮಗ ಸೇರಿ 7 ಮಂದಿ ಮೇಲೆ ಎಫ್‌ಐಆರ್ ಹಾಕಲಾಗಿದೆ.



ಒದೆ ತಿಂದ ಮಂಜಪ್ಪ, ಚಿಕ್ಕಪ್ಪ ನಂಜಪ್ಪ, ಚಿಕ್ಕಮ್ಮ ಮಂಜುಳಾ

■ ವರದಿಗಾರ

02⇦ ಸ್ಕೇಟಿಂಗ್....

ಲೆಯಲ್ಲಿ ನಡೆದ 6 ವರ್ಷದೊಳಗಿನವರ ಸ್ಕೇಟಿಂಗ್ ್ಧೆಯಲ್ಲಿ ಶಾಮಿಲ್ ಬೆಳ್ಳಿಪದಕ ಗೆದ್ದು ಕೊಂಡ ಶಾಮಿಲ್‌ಗೆ ಗಿನ್ನೂ ನಾಲ್ಕೂವರೆ ವರ್ಷ. ಶಾಮಿಲ್ ತನ್ನ ಪದಕ ೇಟೆಯ ಮೊದಲ ಹೆಜ್ಜೆ ಇಟ್ಟದ್ದು 2011ರ ಡಿಸೆಂಬರ್ ಿನ್ನೆದುರು. ಇದಾಗಿ ಎರಡು ತಿಂಗಳು ಕಳೆಯುವಷ್ಟರಲ್ಲಿ ನೇ ಅಂತರ್‌ಶಾಲಾ ರೋಲರ್ ಸ್ಕೇಟಿಂಗ್ ಾಕೂಟದಲ್ಲಿ 6 ವರ್ಷದೊಳಗಿನ ಮಕ್ಕಳ ವಿಭಾಗದಲ್ಲಿ ಮಿಲ್ ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡ. 012 ರ ನವೆಂಬರ್‌ನಲ್ಲಿ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ೊದಲ ಬಾರಿಗೆ ಚಿನ್ನದ ಪದಕ ಬೇಟೆಯಾಡಿದ. ದರೊಂದಿಗೆ ಇನ್ನೊಂದು ಬೆಳ್ಳಿ ಮತ್ತು ಚಾಂಪಿಯನ್ ಟ್ಟವನ್ನು ಅಲಂಕರಿಸಿದ. ಅದೇ ನವೆಂಬರ್ ತಿಂಗಳ 30 ಡು ಬೆಳಗಾವಿಯಲ್ಲಿ ನಡೆದ ಸ್ಪರ್ಧೆಯಲ್ಲಿ ರಾಜ್ಯದ ಿಧ ಜಿಲ್ಲೆಗಳಿಂದ ಆಗಮಿಸಿದ್ದ 53 ಬಾಲ ಸ್ಕೇಟಿಂಗ್ ಂಗಳನ್ನು ಮಣಿಸಿ ಮೊದಲ ಬಾರಿಗೆ ರಾಜ್ಯಮಟ್ಟದ ್ಧೆಯಲ್ಲಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡ. ನ್ನೂ ಶಾಮಿಲ್‌ಗೆ ಐದು ವರ್ಷ. 2013 ರಲ್ಲಿ ದಕ್ಷಿಣ ಭಾರತ ಮಟ್ಟದ 8 ವರ್ಷದೊಳಗಿನ ಮಕ್ಕಳಿಗೆ ಸ್ಕೇಟಿಂಗ್ ಕಂಚಿನ ಪದಕ ಗೆದ್ದಾಗ ಶಾಮಿಲ್‌ಗೆ 6 ವರ್ಷ 5 ತಿಂಗಳಷ್ಟೆ. 2012 ರಿಂದ 2015 ರ ವರೆಗೆ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಸತತ ನಾಲ್ಕು ವರ್ಷಗಳಲ್ಲಿ ಚಿನ್ನದ ಪದಕಗಳೊಂದಿಗೆ ಚಾಂಪಿಯನ್ ಪಟ್ಟವನ್ನು ಶಾಮಿಲ್ ತನ್ನಲ್ಲೇ ಉಳಿಸಿಕೊಂಡಿದ್ದಾನೆ.

2013 ರಲ್ಲಿ ರಾಜ್ಯದ ವಿವಿಧೆಡೆಗಳ 68 ವಿದ್ಯಾರ್ಥಿಗಳನ್ನು ಮಣಿಸಿ ಎರಡು ಚಿನ್ನದ ಪದಕಗಳೊಂದಿಗೆ ರಾಜ್ಯ ಚಾಂಪಿಯನ್ ಕಿರೀಟ ಶಾಮಿಲ್ ಮುಡಿಗೆ. 2014 ರಲ್ಲಿ ದಕ್ಷಿಣ ಭಾರತ ಮಟ್ಟದ ಆರು ರಾಜ್ಯಗಳ 78 ವಿದ್ಯಾರ್ಥಿಗಳನ್ನು ಮಣಿಸಿ ಎರಡು ಚಿನ್ನದ ಪದಕ ಮತ್ತು ಚಾಂಪಿಯನ್ ಪಟ್ಟ.


2014 ರಲ್ಲಿ ರಾಜ್ಯದ ವಿವಿಧೆಡೆಗಳ 98 ವಿದ್ಯಾರ್ಥಿಗಳನ್ನು ಮಣಿಸಿ ರಾಜ್ಯಮಟ್ಟದ ಚಿನ್ನದ ಪದಕ. 2015 ರಲ್ಲಿ ದಕ್ಷಿಣ ಭಾರತ ಮಟ್ಟದಲ್ಲಿ 10ರ ವಯೋಮಿತಿಯೊಳಗಿನ ವಿದ್ಯಾರ್ಥಿಗಳ ಸ್ಪರ್ಧೆಯಲ್ಲಿ ಆಗಿನ್ನೂ ಎಂಟು ವರ್ಷ ತುಂಬದ ಈ ಬಾಲಕನ ಮುಡಿಗೆ ಬೆಳ್ಳಿ ಪದಕದ ಕಿರೀಟ. ಈ ವರ್ಷ (2016) ಗುಜರಾತ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಮತ್ತೆ ಕಂಚಿನ ಪದಕ. ಹೀಗೆ ಶಾಮಿಲ್ ಎಂಬ ಈ ಪೋರನ ಪದಕಗಳ ಸಾಧನಾಗಾಥೆಯ ಪಟ್ಟಿ ಇನ್ನೂ ದೊಡ್ಡದಿದೆ. ಶಾಮಿಲ್‌ನ ಕ್ರೀಡಾ ಪ್ರತಿಭೆ ಕೇವಲ ರೋಲರ್ ಸ್ಕೇಟಿಂಗ್‌ಗಷ್ಟೆ ಸೀಮಿತವಲ್ಲ. ಈತ ಉದ್ದ ಜಿಗಿತದಲ್ಲೂ ಜಿಲ್ಲಾ ಮಟ್ಟದ ಕೆಲವು ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾನೆ. ಸ್ಕೇಟಿಂಗ್ ಡ್ಯಾನ್ಸ್ (ಸ್ಕೇಟಿಂಗ್ ಬೂಟು ಧರಿಸಿ ಮಾಡುವ ವಿಶಿಷ್ಟ ಬಗೆಯ ನೃತ್ಯ) ನಲ್ಲೂ ಕೆಲವು ಪದಕಗಳು ಶಾಮಿಲ್ ಬಗಲಿಗೆ ಬಿದ್ದಿವೆ.

ಸ್ಕೇಟಿಂಗ್ ಉಳ್ಳವರ ಕ್ರೀಡೆ. ಇದು ಬಹಳ ದುಡ್ಡು ಬಯಸುವ ಕ್ರೀಡೆ. ತರಬೇತಿ, ಬೂಟುಗಳು, ಚಕ್ರ, ಬೇರಿಂಗ್, ರಿಂಕ್‌ಫ್ರೇಮ್, ರಿಂಕ್‌ಬ್ರೇಕ್ ಹಾಕಲು (ಬೂಟಿಗೆ ಅಳವಡಿಸುವ ಸಾಧನ) ಮೊದಲಾದ ಕ್ರೀಡಾ ಪರಿಕರಗಳು, ದೇಶದ ವಿವಿಧೆಡೆ ನಡೆಯುವ ಸ್ಪರ್ಧೆಗಳಿಗೆ ತೆರಳುವ ಪ್ರಯಾಣದ ವೆಚ್ಚ, ವಸತಿವೆಚ್ಚ ಇತ್ಯಾದಿಗಳೆಂದು ವರ್ಷವೊಂದಕ್ಕೆ ಎರಡರಿಂದ ಎರಡೂವರೆ ಲಕ್ಷ ರೂಪಾಯಿ ವ್ಯಯಿಸಬೇಕಾಗುತ್ತದೆ. ಸ್ಕೇಟಿಂಗ್ ಕ್ರೀಡೆಗೆ ಬಳಸುವ ಇನ್‌ಲೈನ್ ಬೂಟು ಎಂಬ ಒಂದು ವಿಶಿಷ್ಟ ಬೂಟಿಗೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಶಾಮಿಲ್‌ನ ಹೆತ್ತವರು ಉಳ್ಳವರಲ್ಲ, ಮಂಗಳೂರಿನ ಮಾರ್ನಮಿಕಟ್ಟೆ ಪ್ರದೇಶದಲ್ಲಿ ಪುಟ್ಟ ಬಾಡಿಗೆ ಫ್ಲ್ಯಾಟೊಂದರಲ್ಲಿ ವಾಸಿಸುವ ಅರ್ಷದ್ ಹುಸೇನ್ ಖಾಸಗಿ ಕಂಪೆನಿಯೊಂದರ ಉದ್ಯೋಗಿ. ಶಾಮಿಲ್‌ನ ಅಮ್ಮ ರಮ್ಲತ್ ಯೆನಪೋಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿಂದಿ ಉಪನ್ಯಾಸಕಿ. ಈ ದಂಪತಿಗಳು ತಮ್ಮ ಸೀಮಿತ ಆದಾಯದಲ್ಲಿ ಮಗನನ್ನು ಸ್ಕೇಟಿಂಗ್ ಜಗತ್ತಿನಲ್ಲಿ ಉತ್ತುಂಗಕ್ಕೇರಿಸಲು ದುಡ್ಡಿನ ಮುಖ ನೋಡಿದವರಲ್ಲ. ಹಾಗೂಹೀಗೂ ದುಡ್ಡು ಹೊಂದಿಸಿಕೊಂಡು ಮಗನ ಕ್ರೀಡಾ ಬದುಕಿಗೆ ಬೇಕಾಗುವುದನ್ನೆಲ್ಲಾ ಕೊಡಿಸುತ್ತಿದ್ದಾರೆ. ಸ್ಕೇಟಿಂಗ್ ಕ್ರೀಡೆಯಲ್ಲಿ ಪದಕಗಳು ಬರುತ್ತವೆಯೇ ಹೊರತು ಯಾವುದೇ ರೀತಿಯ ನಗದು ಬಹುಮಾನವಿರುವುದಿಲ್ಲ. ಪ್ರಸ್ತುತ ಮಂಗಳೂರಿನ ಕೆನರಾ ಸಿಬಿಎಸ್‌ಇ ಶಾಲೆಯಲ್ಲಿ ಮೂರನೇ ತರಗತಿಯಲ್ಲಿ ಓದುತ್ತಿರುವ ಶಾಮಿಲ್‌ಗೆ ಭವಿಷ್ಯದಲ್ಲಿ ಸೈನಿಕನಾಗುವಾಸೆ.

ಸ್ಕೇಟಿಂಗ್ ಜಗತ್ತಿನ ಈ ವಿಸ್ಮಯಕಾರಿ ಪೋರನ ಕ್ರೀಡಾ ಬದುಕು ಉಜ್ವಲವಾಗಲಿ ಎಂದು ಹಾರೈಸೋಣ. ಭವಿಷ್ಯದಲ್ಲಿ ಸ್ಕೇಟಿಂಗ್ ಕೂಡ ಒಲಿಂಪಿಕ್ಸ್‌ಗೆ ಸೇರ್ಪಡೆಯಾಗುವ ಸಾಧ್ಯತೆಯಿದೆ. ಒಲಿಂಪಿಕ್ಸ್‌ನಲ್ಲಿ ಪದಕಗಳ ಬರ ಎದುರಿಸುತ್ತಿರುವ ಭಾರತದ ಕ್ರೀಡಾಕ್ಷೇತ್ರಕ್ಕೆ ಶಾಮಿಲ್ ಖಂಡಿತವಾಗಿಯೂ ಒಂದು ಭರವಸೆ.

■ ಇಸ್ಮತ್ ಫಜೀರ್

ವಿನಾಯಕ್ ಬಾಳಿಗಾ ಹತ್ಯೆಯಲ್ಲಿ ನರೇಶ್ ಶೆಣೈ ಕೈವಾಡ?


ವಿನಾಯಕ್ ಬಾಳಿಗಾ


ಧರ್ಮರಕ್ಷಕರ ಬುಡಕ್ಕೆ ಕೈಹಾಕಿ ಅವರ ಬಂಡವಾಳವನ್ನು ಮಂಗಳೂರಿನ ಬೀದಿಯಲ್ಲಿ ಕಾನೂನು ಪ್ರಕಾರವೇ ಹರಾಜು ಹಾಕಿದ್ದಕ್ಕೆ ಮಂಗಳೂರಿನಲ್ಲೊಂದು ಹೆಣ ಬಿದ್ದಿದೆ. ಆತ ವಿನಾಯಕ ಪಾಂಡುರಂಗ ಬಾಳಿಗಾ, ವಯಸ್ಸು 51, ಅವಿವಾಹಿತ, ವೃತ್ತಿಯಲ್ಲಿ ಎಲೆಕ್ಟ್ರಿಕಲ್ ಕಂಟ್ರಾಕ್ಟರ್, ಪ್ರವೃತ್ತಿಯಲ್ಲಿ ಮಾಹಿತಿ ಹಕ್ಕು ಕಾರ್ಯಕರ್ತ!

ಮಾರ್ಚ್ 21 ರ ಮುಂಜಾನೆ 5.30 ಕ್ಕೆ ಬಾಳಿಗಾ ತನ್ನ ಎಂದಿನ ಅಭ್ಯಾಸದಂತೆ ದ್ವಿಚಕ್ರ ವಾಹನವೇರಿ ಮಂಗಳೂರು ರಥಬೀದಿಯ ವೆಂಕಟರಮಣ ದೇವಸ್ಥಾನಕ್ಕೆ ಸುಪ್ರಭಾತದ ಪೂಜೆಗೆ ಹೊರಟಿದ್ದರು. ಅವರ ದಿನನಿತ್ಯದ ಚಲನವಲನಗಳ ಪಕ್ಕಾ ಮಾಹಿತಿ ಪಡೆದ ಸುಪಾರಿ ಪಡೆ ಅವರನ್ನು ಬೈಕ್‌ಗಳಲ್ಲಿ ಹಿಂಬಾಲಿಸಿ ನಗರದ ಬೆಸೆಂಟ್ ಕಾಲೇಜ್ ಬಳಿ ಕಡಿದು ಕೊಚ್ಚಿ ಹಾಕಿದೆ. ಕೆಲವು ನಿಮಿಷಗಳಲ್ಲೇ ಬಾಳಿಗಾ ವೆಂಕಟರಮಣನ ಪಾದ ಸೇರಿದ್ದಾರೆ.

ಖಂಡಿತಾ ಆತ ಪ್ರಗತಿಪರ ಗುಂಪಿನವರಲ್ಲ, ಅಂದ ಮಾತ್ರಕ್ಕೆ ಯಾವುದೇ ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡ ಪುಢಾರಿಯೂ ಅಲ್ಲ, ಆತನಿಗಿದ್ದ ಒಂದೇ ಒಂದು 'ದುರ್ಗುಣ' ಆತ ಅಕ್ರಮ ಅನ್ಯಾಯ ಭ್ರಷ್ಟಾಚಾರಗಳನ್ನು ಬಿಲ್‌ಕುಲ್ ಸಹಿಸುತ್ತಿರಲಿಲ್ಲ, ನ್ಯಾಯಾನ್ಯಾಯ ಸತ್ಯಾಸತ್ಯ ಬಯಲಿಗೆಳೆಯಲು ಆತ ಮಾಹಿತಿ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಬಳಸುತ್ತಿದ್ದರು. ತಪ್ಪಿತಸ್ಥರನ್ನು ನ್ಯಾಯಾಲಯದ ಕಟಕಟೆಗೆ ಎಳೆದು ತರುತ್ತಿದ್ದರು. ಹಾಗೆ ವಿನಾಯಕ ಬಾಳಿಗಾರಿಂದಾಗಿ ನ್ಯಾಯಾಲಯದ ಮೆಟ್ಟಿಲೇರಿ ಮುಖಭಂಗ ಅನುಭವಿಸಿದವರಲ್ಲಿ ಮತ್ತು ಅನುಭವಿಸಲು ಸಿದ್ಧರಾಗಿರುವವರಲ್ಲಿ ದೊಡ್ಡ ದೊಡ್ಡ ಕುಳಗಳೇ ಇವೆ. ಮಂಗಳೂರು ಆರೆಸ್ಸೆಸ್ಸಿನ ಹಿರಿತಲೆ ಎಂ.ಬಿ.ಪುರಾಣಿಕ್, ಸ್ಥಳೀಯ ಕಾಂಗ್ರೆಸ್ ನಾಯಕ ರಮೇಶ್ ಕುಮಾರ್ ಇವರಿಬ್ಬರು ವ್ಯಕ್ತಿಗಳಾದರೆ ಇವೆಲ್ಲಕ್ಕಿಂತಲೂ ಮುಖ್ಯವಾಗಿ ಸಾವಿರಾರು ಕೋಟಿ ಬೆಲೆಬಾಳುವ ಸ್ವತಃ ವಿನಾಯಕ ಬಾಳಿಗಾನ ಆರಾಧ್ಯದೈವ 'ವೆಂಕಟರಮಣನ ಸನ್ನಿಧಿಯ ಧರ್ಮಸೇವಕರು' ಇದ್ದಾರೆ. ಈ ಕೊನೆಯ ಕಾರಣಕ್ಕಾಗಿ ಬಾಳಿಗಾ ಕೊಂಕಣಿ ಬ್ರಾಹ್ಮಣ ಸಮುದಾಯದ ಬಹುತೇಕರನ್ನು ಎದುರು ಹಾಕಿಕೊಂಡಿದ್ದರು. ಇದಕ್ಕಾಗಿ ಬಾಳಿಗಾನ ಮೇಲೆ ಹಗೆ ಸಾಧಿಸುತ್ತಿದ್ದವರು ಹಲವರಿದ್ದರು. ಆದರೆ ಅದ್ಯಾವುದೂ ಕೊಲ್ಲುವ ಮಟ್ಟಕ್ಕೆ ತಲುಪಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ.


ಮಂಗಳೂರಿನ ಗೌಡ ಸಾರಸ್ವತ ಬ್ರಾಹ್ಮಣರ (ಕೊಂಕಣಿ ಬ್ರಾಹ್ಮಣರ) ಬಹುಮುಖ್ಯ ದೇವಸ್ಥಾನ ರಥಬೀದಿಯ ವೆಂಕಟರಮಣ ದೇವಸ್ಥಾನ. ಸದ್ರಿ ದೇವಸ್ಥಾನಕ್ಕೆ 1927ರಲ್ಲಿ ಮದ್ರಾಸ್ ಹೈಕೋರ್ಟ್‌ನ ಮೂಲಕ ಒಂದು ಬೈಲಾ ರಚಿಸಲಾಗಿತ್ತು, ಅದರಲ್ಲಿ ಪೂಜೆಪುನಸ್ಕಾರ ಇತ್ಯಾದಿಗಳ ಬಗ್ಗೆ ಉಲ್ಲೇಖ ಮಾಡಲಾಗಿತ್ತೇ ಹೊರತು ದೇವಸ್ಥಾನಕ್ಕೆ ಹರಿದುಬರುವ ದುಡ್ಡನ್ನು ಏನು ಮಾಡಬೇಕೆಂದು ಉಲ್ಲೇಖ ಇರಲಿಲ್ಲ, ಆರ್ಥಿಕವಾಗಿ ಬಲಾಢ್ಯವಾಗಿದ್ದ ಕೊಂಕಣಿ ಬ್ರಾಹ್ಮಣ ಸಮುದಾಯ ಸಹಜವಾಗಿಯೇ ತಮ್ಮ ಆರಾಧ್ಯದೈವ ವೆಂಕಟರಮಣನಿಗೆ ಕಾಲಕಾಲಕ್ಕೆ ಚಿನ್ನ ಬೆಳ್ಳಿ ಮತ್ತಿತರ ಬೆಲೆಬಾಳುವ ವಸ್ತುಗಳನ್ನು ಮತ್ತು ದೊಡ್ಡ ಮೊತ್ತದ ದುಡ್ಡನ್ನು ಕಾಣಿಕೆಯಾಗಿ ನೀಡುತ್ತಿತ್ತು, ಆದರೆ ಇದ್ಯಾವುದಕ್ಕೂ ಸರಿಯಾಗಿ ಲೆಕ್ಕ ಇಡಲಾಗುತ್ತಿರಲಿಲ್ಲ, ಕಾಲಕಾಲಕ್ಕೆ ಬಂದ ದುಡ್ಡನ್ನು ಅನಾಮತ್ತಾಗಿ ಎತ್ತಿಕೊಂಡು ಕಾಶಿಮಠ ಎಂಬ ಕೊಂಕಣಿ ಬ್ರಾಹ್ಮಣರ ಪ್ರಮುಖ ಮಠಕ್ಕೆ ಕೊಡಲಾಗುತ್ತಿತ್ತು, ಹೀಗೆ ಕೊಡುವುದರಲ್ಲಿ ಕೆಲವು ಪ್ರತಿಷ್ಠಿತರ ಕೈವಾಡವಿತ್ತು, ಕಾಶಿಮಠದ ದೈವಿಕ ಕಾರ್ಯಕ್ರಮಗಳಿಗಾಗಿ ದುಡ್ಡು ಕೊಡುವುದನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಬರುತ್ತಿರಲಿಲ್ಲ, ಹಾಗೆ ವೆಂಕಟರಮಣನ ದುಡ್ಡೇನೋ ಕಾಶಿಮಠಕ್ಕೆ ಹೋಗುತ್ತಿತ್ತು, ಇಲ್ಲಿ ಕಾಶಿಮಠದ ಪರವಾಗಿ ವಕಾಲತ್ತು ವಹಿಸುವವರಿಗೆ ಅದರ ಪರ್ಸೆಂಟ್ ಕೂಡಾ ಸಿಗುತ್ತಿತ್ತು, ಲೆಕ್ಕ ಕೊಡಿ ಎಂದು ಕೇಳುವವರಲ್ಲಿ ಮೃತ ವಿನಾಯಕ್ ಬಾಳಿಗಾ ಪ್ರಮುಖರಾಗಿದ್ದರು. ಮತ್ತೆ ಮತ್ತೆ ಲೆಕ್ಕ ಕೇಳುತ್ತಾ ದೇವರಸೇವಕರನ್ನೇ ಕೋರ್ಟಿಗೆಳೆದ ಬಾಳಿಗಾ ಕೊಂಕಣಿ ಬ್ರಾಹ್ಮಣ ಸಮುದಾಯಕ್ಕೆ ಅತೀ ದೊಡ್ಡ ತಲೆನೋವಾಗಿದ್ದರು. ವಿನಾಯಕ ಬಾಳಿಗಾರು ಮಾಹಿತಿ ಹಕ್ಕು ಮತ್ತಿತರ ಮೂಲಗಳಿಂದ ಪಡೆದ ಮಾಹಿತಿಯನ್ವಯ ಕೋಟ್ಯಾಂತರ ರೂಪಾಯಿ ದುಡ್ಡು ಸೋರಿಕೆಯಾಗುವುದು ತಿಳಿದುಬಂತು. ಇದನ್ನು ಸಹಿಸದ ಬಾಳಿಗಾ ಹೊಸ ಬೈಲಾ ನಿರ್ಮಿಸಬೇಕೆಂದು ವೆಂಕಟರಮಣ ಟೆಂಪಲ್ ಟ್ರಸ್ಟ್‌ನ ಮುಂದೆ ಪ್ರಸ್ತಾಪವಿಟ್ಟರು, ಬಾಳಿಗಾರ ಪ್ರಸ್ತಾವವನ್ನು ನುಂಗಣ್ಣಗಳು ಲೆಕ್ಕಕ್ಕೆ ತೆಗೆದುಕೊಳ್ಳಲೇ ಇಲ್ಲ, ಇದನ್ನು ಹೀಗೆ ಬಿಟ್ಟರಾಗದೆಂದು ಬಾಳಿಗಾ ನ್ಯಾಯಾಲಯದ ಮೆಟ್ಟಿಲೇರಿ ಹೊಸ ಬೈಲಾಕ್ಕಾಗಿ ಮೊರೆಯಿಟ್ಟರು. ಸ್ಥಳೀಯ ನ್ಯಾಯಾಲಯ ಉಳ್ಳವರ ಮತ್ತು ಪಟ್ಟಭದ್ರರ ತಾಕತ್ತಿನಿಂದಲೋ ಏನೋ ಎಂಬಂತೆ ಮೊಕದ್ದಮೆಯನ್ನು ತಿರಸ್ಕರಿಸಿತು. ಆದರೆ ಬಾಳಿಗಾ ಅಷ್ಟು ಸುಲಭಕ್ಕೆ ಸೋಲೊಪ್ಪುವ ಆಸಾಮಿಯೇನಲ್ಲ, ಬಾಳಿಗಾ ಹೈಕೋರ್ಟ್ ಮೆಟ್ಟಿಲೇರಿದರು. ಹೈಕೋರ್ಟ್ ಬಾಳಿಗಾರ ದೂರನ್ನು ಮಾನ್ಯ ಮಾಡಿತು. ಸದ್ರಿ ತೀರ್ಪು ಸರಿಯಿಲ್ಲ ಮರು ವಿಚಾರಣೆ ನಡೆಸಿ ಎಂದು ಸ್ಥಳೀಯ ನ್ಯಾಯಾಲಯಕ್ಕೆ ಆದೇಶಿಸಿತು. ಸದ್ರಿ ಆದೇಶದ ಪ್ರಕಾರ ಸ್ಥಳೀಯ ನ್ಯಾಯಾಲಯ ಮರು ವಿಚಾರಣೆ ಕೈಗೆತ್ತಿಕೊಂಡಿತ್ತು, ಇನ್ನೇನು ಹೊಸ ಬೈಲಾ ರಚಿಸಲು ಕೋರ್ಟ್ ಆದೇಶ ನೀಡಲೊಂದೇ ಬಾಕಿಯಿತ್ತು, ಅಷ್ಟೊತ್ತಿಗೆ ಬಾಳಿಗಾರನ್ನು ವೆಂಕಟರಮಣನ ಪಾದ ಸೇರಿಸಲಾಗಿದೆ.

ವೆಂಕಟರಮಣ ಟೆಂಪಲ್ ಟ್ರಸ್ಟ್‌ನ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಆಸ್ತಿಯ ಪರಭಾರೆಯ ಕತೆಯಂತೂ ಬಹಳ ದೊಡ್ಡದಿದೆ. ಅದನ್ನು ಟ್ರಸ್ಟ್ ತನಗೆ ಬೇಕಾದಂತೆ ದುರುಪಯೋಗಪಡಿಸುತ್ತಿದ್ದುದನ್ನು ಕಂಡು ಬಾಳಿಗಾ ಸಿಕ್ಕಾಪಟ್ಟೆ ಸಿಟ್ಟಾಗಿದ್ದರು.


ಮೃತ ವಿನಾಯಕ ಬಾಳಿಗಾರ ವಯೋವೃದ್ಧ ತಂದೆ

ಮಂಗಳೂರು ನಗರದ ಕಾರ್‌ಸ್ಟ್ರೀಟ್ ಪರಿಸರದಲ್ಲಿ ಭೂಮಿಗೆ ಸೆಂಟ್‌ವೊಂದಕ್ಕೆ ಕಡಿಮೆಯೆಂದರೂ ಅರ್ಧ ಕೋಟಿ ಬೆಲೆಬಾಳುತ್ತದೆ. ಅಂತಹ 33 ಸೆಂಟ್ಸ್ ಜಾಗವನ್ನು ಸಮಾಜ ಬಾಂಧವರಲ್ಲಿ ಹೇಳದೇ ಕೇಳದೇ ಟ್ರಸ್ಟಿಗಳು ಕಾಶಿಮಠದ ಸ್ವಾಮಿಗೆ 'ಜೀರೋ ಬಿಲ್ಲಿಂಗ್'ನಲ್ಲಿ ಸೇಲ್ ಡೀಡ್ ಮಾಡಿ ಧಾರೆಯೆರೆದಿದ್ದಾರೆ.

ಶ್ರೀನಿವಾಸ ನಿಗಮಾಗಮ ಪಾಠಶಾಲೆ ಎಂಬ ವೈದಿಕ ಪಾಠಶಾಲೆ ನಡೆಸಲಾಗುತ್ತಿದ್ದ ಜಮೀನನ್ನು ಕಾಶಿ ಮಠದ ಸ್ವಾಮಿಗೆ ಎತ್ತಿ ಕೊಟ್ಟದನ್ನು ಪ್ರಶ್ನಿಸುವ ಧೈರ್ಯ ತೋರಿದ ಏಕೈಕ ಗಂಡಸು ಮೃತ ವಿನಾಯಕ ಬಾಳಿಗಾ..... ಈ ವಿನಾಯಕ ಬಾಳಿಗಾರನ್ನು ಕಡೆಗಣಿಸುವಂತೆಯೂ ಇಲ್ಲ, ಆತ ಅನ್ಯಾಯ ಅಕ್ರಮಗಳನ್ನು ಪ್ರಶ್ನಿಸಿ ಅಲ್ಲಿಗೆ ಸುಮ್ಮನಾಗುವುದಿಲ್ಲ, ಯಾವುದೇ ಪ್ರಕರಣವನ್ನು ಅರ್ಧದಲ್ಲಿ ಕೈ ಬಿಡುವ ಜಾಯಮಾನ ಬಾಳಿಗಾರದ್ದಲ್ಲ, ಬಾಳಿಗಾರ ಈ ನ್ಯಾಯ ಪಕ್ಷಪಾತ ಹಠಮಾರಿ ನಿಲುವೇ ಅವರನ್ನು ವೆಂಕಟರಮಣನ ಪಾದ ಸೇರಿಸಿದೆ.



ಸೂಲಿಬೆಲೆ ಜೊತೆ ನರೇಶ್ ಶೆಣೈ....

ವಿನಾಯಕ ಬಾಳಿಗಾರ ಇನ್ನೊಂದು ಪ್ರಮುಖ ಬೇಡಿಕೆಯೇನೆಂದರೆ ಕಳೆದ 8 ವರ್ಷಗಳ ದೇವಳದ ಲೆಕ್ಕಪತ್ರಗಳು ರೀ ಆಡಿಟ್ ಮಾಡಬೇಕೆಂಬುದು. ಅದಕ್ಕಾಗಿ ಬಾಳಿಗಾ ನ್ಯಾಯಾಲಯದಲ್ಲಿ ಮತ್ತೊಂದು ದಾವೆ ಹೂಡಿದ್ದರು. ಇದರಿಂದ ಕನಲಿದ ಟ್ರಸ್ಟಿಗಳು ಅದನ್ನು ಕೈಬಿಡಲು ಬಾಳಿಗಾರಲ್ಲಿ ಪರಿಪರಿಯಾಗಿ ಬೇಡಿಕೊಂಡಿದ್ದಾರೆ. ಬಾಳಿಗಾ ಟ್ರಸ್ಟಿಗಳಲ್ಲಿ ಕೇಳಿದ ಒಂದೇ ಒಂದು ಪ್ರಶ್ನೆ 'ಲೆಕ್ಕಾಚಾರವೆಲ್ಲಾ ಪಾರದರ್ಶಕವಾಗಿದ್ದರೆ ರೀ ಆಡಿಟ್ ಮಾಡಿಸಲು ನಿಮಗೇಕೆ ಭಯ?' ಟ್ರಸ್ಟಿಗಳ ಪರವಾಗಿ ನ್ಯಾಯಾಲಯದಲ್ಲಿ ಜಗನ್ನಾಥ ಕಾಮತ್ ಎಂಬವರು ಲೆಕ್ಕಪತ್ರಗಳು 99% ಸರಿಯಾಗಿಯೇ ಇದೆ ಎಂದು ತಮ್ಮ ಹೇಳಿಕೆಯನ್ನು ನೀಡಿದರು. ನ್ಯಾಯಾಲಯ ಆಗ ಜಗನ್ನಾಥ ಕಾಮತ್‌ಗೆ ಕೇಳಿದ ಪ್ರಶ್ನೆ "99% ಸರಿಯಾಗಿಯೇ ಇದ್ದರೆ 1% ಮಾತ್ರ ಪ್ರಮಾದವಾಗಿರಬಹುದು. ಅದು ಮನುಷ್ಯ ಸಹಜ. ಹಾಗಿರುವಾಗ ನೀವೇಕೆ ರೀ ಆಡಿಟ್‌ಗೆ ಒಪ್ಪುತ್ತಿಲ್ಲ" ಎಂಬುದು. ನ್ಯಾಯಾಲಯ ರೀ ಆಡಿಟ್‌ಗಾಗಿ ನಿತಿನ್ ಶೆಟ್ಟಿ ಎಂಬ ಆಡಿಟರ್ ಒಬ್ಬರನ್ನು ನೇಮಿಸಿ ತಿಂಗಳು ಮೂರು ಕಳೆದರೂ ದೇವಳದ ಅಧಿಕೃತ ಆಡಿಟರ್ ಜಗನ್ನಾಥ ಕಾಮತ್ ವಾಯಿದೆಯ ಮೇಲೆ ವಾಯಿದೆ ಇಡುತ್ತಾ ಬಂದಿದ್ದಾರೆಯೇ ಹೊರತು ಈವರೆಗೆ ಹಳೆ ಲೆಕ್ಕಪತ್ರಗಳನ್ನು, ದಾಖಲೆಗಳನ್ನು ನೀಡಿಲ್ಲ, ಸಬೂಬಿನ ಮೇಲೆ ಸಬೂಬು ಕೊಟ್ಟು ನ್ಯಾಯಾಲಯ ನಿಂದನೆ ಮಾಡುತ್ತಿದ್ದಾರೆ. ಇದಕ್ಕೆಲ್ಲಾ ಕಾರಣರಾದ ವಿನಾಯಕ ಬಾಳಿಗಾರನ್ನು ವೆಂಕಟರಮಣನ ಪಾದಕ್ಕೆ ಅಟ್ಟಿದರೆ ನೆಮ್ಮದಿಯ ನಿಟ್ಟುಸಿರು ಬಿಡಬಹುದೆಂದು ವೆಂಕಟರಮಣನ ಸನ್ನಿಧಿಯಲ್ಲೇ ವೆಂಕಟರಮಣನ ಪರಮ ಭಕ್ತನ ಕೊಲೆಗೆ ಸ್ಕೆಚ್ ರೂಪಿಸಲಾಗಿದೆ.

2012 ರಲ್ಲಿ ವೆಂಕಟರಮಣ ದೇವಸ್ಥಾನವನ್ನು ಸುಮಾರು 22 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಇದರಲ್ಲೂ ಅವ್ಯವಹಾರದ ವಾಸನೆ ಬಾಳಿಗಾರ ಮೂಗಿಗೆ ಬಡಿದಿದೆ. ಬಾಳಿಗಾ ಎಲ್ಲಾ ದಾಖಲೆ ಪತ್ರಗಳನ್ನು ತೆಗೆದು ಲೆಕ್ಕ ಹಾಕಿದಾಗ ಸುಮಾರು 6-7 ಕೋಟಿ ರೂಪಾಯಿ ವೆಂಕಟರಮಣನ ಪಾದ ಸೇವಕರ ತಿಜೋರಿಗೆ ಬಿದ್ದಿರುವುದು ತಿಳಿದು ಬಂದು ಅದಕ್ಕೂ ಕ್ಯಾತೆ ಎತ್ತಿದ್ದಾರೆ.


ಇವೆಲ್ಲಾ ಅವ್ಯವಹಾರ ಲಫಡಾಗಳ ಹಿಂದೆ ವೆಂಕಟರಮಣನ ಕೆಲವು ಬಲಿಷ್ಠ ಸೇವಕರಿದ್ದಾರೆ. ಆ ಗುಂಪಿನ ನಾಯಕ ಮಂಗಳೂರು 'ನಮೋ ಬ್ರಿಗೇಡ್'ನ ಸಂಚಾಲಕ ನರೇಶ್ ಶೆಣೈ. ಈ ನರೇಶ ಶೆಣೈಗೆ ಬಾಳಿಗಾ ತನ್ನ ಬುಡಕ್ಕೇ ಕೈ ಹಾಕುವುದನ್ನು ಸಹಿಸಲಾಗಲಿಲ್ಲ, ಹೇಳಿಕೇಳಿ ಈ ನರೇಶ್ ಶೆಣೈ ಮಂಗಳೂರಿನ ಮುಂದಿನ ಬಿಜೆಪಿ ಎಂಎಲ್‌ಎ ಕ್ಯಾಂಡಿಡೇಟ್. ಈತ ತನ್ನ ದಾರಿ ಸುಗಮವಾಗಲೆಂದೇ ಎರಡು ವರ್ಷಗಳ ಹಿಂದೆ ತನ್ನ ಸ್ವಜಾತಿ ಬಂಧು ಅನಾಹುತಕಾರಿ ಚೆಡ್ಡಿ ಶ್ರೀಕರ ಪ್ರಭುವನ್ನೇ ಪಾರ್ಟಿಯಿಂದ ಹೊರಗಟ್ಟಿದ್ದಾನೆ. ತನ್ನ ಎಂಎಲ್‌ಎ ಕನಸಿನ ಹಾದಿ ಇನ್ನೇನು ಸುಗಮವಾಯಿತು ಎಂದು ನಿರಾಳವಾಗಿ ಮೋದಿ ಭಜನೆಯ 'ನಮೋ ಬ್ರಿಗೇಡ್' ಕಟ್ಟಿಕೊಂಡು ಅವಾಂತರಕಾರಿ ರಾಜಕೀಯ ಮಾಡುತ್ತಿರುವಾಗ ಈತನ ಧರ್ಮಕಾರಣದ ಬಂಡವಾಳ ಬಯಲು ಮಾಡಿದ ವಿನಾಯಕ ಬಾಳಿಗಾರನ್ನು ವೆಂಕಟರಮಣನ ಪಾದಕ್ಕಟ್ಟಿದ್ದಾನೆ. ಈ ಬಾಳಿಗಾ ಇನ್ನೂ ಬದುಕಿದ್ದರೆ ತಾನು ಶ್ರೀಕೃಷ್ಣ ಜನ್ಮಸ್ಥಾನ ಸೇರುವುದು ಖಚಿತ ಎಂದು ಗೊತ್ತಾಗುತ್ತಲೇ ಕೆಲವು ಹೊಸ ಯುವಕರಿಗೆ ಮಚ್ಚು ದೀಕ್ಷೆ ಕೊಟ್ಟು ಕಳುಹಿಸಿದ್ದಾನೆ. ಈತನ ನೆಟ್‌ವರ್ಕ್ ಎಷ್ಟು ಬಲಿಷ್ಠವಾಗಿದೆಯೆಂದರೆ ಈತ ಸಾಮಾಜಿಕ ಜಾಲತಾಣಗಳಲ್ಲಿ ತನ್ನ ಪಡೆಗಳಿಂದ ಬಾಳಿಗಾನ ಸಾವಿನ ಚರ್ಚೆ ನಡೆಸುತ್ತಿದ್ದಾನೆ ಮತ್ತು ಬಿಲ್ಡರ್ ಮಾಫಿಯಾಗಳೇ ವಿನಾಯಕ ಬಾಳಿಗಾರನ್ನು ಕೊಂದು ಹಾಕಿದೆ ಎಂಬ ವದಂತಿಯನ್ನು ಹಬ್ಬಿಸುತ್ತಿದ್ದಾನೆ.

ಪೊಲೀಸರಿಗೆ ಸತ್ಯ ಗೊತ್ತಿದ್ದರೂ ಈತನನ್ನು ಬಂಧಿಸುವ ಧೈರ್ಯವಿಲ್ಲ, ಯಾವಾಗ ವಿಚಾರವಾದಿ ನರೇಂದ್ರ ನಾಯಕರು ಈ ಕೇಸಿನ ಹಿಂದೆ ಬಿದ್ದರೋ ಆಗಿಂದ ಪೊಲೀಸ್ ಇಲಾಖೆಗೂ ಚಳಿ ಹಿಡಿದಿದೆ. ಕೂಡಲೇ ಮೈ ಕೊಡವಿದ ಬರ್ಕೆ ಠಾಣೆಯ ಪೊಲೀಸರು ನರೇಶನ ಹುಡುಕಾಟದ ನಾಟಕ ಶುರುವಿಟ್ಟಿದ್ದಾರೆ. ಬಹುಶಃ ಇಲಾಖೆಯೊಳಗಿನಿಂದಲೇ ಮಾಹಿತಿ ಪಡೆದ ನರೇಶ 29 ನೇ ತಾರೀಕಿನಿಂದ ಭೂಗತನಾಗಿದ್ದಾನೆ. ಈತ ಮಂಗಳೂರು ಸಂಸದ ನಳಿನ್ ಕುಮಾರ್ 'ಕುಟೀಲ'ನ ಪರಮಾಪ್ತನಾದುದರಿಂದ ಈತನನ್ನು ಬಚಾವ್ ಮಾಡಲು ಕುಟೀಲನೂ ಕೈ ಚಳಕ ತೋರಿಸುವ ಸಾಧ್ಯತೆಯಿದೆ.

ಪುರಾಣಿಕ್ ಅಡ್ಡೆಗೆ ಕೈಹಾಕಿದ ಬಾಳಿಗಾ

ವಿನಾಯಕ ಬಾಳಿಗಾ ಸಾಮಾನ್ಯ ಶಕ್ತಿಯೇನಲ್ಲ, ಆದರು ಆತ ಮಾಡಿದ ಏಕೈಕ ತಪ್ಪು ಇಂತಹ ಅನಾಹುತಕಾರಿ ವಿಷಜಂತುಗಳ ಹುತ್ತಕ್ಕೆ ಒಬ್ಬಂಟಿಯಾಗಿ ನುಗ್ಗಿದ್ದು. ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಸಂಘದ ಅಧೀನದಲ್ಲಿ ಶಾರದಾ ವಿದ್ಯಾಲಯ ಎಂಬ ವಿಷಬೋಧನೆಯ ಶಾಲೆಯೊಂದು ಕಾರ್ಯಾಚರಿಸುತ್ತಿದೆ. ಎಂ.ಪಿ ಪುರಾಣಿಕ್ ಎಂಬ ಹಳೇ ಚೆಡ್ಡಿ ಮಹಾನಗರ ಪಾಲಿಕೆಯಿಂದ ಕೇವಲ 970 ಚದರ ಮೀಟರ್‌ನ ಕಟ್ಟಡಕ್ಕೆ ಅನುಮತಿ ಪಡೆದು 2015 ಚದರಮೀಟರ್‌ನಷ್ಟು ದೊಡ್ಡ ಬೃಹತ್ ಕಟ್ಟಡವನ್ನು ನಿರ್ಮಿಸಿದ್ದಾನೆ. ಇದೇನೂ ಸಣ್ಣ ಉಲ್ಲಂಘನೆಯಲ್ಲ, ಅನುಮತಿ ಪಡೆದುದರ ಎರಡುಪಟ್ಟು ಕಟ್ಟಡ ನಿರ್ಮಿಸಿ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾನೆ. ಈತ ಪಾರ್ಕಿಂಗ್‌ಗೆಂದು ಸಾರ್ವಜನಿಕ ಸ್ಥಳವನ್ನು ಕಬಳಿಸಿ ರಸ್ತೆ ಮತ್ತಷ್ಟು ಇಕ್ಕಟ್ಟಾಗುವಂತೆ ಮಾಡಿದ್ದಾನೆ. ಈ ಕುರಿತು ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ಪಡೆದ ಬಾಳಿಗಾ





ರಮೇಶ್ ಕುಮಾರನ ಮೌರಿಶ್ಕಾ ಪ್ಯಾಲೆಸ್


ಸಾರ್ವಜನಿಕ ರಸ್ತೆಗೆ ಬಿಡಲಾಗಿರುವ ಮೌರಿಶ್ಕಾ ಪ್ಯಾಲೆಸ್‌ನ ಕೊಳಚೆ ನೀರು

ಮನಪಾ ಆಯುಕ್ತರ ಮೊರೆ ಹೋಗಿದ್ದರು. ಮಾರ್ಚ್ 24 ರಂದು ಮಂಗಳೂರು ಮಹಾನಗರಪಾಲಿಕೆಯ ಆಯುಕ್ತರ ಕಚೇರಿಯಲ್ಲಿ ಈ ಪ್ರಕರಣದ ವಿಚಾರಣೆ ನಡೆಯಬೇಕಿತ್ತು. ಆದರೆ ಮಾರ್ಚ್ 21ರ ಮುಂಜಾನೆ ಬಾಳಿಗಾರನ್ನು ಬಾರದ ಲೋಕಕ್ಕೆ ಅಟ್ಟಲಾಗಿದೆ.

ಕಾಂಗ್ರೆಸ್ ಪುಢಾರಿ ರಮೇಶ್‌ಕುಮಾರ

ವಿನಾಯಕ ಬಾಳಿಗಾ ನಿಜಕ್ಕೂ ಜನಪರ ಕಾಳಜಿಯಿರುವ ಪ್ರಾಮಾಣಿಕ ಮಾಹಿತಿ ಹಕ್ಕು ಕಾರ್ಯಕರ್ತನಾಗಿದ್ದರು. ರಮೇಶ್ ಕುಮಾರ್ ಎಂಬ ಬಿಲ್ಡರ್ ಕಂ ಕಾಂಗ್ರೆಸ್ ಪುಢಾರಿ 'ಮೌಶ್ಮಾ ಪ್ಯಾಲೇಸ್' ಎಂಬ 360 ಫ್ಲ್ಯಾಟ್‌ಗಳ ಬೃಹತ್ ಅಪಾರ್ಟ್‌ಮೆಂಟ್ ಕಟ್ಟಿ ಈಗಾಗಲೇ ಫ್ಲ್ಯಾಟ್‌ಗಳನ್ನು ಮಾರಿ ಬಿಟ್ಟಾಗಿದೆ. ನಿಯಮಾವಳಿಗಳ ಪ್ರಕಾರ 100ಕ್ಕಿಂತ ಹೆಚ್ಚು ಫ್ಲಾಟ್‌ಗಳಿರುವ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿಸುವಾಗ ಪ್ರತ್ಯೇಕ ಕೊಳಚೆ ನೀರು ಸಂಸ್ಕರಣಾ ಘಟಕ (Sewage treatment plant) ನಿರ್ಮಿಸಬೇಕು. ಅದಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ರಮೇಶ್ ಕುಮಾರ್ ಅಧಿಕಾರಿಗಳಿಗೆ ಅಮೇಧ್ಯ ತಿನ್ನಿಸಿ ಸಂಸ್ಕರಣಾ ಘಟಕವನ್ನು ನಿರ್ಮಿಸದೇ ದಕ್ಕಿಸಿಕೊಂಡಿದ್ದಾನೆ. ಮಾಹಿತಿ ಹಕ್ಕು ಕಾಯಿದೆಯಡಿ ಈ ಕುರಿತ ಮಾಹಿತಿ ಪಡೆದು ಬಾಳಿಗಾ ರಮೇಶ್ ಕುಮಾರ್‌ನಿಗೆ ನೋಟಿಸ್ ಜಾರಿ ಮಾಡಿದ್ದಾರೆ. ವಿನಾಯಕ ಬಾಳಿಗಾರ ಶಕ್ತಿಯೇನೆಂದರಿತ ರಮೇಶ್ ಕುಮಾರ್ ಬಾಳಿಗಾರನ್ನು ರಾಜಿಗೆ ಕರೆದ. 25 ಲಕ್ಷ ರೂಪಾಯಿಗಳ ಆಮಿಷ ಒಡ್ಡಿದ. ಪ್ರಾಮಾಣಿಕ ಹೋರಾಟಗಾರ ಬಾಳಿಗಾ ರಮೇಶ್ ಕುಮಾರ್‌ನಿಗೇ ಉಗಿದು ಬಂದಿದ್ದಾರೆ. ಮೊದಲೇ ಮಲೇರಿಯಾ ಸೊಳ್ಳೆಗಳ ಫ್ಯಾಕ್ಟರಿಯಂತಿರುವ ಮಂಗಳೂರು ನಗರದಲ್ಲಿ ರಮೇಶ್ ಕುಮಾರ್‌ನಂತಹ ಬಿಲ್ಡರ್‌ಗಳು



ಬಾಳಿಗಾ ಕೊಲೆಯಾದ ಜಾಗ ಮತ್ತು ಸ್ಕೂಟರ್

ನಿಯಮಬಾಹಿರವಾಗಿ ಕಟ್ಟಿರುವ ಫ್ಲ್ಯಾಟ್‌ಗಳ ಕೊಳಚೆ ನೀರನ್ನು ಸಾರ್ವಜನಿಕರು ನಡೆದಾಡುವ ರಸ್ತೆಗಳ open drainage ಗೆ, ನೇರವಾಗಿ ಮಾರ್ಗಕ್ಕೆ ಬಿಟ್ಟು ಮಂಗಳೂರಿಗರನ್ನು ಮತ್ತಷ್ಟು ಹೈರಾಣಾಗಿಸುತ್ತಿದ್ದಾರೆ. ರಮೇಶ್ ಕುಮಾರ್‌ನ ಮೌರಿಶ್ಮಾ ಅಪಾರ್ಟ್‌ಮೆಂಟ್‌ನಿಂದ ರಸ್ತೆಗೆ ನೀರು ಹರಿಯುತ್ತಿರುವ ಚಿತ್ರವನ್ನು ತೆಗೆದು ಬಾಳಿಗಾ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿ, ನ್ಯಾಯಾಲಯಕ್ಕೂ ಒಪ್ಪಿಸಿದ್ದಾರೆ. ಇದಾಗ್ಯೂ ರಮೇಶ್ ಕುಮಾರ್ ನಿಯಮಗಳನ್ನು ಮೀರಿ ಮುಂದಡಿಯಿಡುತ್ತಿದ್ದ. ಒಂದು ಮೂಲದ ಪ್ರಕಾರ ರಮೇಶ್ ತನ್ನ ಫ್ಲ್ಯಾಟ್‌ವಾಸಿಗಳಿಂದ ತಲಾ ಒಂದೊಂದು ಲಕ್ಷ ರೂಪಾಯಿಯನ್ನು ಹೆಚ್ಚುವರಿಯಾಗಿ ಸಂಸ್ಕರಣಾ ಘಟಕಕ್ಕೆಂದು ಪಡೆದು ಅದನ್ನೂ ನುಂಗಿ ಹಾಕಿದ್ದಾನೆ.

ಇಂತಹ ಹಲವಾರು ಜನವಿರೋಧಿ ಮಾಫಿಯಾಗಳ, ಅಧಿಕಾರಿಗಳ ಧರ್ಮಕಾರಣಿಗಳ ಬಂಡವಾಳವನ್ನು ಬಯಲಿಗೆಳೆಯುತ್ತಾ ಬಂದ ವಿನಾಯಕ ಬಾಳಿಗಾರನ್ನು ಮುಗಿಸುವ ಜರೂರತ್ತು ಬಹಳಷ್ಟು ಅಧ್ವ ಕಸುಬಿಗಳಿಗಿತ್ತು. ಕೇವಲ ಸುಪಾರಿ ಕಿಲ್ಲರ್‌ಗಳನ್ನು ಮಾತ್ರ ಬಂಧಿಸಿರುವ ಬರ್ಕೆ ಪೊಲೀಸರು ಅವರ ಹಿಂದೆ ನಿಂತು ಕೊಲೆ ಮಾಡಿಸಿದ ಸಮಾಜದ ಉನ್ನತ ಸ್ಥಾನದಲ್ಲಿರುವ ಸಮಾಜಘಾತುಕ ಶಕ್ತಿಗಳನ್ನು ಬಂಧಿಸಿ ಜೈಲಿಗಟ್ಟಬೇಕಾಗಿರುವುದು ತುರ್ತು ಅಗತ್ಯ.

ಈ ಪ್ರಕರಣವನ್ನು ಬೇಧಿಸಿದರೆ ಮಂಗಳೂರಿನ ಬಹಳಷ್ಟು ಸ್ವಘೋಷಿತ ಸಂಭಾವಿತರ ಮುಖವಾಡ ಕಳಚಿ ಬೀಳಲಿದೆ. ಈ ನಿಟ್ಟಿನಲ್ಲಿ ಗೃಹ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಮುತುವರ್ಜಿಯಿಂದ ಈ ಪ್ರಕರಣದ ಸಮಗ್ರ ತನಿಖೆಗೆ ಆದೇಶಿಸಿ ತಪ್ಪಿತಸ್ಥರನ್ನು ಕಂಬಿಗಳೊಳಗೆ ತಳ್ಳಲು ಆಸ್ಥೆ ತೋರಬೇಕಾಗಿದೆ, ನ್ಯಾಯ ಕೇಳುವವರ ಹಕ್ಕನ್ನು ಮನ್ನಿಸಬೇಕಾಗಿದೆ, ಮತ್ತವರಿಗೆ ರಕ್ಷಣೆ ನೀಡಬೇಕಾಗಿದೆ.

■ ವರದಿಗಾರ

ಮಹಾದಾಯಿ ಹೋರಾಟ: ಹುರಿಗೊಳ್ಳುತ್ತಿದೆ ರೈತರ ಆಕ್ರೋಶ



ಉತ್ತರ ಕರ್ನಾಟಕದ ರೈತರು ಮಹಾದಾಯಿ ನದಿ ನೀರಿನ ಹೋರಾಟಕ್ಕಿಳಿದು ಇಲ್ಲಿಗೆ 250 ದಿನಗಳೇ ಸರಿದುಹೋದವು. ಆದರೆ ಸರ್ಕಾರಗಳಿಂದ ಕಿಂಚಿತ್ತೂ ಭರವಸೆ ಸುಳಿದಾಡಿಲ್ಲ. ಕೇಂದ್ರದ ಮೇಲೆ ರಾಜ್ಯ, ರಾಜ್ಯದ ಮೇಲೆ ಕೇಂದ್ರ ಸರ್ಕಾರ ಕೆಸರೆರಚಾಡುತ್ತಲೆ ದಿನದೂಡುತ್ತಿವೆಯೇ ಹೊರತು ರೈತರಿಗೆ ನ್ಯಾಯ ದೊರಕಿಸಿಕೊಡುವ ವಿಚಾರದಲ್ಲಿ ಇಬ್ಬರಿಗೂ ಕಾಳಜಿ ಇಲ್ಲವೆನ್ನುವುದು ಸಾಬೀತಾಗಿದೆ. ಹಾಗಂತ ಧಾರವಾಡ, ಗದಗ, ಬೆಳಗಾಂ ಭಾಗದ ರೈತರ ಹೋರಾಟವೇನೂ ಸೊರಗುತ್ತಿಲ್ಲ. ದಿನದಿಂದ ದಿನಕ್ಕೆ ದೃಢವಾಗುತ್ತಲೇ ಬರುತ್ತಿದೆ. ಮಾರ್ಚ್ 15ರಂದು ನಡೆದ ರೈಲುರೋಕೋ ಚಳವಳಿ ರೈತರೊಳಗಿನ ಆಕ್ರೋಶದ ಪ್ರತಿರೂಪದಂತಿತ್ತು, ಬರೋಬ್ಬರಿ ಏಳುಗಂಟೆಗಳ ಕಾಲ ರೈಲ್ವೆ ಹಳಿಗಳ ಮೇಲೆ ಅಡ್ಡಡ್ಡ ಮಲಗಿ ಪ್ರತಿಭಟಿಸಿದ ರೈತರು ಅವತ್ತು 20 ಪ್ರಯಾಣಿಕ ಹಾಗೂ 12 ಗೂಡ್ಸ್ ರೈಲುಗಳನ್ನು ಹಳಿಗಳ ಮೇಲೆಯೇ ನಿಲ್ಲಿಸಿಬಿಟ್ಟಿದ್ದರು. ಅಷ್ಟಾದರೂ ಯಾವೊಬ್ಬ ಪ್ರಯಾಣಿಕನಿಂದಲೂ ಪ್ರತಿಭಟನೆಗೆ ಆಕ್ಷೇಪ ವ್ಯಕ್ತವಾಗದಿದ್ದುದ್ದು ಮಹದಾಯಿ ರೈತ ಹೋರಾಟಕ್ಕಿರುವ ಜನಬೆಂಬಲ ಮತ್ತು ಅದು ಆಂದೋಲನವಾಗಿ ರೂಪುಗೊಳ್ಳುತ್ತಿರುವ ವಾಸ್ತವತೆಗೆ ಸಾಕ್ಷಿಯಾಗಿದೆ.

ಸವದತ್ತಿ, ಬಾಗಲಕೋಟ, ಬಾದಾಮಿ, ಧಾರವಾಡ, ಗದಗ ಜಿಲ್ಲೆಯ ವಿವಿಧೆಡೆ ರೈತರು ರೈಲನ್ನು ತಡೆದರು. ಸ್ವತಃ ಸಿಎಂ ಸಿದ್ದರಾಮಯ್ಯ ಫೋನ್ ಮಾಡಿ ರೈತ ನಾಯಕರನ್ನು ಸಂಪರ್ಕಿಸಿ ರೈಲುತಡೆ ಚಳವಳಿ ನಿಲ್ಲಿಸಿ ಏಪ್ರಿಲ್ 1ರಂದು ಬೆಂಗಳೂರಿನಲ್ಲಿ ಸರ್ವಪಕ್ಷಗಳ ಸಭೆ ಕರೆಯುವುದಾಗಿ ಗೋಗರೆದರೂ ರೈತರು ಸೊಪ್ಪು ಹಾಕಲಿಲ್ಲ. ಈಗಾಗಲೇ ಮಹಾದಾಯಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ಹಲವಾರು ಬಾರಿ ಸರ್ವಪಕ್ಷಗಳ ಸಭೆ, ವಿವಿಧ ಮಠಾಧೀಶರ, ರೈತರ ಸಭೆಗಳು ಜರುಗಿದರೂ ಪ್ರಯೋಜನ ಆಗದಿರುವುದನ್ನು ಮನಗಂಡಿರುವ ರೈತರು ಸಿ.ಎಂ. ಸಿದ್ದರಾಮಯ್ಯನವರಿಗೆ ಖಡಕ್ ಉತ್ತರವನ್ನೇ ರವಾನಿಸಿ ಪ್ರತಿಭಟನೆ ಮುಂದುವರೆಸಿದ್ದು ಆರೋಗ್ಯಕರ ಬೆಳವಣಿಗೆ ಅಂತಲೇ ಅನ್ನಬೇಕು. ಕೊನೆಗೆ ರಣಹೇಡಿ ಸರ್ಕಾರ ಪೊಲೀಸ್ ಬಲಪ್ರಯೋಗಿಸಿ ರೈತರನ್ನು ರೈಲ್ವೆ ನಿಲ್ದಾಣದಿಂದ ಹೊರದಬ್ಬಿ ತನ್ನ ಮಾನ ಉಳಿಸಿಕೊಳ್ಳಬೇಕಾಯ್ತು.

ರೈತರ ಆಕ್ರೋಶ ಅದೆಷ್ಟು ಘನಘೋರ ಆಯಾಮ ಪಡೆದುಕೊಳ್ಳುತ್ತಿದೆಯೆಂದರೆ ಅವತ್ತು ಶತಾಯಗತಾಯ





ಎರಡೂ ಸರ್ಕಾರಗಳಿಗೆ ಭರ್ಜರಿ ಉತ್ತರವನ್ನೇ ರವಾನಿಸಬೇಕೆಂದು ಸಿದ್ಧರಾಗಿದ್ದರು. ಒಂದೊಮ್ಮೆ ಯಥಾಪ್ರಕಾರ ಸರ್ಕಾರ ತಮ್ಮ ಪೊಲೀಸ್ ಪಡೆಗಳ ಮೂಲಕ ಗೂಂಡಾಗಿರಿ ನಡೆಸಲು ಮುಂದಾದರೆ ಅವರ ಕಣ್ಣಿಗೆ ಖಾರದಪುಡಿ ಎರಚಿ ತಕ್ಕ ಶಾಸ್ತಿ ಮಾಡಬೇಕೆಂದು ಸಜ್ಜಾಗಿಯೇ ಬಂದಿದ್ದರು. ಈ ಕುರಿತು ಒಂದು ವಾರದ ಹಿಂದೆ ನಡೆದ ರೈತ ಮುಖಂಡರ ಸಭೆಯಲ್ಲಿ ಲಿಖಿತ ನಿರ್ಣಯವನ್ನೂ ಕೈಗೊಳ್ಳಲಾಗಿತ್ತು. ಆದರೆ ಆ ಸಭೆಯಲ್ಲಿ ಪಾಲ್ಗೊಂಡವನೊಬ್ಬ ಇದನ್ನು ವಾಟ್ಸ್‌ಆಪ್‌ನಲ್ಲಿ ಹಾಕಿ ಎಡವಟ್ಟು ಮಾಡಿಬಿಟ್ಟ. ಪೊಲೀಸರು ಇದಕ್ಕೆ ಪ್ರತಿತಂತ್ರ ರೂಪಿಸಿಕೊಂಡು ದಾಳಿಗಿಳಿದಿದ್ದರು. ಇಲ್ಲದೇ ಹೋಗಿದ್ದರೆ, ಎಷ್ಟೋ ಜನ ಪೊಲೀಸರು ಬ್ಯಾಡಗಿ ಮೆಣಸಿನಕಾಯಿಯ ಖಾರದ ರುಚಿ ನೋಡಬೇಕಾಗುತ್ತಿತ್ತು, ರೈತರು. ಇಂತಹ ತೀರ್ಮಾನಕ್ಕೆ ಬಂದದ್ದು ತಪ್ಪು ಅಂತ ಮೇಲ್ಪದರದ ಜನ ತಣ್ಣನೆ ಕೋಣೆಗಳಲ್ಲಿ ವಾದ ಮಂಡಿಸುತ್ತಾ ಕೂರಬಹುದು, ಆದರೆ ಅವರು ಅಷ್ಟು ತಾಳ್ಮೆಗೆಡುವಂತೆ ಮಾಡಿದ್ದಾದರೂ ಯಾರು ಅನ್ನೋದು ಮುಖ್ಯವಾಗುತ್ತದೆ.

ಈ ಹೋರಾಟ ತೀವ್ರವಾದ ಸ್ವರೂಪ ಪಡೆಯುತ್ತದೆ ಎಂಬುದನ್ನು ಮೊದಲೇ ಅರಿತಿದ್ದ ಪೊಲೀಸರು ಹುಬ್ಬಳ್ಳಿಗೆ ಬರುವ ವಾಹನಗಳ ತಪಾಸಣೆಗೆ ಬ್ಯಾರಿಕೇಡ್ ಹಾಕಿ ಕಾವಲಿಗೆ ಕೂತಿದ್ದರು. ಅಲ್ಲದೇ ಹಿಂದಿನ ದಿನ ಹುಬ್ಬಳ್ಳಿಯ ಉಪನಗರ ಪೊಲೀಸ್ ಠಾಣೆಯಲ್ಲಿ ರೈತರ ಹಾಗೂ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ರೈಲ್ವೆ ಪೊಲೀಸರು 50 ಜನ ಮಾತ್ರ ಬಂದು ಪ್ರತಿಭಟನೆ ನಡೆಸಬೇಕು ಅಂತ ತಾಕೀತು ಮಾಡಿದ್ದರು. ಆದರೆ ರೈತರು ಅದ್ಯಾವುದಕ್ಕೂ ಜಗ್ಗಲಿಲ್ಲ, ಪೊಲೀಸ್ ಕಣ್ಗಾವಲನ್ನು ವಂಚಿಸಿ ಇನ್ನೂರಕ್ಕೂ ಹೆಚ್ಚು ಮಂದಿ ಹುಬ್ಬಳ್ಳಿ ರೈಲ್ವೆ ಸ್ಟೇಷನ್‌ನಲ್ಲಿ ಜಮಾಯಿಸಿದ್ದರು. ಅದರಲ್ಲೂ ಮಹಿಳೆಯರೂ ಮುಂಚಣಿಗೆ ನಿಂತಿದ್ದು ಮತ್ತೊಂದು ವಿಶೇಷ. ಅಂದಹಾಗೆ, ಈ ಹೋರಾಟದಲ್ಲಿ ಪಾಲ್ಗೊಂಡವರು ಯಾವುದೇ ದೊಡ್ಡದಾದ ಹೋರಾಟದ ಹಿನ್ನೆಲೆ, ಅನುಭವದಿಂದ ಬಂದವರಲ್ಲ ಜೊತೆಗೆ ಬೂಟಾಟಿಕೆ ರಾಜಕೀಯ ಪಕ್ಷಗಳ ಏಜೆಂಟರುಗಳೂ ಅಲ್ಲ, ಅಪ್ಪಟ ಮಣ್ಣಿನ ಮಕ್ಕಳು. ಅವರು ತಾಳ್ಮೆಗೆಟ್ಟರೆ ಪೊಲೀಸ್, ಜೈಲು, ಲಾಠಿಗೆ ಎದೆ ಕೊಟ್ಟು ನಿಲ್ಲುತ್ತಾರೆ ಎನ್ನುವುದಕ್ಕೆ ಈ ಹೋರಾಟವೇ ಸಾಕ್ಷಿ. ಈಗಲಾದರೂ ರಾಜಕೀಯ ಪಕ್ಷಗಳು ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ ಮುಂದಿನ ಚುನಾವಣೆಗಳಲ್ಲಿ ಅವರಿಗೆ ತಕ್ಕ ಪಾಠ ಕಲಿಸುವುದು ಮಾತ್ರ ಗ್ಯಾರಂಟಿ. ಈಗಾಗಲೇ ಜಿಲ್ಲಾ ಪಂಚಾಯ್ತಿ, ತಾಲ್ಲೂಕ್ ಪಂಚಾಯ್ತಿ ಚುನಾವಣೆಯಲ್ಲಿ ಧಾರವಾಡ ಜಿಲ್ಲೆಯೊಂದರಲ್ಲೆ 8000 ನೋಟಾಮತಗಳು ಚಲಾವಣೆಗೊಂಡಿದ್ದವು. ಚುನಾವಣೆಗೂ ಮುನ್ನ ನರಗುಂದದ ವಿಜಯ ಕುಲಕರ್ಣಿ ಮೊದಲಾದ ರೈತ ನಾಯಕರು ತಮಗೆ ನಂಬಿಕೆದ್ರೋಹ ಮಾಡುತ್ತಿರುವ ರಾಜಕೀಯ ಪಕ್ಷಗಳಿಗೆ ತಕ್ಕ ಪಾಠ ಕಲಿಸಬೇಕೆಂದರೆ ರೈತರು ನೋಟಾ ಆಯ್ಕೆಯನ್ನು ಒತ್ತಿ ಬರಬೇಕೆಂದು ಕರೆಕೊಟ್ಟಿದ್ದರ ಎಫೆಕ್ಟೇ ಅದಾಗಿತ್ತು.

ವಿಪರ್ಯಾಸವೆಂದರೆ ರೈತಸಂಘಟನೆಗಳಿಂದಲೇ ರೈತರ ಈ ಹೋರಾಟಕ್ಕೆ ಸಮರ್ಪಕ ಬೆಂಬಲ ಸಿಗುತ್ತಿಲ್ಲ. ಇತ್ತೀಚೆಗೆ ಎತ್ತಿನಹೊಳೆ ಯೋಜನೆಗಾಗಿ ಒತ್ತಾಯಿಸಿ ರೈತರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದಾಗ ಸರ್ಕಾರ ರೈತರನ್ನು ಬಂಧಿಸಿತ್ತು. ಆಗ ಪ್ರಾದೇಶಿಕ ಭಿನ್ನತೆಯನ್ನೂ ಮರೆತು ಮತ್ತು ಎತ್ತಿನಹೊಳೆ ಯೋಜನೆಯಿಂದ ನೇರವಾಗಿ ಈ ಭಾಗಕ್ಕೆ ಅನುಕೂಲವಿಲ್ಲದಿದ್ದರೂ ಉತ್ತರ ಕರ್ನಾಟಕದ ಮಹಾದಾಯಿ ಹೋರಾಟನಿರತ ರೈತರು ಸರ್ಕಾರದ ಕ್ರಮದ ವಿರುದ್ಧ ಪ್ರತಿಭಟನೆ ನಡೆಸಿ ಬಂಧನಕ್ಕೆ ಒಳಗಾಗಿದ್ದರು. ಆದರೆ ಮಹಾದಾಯಿ ನೀರಿಗಾಗಿ ರೈತರು ಸತತ ಏಳು ಗಂಟೆ ರೈಲು ತಡೆ ನಡೆಸಿ, ಪೊಲೀಸರಿಂದ ಲಾಠಿ ಏಟು ತಿಂದು, ರೈಲ್ವೆ ಪೊಲೀಸರು ಹೇರಿದ ಕೇಸುಗಳಿಂದ ಜೈಲು ಪಾಲಾದರೂ ಯಾವೊಬ್ಬ ರೈತ ನಾಯಕ, ಸಂಘಟನೆಗಳು ತುಟಿ ಎರಡು ಮಾಡಲಿಲ್ಲ, ಕೊನೆಪಕ್ಷ ರೈತಸಂಘದಿಂದ ಆಯ್ಕೆಗೊಂಡಿರುವ ಶಾಸಕ ಪುಟ್ಟಣ್ಣಯ್ಯನಾದರೂ ಧನಿ ಎತ್ತದಿರುವುದು ಆಘಾತವೇ ಸರಿ. 7 ಗಂಟೆಗೂ ಅಧಿಕ ಕಾಲ ಹುಬ್ಬಳ್ಳಿ ರೈಲ್ವೆ ನಿಲ್ದಾಣವನ್ನು ಮತ್ತು ಮೂರು ತಾಸು ಕಿತ್ತೂರ ಚೆನ್ನಮ್ಮ ವೃತ್ತವನ್ನು ಸ್ತಬ್ಧಗೊಳಿಸಿದ ರೈತರ ಹೋರಾಟ ಇವರಿಗೆ ಹೋರಾಟವಾಗಿ ಕಾಣಿಸದೇ ಹೋಗಿದ್ದು ವಿಪರ್ಯಾಸವೇ ಸರಿ. 60 ರೈತ ನಾಯಕರು, 600ಕ್ಕೂ ಅಧಿಕ ರೈತರ ಮೇಲೆ ರೈಲ್ವೆ ಪೊಲೀಸರು ಈಗಾಗಲೇ ಹಲವಾರು ಕಲಂಗಳಲ್ಲಿ ಕೇಸನ್ನು ದಾಖಲಿಸಿದ್ದಾರೆ. ತಮ್ಮ ಜೊತೆಗಾರರನ್ನು ಬಂಧಿಸಿದ ಸುದ್ದಿ ತಿಳಿದ ರೈತರು ಅಲ್ಲಿಂದ ಬಂದು ಕಿತ್ತೂರ ಚೆನ್ನಮ್ಮ ವೃತ್ತದಲ್ಲಿ 3 ಗಂಟೆವರೆಗೆ ರಸ್ತೆತಡೆ ನಡೆಸಿದ್ದರು. ಬಂಧಿಸಿದ ರೈತರನ್ನು ಬಿಡುಗಡೆಗೊಳಿಸುವವರೆಗೆ ನಾವು ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದಿದ್ದರು.

ಅಂದಹಾಗೆ, ಹುಬ್ಬಳ್ಳಿ ರೈಲ್ವೆ ಪೊಲೀಸರ ಇಬ್ಬಂದಿತನದ ಬಗ್ಗೆ ಇಲ್ಲೊಂದು ವಿಷಯವನ್ನು ಪ್ರಸ್ತಾಪಿಸಲೇಬೇಕು. ಕೆಲದಿನಗಳ ಹಿಂದೆ ಹುಬ್ಬಳ್ಳಿಯ ರೈಲ್ವೆ ಸ್ಟೇಷನ್ ಆವರಣದಲ್ಲಿ ಹಳೆಯದಾದ ಪಾರ್ಸೆಲ್ ಕಟ್ಟಡ ಕುಸಿದು ಹಲವರು ಪ್ರಾಣ ಕಳೆದುಕೊಂಡಿದ್ದರು. ಅದಕ್ಕೆ ಹೊಣೆಯಾಗಿ ಜನರಲ್ ಮ್ಯಾನೇಜರ್ ಸಹಿತ ಕೆಲವೊಂದು ಅಧಿಕಾರಿಗಳ ಮೇಲೆ ರೈಲ್ವೆ ಪೊಲೀಸರು ಕ್ರಿಮಿನಲ್ ಮೊಕದ್ದಮೆ ಹೂಡಿದ್ದರು. ಅವರಲ್ಲಿ ಒಬ್ಬ ಅಧಿಕಾರಿಯನ್ನು ರೈಲ್ವೆ ಪೊಲೀಸರು ಬಂಧಿಸುತ್ತಿದ್ದಂತೆಯೇ ರೈಲ್ವೆ ಯೂನಿಯನ್ ಪದಾಧಿಕಾರಿಗಳು ಎ.ಎಂ. ಡಿಕ್ರೂಜ್ ನೇತೃತ್ವದಲ್ಲಿ 2 ಗಂಟೆ ರೈಲ್ವೆ ತಡೆಹಿಡಿದು ಪ್ರತಿಭಟಿಸಿದ್ದರು.


ಆ ಹಠಾತ್ ಪ್ರತಿಭಟನೆಯಿಂದ ತಮಗಾದ ತೊಂದರೆ ಕುರಿತು ಪ್ರಯಾಣಿಕರು ಆಕ್ಷೇಪಣೆ ವ್ಯಕ್ತಪಡಿಸಿದ್ದೂ ನಡೆದಿತ್ತು. ಆದಾಗ್ಯೂ ರೈಲ್ವೆ ಪೊಲೀಸರು ಅಂದು ರೈಲುತಡೆದ ಯಾವೊಬ್ಬ ರೈಲ್ವೆ ನೌಕರರ ಮೇಲೂ ಕೇಸು ದಾಖಲಿಸಿಲ್ಲ. ಆದರೆ ಕುಡಿಯುವ ನೀರಿಗಾಗಿ 'ದೇಶದ ಬೆನ್ನೆಲುಬು'ಗಳು ಕಾದ ಕಬ್ಬಿಣಗಳ ಮೇಲೆ ಕೂತು ರೈಲು ತಡೆದಿದ್ದೇ ಪೊಲೀಸ್ ಕೂಟಕ್ಕೆ ಮಹಾಪರಾಧವಾಗಿ ಕಂಡಿದೆ. ಇದ್ದಬಿದ್ದ ಕಲಂಗಳನ್ನೆಲ್ಲ ಜಡಿದು ಕೇಸು ಜಡಿದಿದ್ದಾರೆ. ರೈಲ್ವೆ ಪೊಲೀಸರ ಈ ಇಬ್ಬಂದಿತನದ ವಿರುದ್ಧ ಹುಬ್ಬಳ್ಳಿಯ ಗಜಾನನ ಮಹಾಮಂಡಳದ ಡಿ. ಗೋವಿಂದರಾವ್ ಎನ್ನುವವರು ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸುವ ತಯಾರಿಯಲ್ಲಿರುವ ಸುದ್ದಿಯೂ ಕೇಳಿಬರುತ್ತಿದೆ.

■ ಹುಬ್ಬಳ್ಳಿಯಾಂವ

ಮೈಸೂರು: ಅನೈತಿಕ ಸುಖದಾಸೆಗೆ ಹೆಣವಾದ ರಕ್ಷಿತಾ ಆಂಟಿ


ರಕ್ಷಿತಾ

ಮೈಸೂರಿನ ರಾಮಕೃಷ್ಣನಗರದಲ್ಲಿದ್ದ ರಕ್ಷಿತಾಗೆ ಈಗಷ್ಟೇ ಇಪ್ಪತ್ತೊಂಬತ್ತು ವರ್ಷ. ಸಾಧು ಸ್ವಭಾವದ ಗಂಡ, ಎಂಟು ವರ್ಷದ ಮುದ್ದಾದ ಹೆಣ್ಮಗಳು, ಹಣಕಾಸಿಗೆ ಕೊರತೆಯಿಲ್ಲದ ಐಷಾರಾಮಿ ಸಿರಿವಂತಿಕೆ. ಜೊತೆಗೆ ಒಂದು ಮಗುವಿನ ತಾಯಿಯಾಗಿದ್ದರೂ ನೋಡಲು ಅಪ್ರತಿಮ ಸುಂದರಿ. ಒಬ್ಬ ಹೆಂಗಸು ನೆಮ್ಮದಿಯಾಗಿ ಜೀವನ ನಡೆಸಲು ಏನು ಬೇಕೊ, ಅದೆಲ್ಲವೂ ಆಕೆಯ ಕಾಲಬುಡದಲ್ಲೇ ಬಿದ್ದಿತ್ತು. ಆದರೆ ಕ್ಷಣಿಕ ದೇಹ ಚಪಲಕ್ಕೆ ಬಿದ್ದು ತನ್ನ ಬದುಕಿಗೆ ತಾನೇ ಇತಿಶ್ರೀ ಹಾಡಿಕೊಂಡಿದ್ದಾಳೆ.


ಶಾಸಕ ಸಂಜಯ್ ಪಾಟೀಲ್

ವಿಕೃತ ಆರಂಭಕ್ಕೆ ದುರಂತ ಅಂತ್ಯವೇ ಕಾದಿರುತ್ತೆ ಅನೈತಿಕ ಅಕ್ರಮ ಸಂಬಂಧಗಳು ಇದನ್ನು ಮತ್ತೆಮತ್ತೆ ಸಾಬೀತುಪಡಿಸುತ್ತಲೇ ಬಂದಿವೆ. ಮೈಸೂರಿನ ಗೃಹಸ್ಥ ಹೆಣ್ಣು ರಕ್ಷಿತಾಳ ಬದುಕು ಇದಕ್ಕೆ ಮತ್ತೊಂದು ನಿದರ್ಶನ.

ಮೈಸೂರಿನ ರಾಮಕೃಷ್ಣನಗರದಲ್ಲಿದ್ದ ರಕ್ಷಿತಾಗೆ ಈಗಷ್ಟೇ ಇಪ್ಪತ್ತೊಂಬತ್ತು ವರ್ಷ. ಸಾಧು ಸ್ವಭಾವದ ಗಂಡ, ಎಂಟು ವರ್ಷದ ಮುದ್ದಾದ ಹೆಣ್ಮಗಳು, ಹಣಕಾಸಿಗೆ ಕೊರತೆಯಿಲ್ಲದ ಐಷಾರಾಮಿ ಸಿರಿವಂತಿಕೆ. ಜೊತೆಗೆ ಒಂದು ಮಗುವಿನ ತಾಯಿಯಾಗಿದ್ದರೂ ನೋಡಲು ಅಪ್ರತಿಮ ಸುಂದರಿ. ಒಬ್ಬ ಹೆಂಗಸು ನೆಮ್ಮದಿಯಾಗಿ ಜೀವನ ನಡೆಸಲು ಏನು ಬೇಕೊ, ಅದೆಲ್ಲವೂ ಆಕೆಯ ಕಾಲ ಬುಡದಲ್ಲೇ ಬಿದ್ದಿತ್ತು, ಆದರೆ ಕ್ಷಣಿಕ ದೇಹ ಚಪಲಕ್ಕೆ ಬಿದ್ದು ತನ್ನ ಬದುಕಿಗೆ ತಾನೇ ಇತಿಶ್ರೀ ಹಾಡಿಕೊಂಡಿದ್ದಾಳೆ.

ಅಂದಹಾಗೆ, ಈ ರಕ್ಷಿತ ಸಾಲಿಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡ ಗುಣಪಾಲಯ್ಯ ಎಂಬುವವರ ಏಕಮಾತ್ರ ಪುತ್ರಿ. ಜೈನಧರ್ಮದ ಗುಣಪಾಲಯ್ಯನವರ ತಂದೆ ಶ್ರೀಮಂತ ಹಾಗೂ ಹೆಸರಾಂತ ವ್ಯಕ್ತಿ. ಈಗ್ಗೆ ಎಂಟತ್ತು ವರ್ಷದ ಹಿಂದೆ ಮೈಸೂರಿನ ಸಮೀಪದ ಬೀರಹುಂಡಿ ಗ್ರಾಮದಲ್ಲಿ ಮೆಡಿಕಲ್ ಸ್ಟೋರ್ ನಡೆಸುತ್ತಿರುವ ಪ್ರಕಾಶ್ ಎಂಬುವರಿಗೆ ರಕ್ಷಿತಾಳನ್ನು ಮದುವೆ ಮಾಡಿಕೊಡಲಾಗಿತ್ತು.


ಇಂಥವಳ ಬಾಳಿಗೆ ವಿಲನ್ ಆಗಿ ವಕ್ಕರಿಸಿದವನು ಚನ್ನಪಟ್ಟಣದ ರಾಮಪುರ ಗ್ರಾಮದ ಸುನೀಲ್ ಅಲಿಯಾಸ್ ಅರ್ಜುನ. ಸಕಲ ದುಶ್ಚಟಗಳ ಬ್ರಾಂಡ್ ಅಂಬಾಸಿಡರ್‌ನಂತಿರುವ ಈತ ನಟ ಸುದೀಪ್ ಅಭಿನಯದ 'ಕೆಂಪೇಗೌಡ' ಚಿತ್ರದ ನಿರ್ಮಾಪಕ ಶಂಕರೇಗೌಡರ ಬಳಿ ಪ್ರೊಡಕ್ಷನ್ ಮ್ಯಾನೇಜರ್, ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿಕೊಂಡಿದ್ದನಂತೆ. ಇವನ ನಾಲಾಯಕ್ ಬುದ್ಧಿ ತಿಳಿದ ಶಂಕರೇಗೌಡರು ಉಗಿದು ಹೊರದಬ್ಬಿದ್ದರು. ಅಲ್ಲಿಂದ ಊರಿಗೆ ವಾಪಾಸಾದ ಸುನೀಲ್ ಸೌಜನ್ಯ ಎಂಬ ದಲಿತ ಹುಡುಗಿಯ ಜತೆ ಸರಸಸಲ್ಲಾಪ ನಡೆಸಿ, ಅವಳಿಗೆ ಕೈಕೊಟ್ಟು ಊರವರಿಂದ ಧರ್ಮದೇಟು ತಿಂದಿದ್ದಲ್ಲದೆ ಅಟ್ರಾಸಿಟಿ ಮತ್ತು 302 ಕೇಸ್ ಜಡಿಸಿಕೊಂಡು ರೌಡಿಶೀಟರ್ ಎನಿಸಿಕೊಂಡಿದ್ದ. ಕುಡಿದು ಊರವರೊಂದಿಗೆ ಗಲಾಟೆ ಮಾಡಿಕೊಂಡು ಆಗಾಗ್ಗೆ ಪೊಲೀಸ್ ಸ್ಟೇಷನ್ ಹತ್ತುತ್ತಿದ್ದ ಸುನೀಲನಿಗೆ ಪೊಲೀಸರ ಉಪಟಳ ಇದ್ದೇಇತ್ತು. ಅದರಿಂದ ಪಾರಾದರೆ ಸಾಕು ಅಂತ 24.12.14 ರಂದು ಊರುಬಿಟ್ಟು ಮೈಸೂರಿನ ಆರ್‌ಎಂಸಿ ಬಳಿ ಇರುವ ಶಶಿ ಬಾರ್‌ನಲ್ಲಿ ಸಪ್ಲೈಯರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದ.

ಡ್ರೈವಿಂಗ್ ಸ್ಕೂಲ್

ಅದೇ ಬಾರಿಗೆ ಕುವೆಂಪು ನಗರದ ಮಾರುತಿ ಡ್ರೈವಿಂಗ್ ಸ್ಕೂಲ್‌ನ ಮಾಲೀಕ ಕಾರ್ತಿಕ್ ರಾಯ್ ರೆಗ್ಯುಲರ್ ಕಸ್ಟಮರ್. ತಾನೊಬ್ಬ ಅನಾಥ ಅಂತಲೇ ಹೇಳಿ ಕೆಲಸ ಗಿಟ್ಟಿಸಿಕೊಂಡಿದ್ದ ಸುನೀಲ, ಕಾರ್ತಿಕ್ ರಾಯ್ ಎದುರಿಗೂ ಸಭ್ಯಸಂತೆ ನಟಿಸಿ ವಿಶ್ವಾಸ ಗಿಟ್ಟಿಸಿಕೊಂಡಿದ್ದ, ಜೊತೆಗೆ ತನಗೆ ಡ್ರೈವಿಂಗ್ ತಿಳಿದಿದ್ದು ನಿಮ್ಮಲ್ಲಿ ಕೆಲಸ ಕೊಡಿ ಅಂತ ಗಂಟುಬಿದ್ದಿದ್ದ. ವಿಶ್ವಾಸಕ್ಕೆ ಕಟ್ಟುಬಿದ್ದ ಕಾರ್ತಿಕ್ ರಾಯ್ ತಮ್ಮ ಮಾರುತಿ ಡ್ರೈವಿಂಗ್ ಸ್ಕೂಲ್‌ನಲ್ಲಿ ಇನ್‌ಸ್ಟ್ರಕ್ಟರ್ ಆಗಿ ಕೆಲಸ ನೀಡಿದ್ದರು. ಅಲ್ಲಿ ಚೇತನ್, ಶ್ರೇಯಸ್, ರಮೇಶ್ ಎಂಬ ಸಹೋದ್ಯೋಗಿಗಳ ಜೊತೆ ವಿನಯದಿಂದಲೇ ನಡೆದುಕೊಂಡು ಒಳ್ಳೆಯವನೆನಿಸಿಕೊಂಡಿದ್ದ. ಆದರೆ ಸುನೀಲನ ಹಕೀಕತ್ತೇ ಬೇರೆಯಿತ್ತು.

ಡ್ರೈವಿಂಗ್ ತರಬೇತಿಗೆಂದು ಬರುತ್ತಿದ್ದ ಶ್ರೀಮಂತ ಮಹಿಳೆಯರಿಗೆ ತಾನೇ ತರಬೇತಿ ಕೊಡುವಂತೆ ಯೋಜನೆ ರೂಪಿಸಿಕೊಳ್ಳುತ್ತಿದ್ದ. ಒಂದೇ ಏಟಿಗೆ ಎರಡು ಹಕ್ಕಿ ಉರುಳಿಸುವ ಇರಾದೆ ಅವನದು. ಅಪ್ಪಿತಪ್ಪಿ ಮಧ್ಯವಯಸ್ಸಿನ ಆಂಟಿಯರೇನಾದರೂ ಬುಟ್ಟಿಗೆ ಬಿದ್ದರೆ ದೇಹಸುಖದ ಜೊತೆಗೆ ಬ್ಲ್ಯಾಕ್‌ಮೇಲ್ ಮಾಡಿ ಹಣ ವಸೂಲಿಗೂ ಇಳಿಯಬಹುದೆನ್ನುವುದು ಅವನ ಲೆಕ್ಕಾಚಾರ.


ಶೇಖರ್


ಲಕ್ಷ್ಮಿ ನಾರಾಯಣ

ಅವನ ಗಾಳಕ್ಕೆ ಸಿಲುಕಿಕೊಂಡವಳೇ ನತದೃಷ್ಟ ಹೆಣ್ಣು ರಕ್ಷಿತಾ. ಕಾರ್ ಡ್ರೈವಿಂಗ್ ತರಬೇತಿಗೆಂದು ಮಾರುತಿ ಡ್ರೈವಿಂಗ್ ಸ್ಕೂಲ್ ಸೇರಿಕೊಂಡ ಆಕೆಗೆ ಸುನೀಲನೇ ತರಬೇತಿ ನೀಡುತ್ತಿದ್ದ. ತಾನು ಅನಾಥ ಅಂತ ಹೇಳಿಕೊಳ್ಳುತ್ತಲೇ ಮುಗ್ಧನಂತೆ ನಟಿಸಿ ಅವಳ ಅನುಕಂಪ ಸಂಪಾದಿಸಿದ ಸುನೀಲನ ಜೊತೆ ತುಸು ಹೆಚ್ಚೇ ಎನ್ನುವಷ್ಟು ಸಲುಗೆ ಬೆಳೆಸಿಕೊಂಡಳು. ಆ ಸಲುಗೆ ಅನೈತಿಕ ಸಂಬಂಧಕ್ಕೆ ತಿರುಗಲು ತುಂಬಾ ಸಮಯವೇನೂ ಬೇಕಾಗಲಿಲ್ಲ. ಪ್ರತಿದಿನ ಬೆಳಗ್ಗೆ ಗಂಡ ಅಂಗಡಿಯತ್ತ ಮತ್ತು ಮಗಳು ಶಾಲೆಯತ್ತ ಮುಖ ಮಾಡಿದರೆ ಮತ್ತೆ ಅವರಿಬ್ಬರು ವಾಪಾಸಾಗುತ್ತಿದ್ದುದು ಸಂಜೆ ಮೇಲೆಯೇ. ರಕ್ಷಿತಾ ಮತ್ತು ಸುನೀಲ ಯಾರ ಹಂಗಿಲ್ಲದೆ ಹಗಲು ಹೊತ್ತಿನಲ್ಲೇ ಲಲ್ಲೆಗರೆಯಲು ಮನೆಯಲ್ಲೇ ಅವಕಾಶ ಸಿಗುತ್ತಿತ್ತು, ಆಕೆ ಕಾರ್ ಡ್ರೈವಿಂಗ್ ಕಲಿಯಲು ಹೋಗುತ್ತಿದ್ದುದರಿಂದ ಯಾರಿಗೂ ಅನುಮಾನಕ್ಕೆಡೆ ಇರಲಿಲ್ಲ.

ಬೆಳಗಾಂ ಶಾಸಕನ ಎಂಟ್ರಿ

ಮೊದಮೊದಲು ಈ ಕಳ್ಳ ಸಂಬಂಧ ರಕ್ಷಿತಾಳಿಗೆ ಖುಷಿಯನ್ನೇ ಕೊಟ್ಟಿರಬಹುದು, ಆದರೆ ಯಾವಾಗ ಸುನೀಲನ ಅಸಲಿ ಮುಖ ಅನಾವರಣಗೊಳ್ಳಲು ಆರಂಭವಾಯಿತೊ ಆಗ ತಾನೆಂತಹ ಖೆಡ್ಡಾಕ್ಕೆ ಬಿದ್ದಿದ್ದೇನೆಂದು ಅರಿವಾಗಿರಬಹುದು. ರೇಸ್, ಕುಡಿತ, ಮೋಜುಮಸ್ತಿ ಅಂತ ಸಕಲಷ್ಟು ದುಶ್ಚಟಗಳ ಪರಮ ದಾಸನಾಗಿ ಹೋಗಿದ್ದ ಸುನೀಲ ಅವಳಿಂದ ಹಣ ಸುಲಿಯಲು ನಿಂತ. ಆಗಲೇ ಆಕೆಗೆ ಅವನ ಮೇಲೆ ಅನುಮಾನ ಮೂಡಿದೆ. ಆದಷ್ಟು ಅವನನ್ನು ಅವಾಯ್ಡ್ ಮಾಡಲು ಶುರು ಮಾಡಿದ್ದಳು.

ಈ ನಡುವೆ ರಕ್ಷಿತಾ ಮತ್ತೊಂದು ಯಡವಟ್ಟು ಮಾಡಿಕೊಂಡಿದ್ದಳು. ಮೊಬೈಲ್ ಚಾಟಿಂಗ್, ವ್ಯಾಟ್ಸಪ್‌ಗಳಲ್ಲಿ ಮುಳುಗಿರುತ್ತಿದ್ದ ಆಕೆಗೆ ಬೆಳಗಾಂ ಗ್ರಾಮಾಂತರ ಕ್ಷೇತ್ರದ ಬಜೆಪಿಯ ತಗಡು ಶಾಸಕ ಸಂಜಯ್ ಪಾಟೀಲ್‌ನ ಪರಿಚಯವಾಗಿತ್ತು, ಇಬ್ಬರದೂ ಒಂದೇ ಜಾತಿ ಅನ್ನೋದು ಅವರನ್ನು ಹತ್ತಿರಕ್ಕೆ ಸೆಳೆದಿತ್ತು, ಆರಂಭದಲ್ಲಿ ಅವರಿಬ್ಬರ ಪರಿಚಯ ಮೊಬೈಲ್‌ಗಷ್ಟೇ ಸೀಮಿತವಾಗಿತ್ತು, ಒಂದೇ ಜಾತಿಯ ಕಾರಣಕ್ಕೆ ಹಲವಾರು ಮದುವೆ ಸಮಾರಂಭಗಳಲ್ಲಿ ಸಂಜಯ್ ಪಾಟೀಲ್ ಮತ್ತು ರಕ್ಷಿತಾ ಮುಖಾಮುಖಿಯಾಗುವ ಅವಕಾಶವೂ ಬಂದಿದ್ದವು.

ರಕ್ಷಿತಾ ಈಗ ತನ್ನನ್ನು ಬಿಟ್ಟು ಸಂಜಯ್ ಪಾಟೀಲ್ ಜೊತೆ ಸಲುಗೆ ಶುರುಹಚ್ಚಿಕೊಂಡಿರುವ ಸುಳಿವು ಸುನೀಲನಿಗೆ ಗೊತ್ತಾಗಲು ಬಹಳ ಕಾಲವೇನೂ ಬೇಕಾಗಲಿಲ್ಲ, ಗೊತ್ತಾದ ಮೇಲೂ ಆತ ಸಿಟ್ಟಿಗೇಳಲಿಲ್ಲ, ಬದಲಾಗಿ ಬ್ಲ್ಯಾಕ್‌ಮೇಲ್ ಮಾಡಲು ತನಗೆ ಹೊಸದೊಂದು ಅಸ್ತ್ರ ಸಿಕ್ಕಿತಲ್ಲಾ ಅಂತ ಖುಷಿಗೊಂಡ. ನಿನ್ನ ಮತ್ತು ಸಂಜಯ್ ಪಾಟೀಲ್ ಸ್ನೇಹವನ್ನು ಜಗಜ್ಜಾಹೀರುಗೊಳಿಸಿ ಇಬ್ಬರ ಮುಖಕ್ಕೂ ಮಸಿ ಬಳಿದುಬಿಡುತ್ತೇನೆ ಅಂತ ವರಾತ ತೆಗೆದ ಸುನೀಲ, ರಕ್ಷಿತಾ ಬಳಿ ಇದ್ದ ಒಂದೊಂದೇ ಒಡವೆಗಳನ್ನು ಲಪಟಾಯಿಸಲು ಆರಂಭಿಸಿದ. ಸಂಬಂಧಿಕರೇ ಹೇಳುವಂತೆ ತವರುಮನೆಯವರೇ ಆಕೆಗೆಂದು 5 ಕೆಜಿ ಚಿನ್ನದ ಆಭರಣಗಳು ಮಾಡಿಸಿ ಹಾಕಿದ್ದರಂತೆ.

ಒಡವೆ ಕೇಳಿ ಹೆಣವಾದಳು


ಮೊನ್ನೆ, ಅಂದರೆ ಕಳೆದ ಮಾರ್ಚ್ 10ರಂದು ರಕ್ಷಿತಾಳ ಹುಟ್ಟುಹಬ್ಬವಿತ್ತು, ಹಿಂದಿನ ದಿನ ಸುನೀಲನನ್ನು ಸಂಪರ್ಕಿಸಿದ ಆಕೆ ಜನ್ಮದಿನದಂದು ಒಡವೆಗಳನ್ನು ಧರಿಸಿಕೊಳ್ಳದಿದ್ದರೆ ಗಂಡ ಅನುಮಾನ ಪಡಬಹುದು, ದಯವಿಟ್ಟು ಒಡವೆಗಳನ್ನು ಕೊಟ್ಟುಬಿಡು ಅಂತ ಗೋಗರೆದಿದ್ದಳು. ಆಗಲೂ ಸಂಜಯ್ ಪಾಟೀಲ್‌ನ ಹೆಸರೆತ್ತಿ ಆಕೆಯ ಬಾಯಿಮುಚ್ಚಿಸಲು ಸುನೀಲ ಯತ್ನಿಸಿದ್ದ. ಆದರೆ ರಕ್ಷಿತಾ ಅವತ್ತು ತುಸು ಜಿಗುಟಾಗಿಯೇ ಅಂಟಿಕೊಂಡಿದ್ದಳು. ಕೊನೆಗೆ 'ಅರ್ಜೆಂಟಾಗಿ ಕೇಳಿದರೆ ತಂದುಕೊಡಲಾಗುವುದಿಲ್ಲ, ನಾಳೆ ಒಂದು ದಿನ ಹೇಗೋ ಮ್ಯಾನೇಜ್ ಮಾಡಿ ಹುಟ್ಟಿದಬ್ಬ ಮಾಡಿಕೊ, ನಾಡಿದ್ದೇ ಬಂದು ನಿನ್ನ ಒಡವೆಗಳನ್ನು ವಾಪಾಸ್ ಕೊಟ್ಟುಬಿಡ್ತೀನಿ' ಅಂತ ಸಮಾಧಾನ ಮಾಡಿದ್ದ. ಅಡಕತ್ತರಿಗೆ ಸಿಕ್ಕಿಕೊಂಡಿದ್ದ ರಕ್ಷಿತಾ ಒಪ್ಪಿಕೊಳ್ಳದೆ ಬೇರೆ ದಾರಿಯೇ ಇರಲಿಲ್ಲ.

ಆದರೆ ವಾಸ್ತವದಲ್ಲಿ ಆ ಯಾವ ಒಡವೆಯೂ ಸುನೀಲನ ಬಳಿ ಉಳಿದಿರಲಿಲ್ಲ, ತನ್ನ ಮೋಜಿಗಾಗಿ ಅವನ್ನೆಲ್ಲಾ ಮಾರಿಕೊಂಡು ನುಂಗಿ ನೀರು ಕುಡಿದಿದ್ದ. ಈಗ ಒಡವೆ ವಾಪಾಸ್ ಕೊಡುವುದು ಅವನಿಂದ ಸಾಧ್ಯವಿರಲಿಲ್ಲ, ವಾಪಾಸ್ ಕೇಳುತ್ತಿರುವ ರಕ್ಷಿತಾಳನ್ನೇ ಮುಗಿಸಿಬಿಟ್ಟರೆ ತನ್ನ ಹಾದಿ ಸುಗಮವಾಗಿ ಬಿಡುತ್ತೆ ಅನ್ನೋ ನಿರ್ಧಾರಕ್ಕಾತ ಬಂದಿದ್ದ. ಮೊದಲೇ ಸಿನಿಮಾ ಫೀಲ್ಡಿನಲ್ಲಿ ಪಳಗಿದವನು, ಜೊತೆಗೆ ಕ್ರಿಮಿನಲ್ ಮೈಂಡು! ತಾನು ಬಲೆಗೆ ಬೀಳದಂತೆ ರಕ್ಷಿತಾಳನ್ನು ಮರ್ಡರ್ ಮಾಡುವ ಪಕ್ಕಾ ಪ್ಲ್ಯಾನ್ ರೆಡಿಮಾಡಿಕೊಂಡಿದ್ದ.

ಅದರಂತೆ ಮಾರ್ಚ್ 11ರಂದು ಆಕೆಯ ಮನೆಗೆ ಹೋಗಿದ್ದ. ಒಡವೆ ಸಮೇತ ಬರಬಹುದೆಂದು ನಿರೀಕ್ಷಿಸಿದ್ದ ರಕ್ಷಿತಾ, ಒಡವೆಯನ್ನು ಕಾಣದೆ ಸುನೀಲನೊಂದಿಗೆ ಜಗಳಕ್ಕಿಳಿದಿದ್ದಳು. ಅವನಿಗೂ ಅಷ್ಟೇ ಸಾಕಾಗಿತ್ತು. ಬೆಡ್‌ರೂಮ್‌ನಲ್ಲಿದ್ದ ಹಾಸಿಗೆ ಮೇಲೆ ಆಕೆಯನ್ನು ಕೆಡವಿ ದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿಬಿಟ್ಟಿದ್ದ. ಅವಳ ಉಸಿರು ನಿಂತಿರುವುದು ಖಾತ್ರಿಯಾಗುತ್ತಿದ್ದಂತೆಯೇ ಬೀರುವಿನಲ್ಲಿಟ್ಟಿದ್ದ ಲಕ್ಷಾಂತರ ರೂ. ಒಡವೆ, ಹಣವನ್ನು ಬ್ಯಾಗ್‌ನಲ್ಲಿ ತುಂಬಿಕೊಂಡು ಹೆಣವನ್ನು ಅಲ್ಲಿಯೇ ಬಿಟ್ಟು ರಕ್ಷಿತಾಳ ಸ್ಕೂಟಿಯನ್ನೇರಿ ಹೊರನಡೆದಿದ್ದ. ರಕ್ಷಿತಾಳ ಗಂಡ ಮತ್ತು ಮಗಳು ವಾಪಾಸಾಗುವುದು ಸಂಜೆಗೆ ಅನ್ನೋದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಅಷ್ಟರಲ್ಲೇ ಮನೆಯಿಂದ ಹೆಣವನ್ನು ಸಾಗಿಸೋದು ಅವನ ಇರಾದೆಯಾಗಿತ್ತು.

ಹಣದ ಸಮೇತ ಮನೆಯಿಂದ ಹೊರಬಿದ್ದ ಸುನೀಲ ನೇರವಾಗಿ ಬಂದು ತಲುಪಿದ್ದು ವಿಶ್ವಮಾನವ ರಸ್ತೆಯಲ್ಲಿರುವ ಶಶಿಬಾರ್‌ಗೆ. ಅಲ್ಲಿ ಕೆಲಸ ಮಾಡಿಕೊಂಡಿದ್ದ ತನ್ನದೇ ಹೆಸರಿನ ಸುನೀಲ್ ಎಂಬ ಸಪ್ಲೈಯರ್‌ನ ಬಳಿ "ನನ್ನ ಮೊಬೈಲ್‌ನ ಚಾರ್ಜ್ ಖಾಲಿಯಾಗಿಹೋಗಿದೆ, ಅರ್ಜೆಂಟಾಗಿ ಫೋನ್ ಮಾಡಬೇಕು, ಸ್ವಲ್ಪ ನಿನ್ನ ಮೊಬೈಲ್ ಕೊಡು" ಅಂತ ಪಡೆದು ಜಸ್ಟ್ ಡಯಲ್‌ಗೆ ಕರೆಮಾಡಿ ಕಾರ್ ಬುಕ್ ಮಾಡಿದ್ದ. ಅಲ್ಲದೇ ಅದೇ ಸಪ್ಲೈಯರ್‌ನಿಂದಲೇ 5 ಲೀಟರ್ ಪೆಟ್ರೋಲ್ ತರಿಸಿಕೊಂಡಿದ್ದ. ರಕ್ಷಿತಾಳ ಸ್ಕೂಟಿಯನ್ನು ಆಕೆಯ ಮನೆಯ ಹಿಂಭಾಗದಲ್ಲಿ ಪಾರ್ಕ್ ಮಾಡಿ ಮತ್ತೆ ಮನೆಗೆ ಬಂದ ಸುನೀಲ, ರಕ್ಷಿತಾಳ ಹೆಣವನ್ನು ದೊಡ್ಡದೊಂದು ಸೂಟ್‌ಕೇಸ್‌ನಲ್ಲಿ ತುಂಬಿಕೊಂಡ. ಮೇಲ್ನೋಟಕ್ಕೆ ಭಾರೀ ಲಗೇಜಿನಂತೆ ಕಾಣುತ್ತಿತ್ತೇ ಹೊರತು ಅದರಲ್ಲೊಂದು ಹೆಣವಿದೆ ಎಂದು ಯಾರೂ ಪತ್ತೆ ಮಾಡುವಂತಿರಲಿಲ್ಲ.


ಕೊನೆಗೆ ಗೆಳೆಯನೊಬ್ಬನ ಸಹಾಯದೊಂದಿಗೆ ಬುಕ್ ಮಾಡಿ ತರಿಸಿಕೊಂಡಿದ್ದ ಕಾರಿನೊಳಕ್ಕೆ ಹೆಣವಿ





ಕೇಸ್ ಸಾಗಿಸಿದ ಸುನೀಲ ನೇರವಾಗಿ
ದ್ದು ತನ್ನ ಹುಟ್ಟೂರು ರಾಮಾಪುರಕ್ಕೆ. ಇವನ
ಖತರ್ನಾಕ್ ಕಾಯಕಗಳಿಗೆ ನೆರವಾಗಲೆಂದೇ
ಟ್ಟ ನಂಬಿಕಸ್ಥ ಆಸಾಮಿಯಿದ್ದ. ಆತ ಬೇರಾರೂ
ಸುನೀಲ ಅಪ್ಪ ಚಂದ್ರೇಗೌಡ! ಮದ್ದೂರಿನಲ್ಲಿ
ನ್‌ಬೂತ್‌ನಿಂದ ತಂದೆಗೆ ಫೋನ್ ಮಾಡಿದ
ತೋಟದ ಮನೆಗೆ ಬರುವಂತೆ ಸೂಚಿಸಿದ್ದ.
ದ ಮನೆಯಲ್ಲಿ ಅಪ್ಪನನ್ನು ಕೂರಿಸಿಕೊಂಡು
ಘಟನೆಯನ್ನೆಲ್ಲ ಸುನೀಲ ವಿವರಿಸಿದ್ದ. ಮಗನ
ಮೇಲೆ ಮೊಟಕಿ ಪೊಲೀಸರಿಗೆ ಒಪ್ಪಿಸಬೇಕಿದ್ದ
ಮಗ ಕೈಗಿತ್ತ ಒಂದು ಲಕ್ಷ ರೂಪಾಯಿ ಆಸೆಗೆ
ಸುರಿಸಿ ಹೆಣ ಸುಟ್ಟುಹಾಕಲು ಮಗನಿಗೆ
ನೀಡಿದ್ದ.

ೃವರ್‌ನನ್ನು ಅಲ್ಲೇ ಬಿಟ್ಟು ತಾನೇ ಕಾರ್ ಡ್ರೈವ್
ಕೊಂಡು ತಂದೆಯೊಂದಿಗೆ ಮೆಣಸಿನಹಳ್ಳಿ ಬಳಿ
ಕರಿಗುಡ್ಡ ಎಂಬ ನಿರ್ಜನ ಪ್ರದೇಶಕ್ಕೆ



ರೇ ಶವಕ್ಕೆ ಪೆಟ್ರೋಲ್ ಸುರಿದು ಬೆಂಕಿ
ರು. ನಂತರ ಡ್ರೈವರ್ ಜೊತೆ ರಾಮನಗರದ
ಫರ್ ಲಾಡ್ಜ್‌ನಲ್ಲಿ ತನ್ನಲ್ಲಿ ಗುರುತಿನ ಕಾರ್ಡ್
ಇಂದು, ಡ್ರೈವರ್‌ನ ಗುರುತಿನ ಚೀಟಿಯಲ್ಲೇ
ಪಡೆದು ನೆಮ್ಮದಿಯಾಗಿ ಮಲಗಿದ್ದ.

...ನ್ನಾತ ನೋಡಿದ್ದ!


ತ್ತ ಮೈಸೂರಿನಲ್ಲಿ ರಕ್ಷಿತಾಳ ಪತಿ ಪ್ರಕಾಶ್ ತನ್ನ
ಣೆಯಾಗಿದ್ದಾಳೆಂದು ಮಾರ್ಚ್ 12ರಂದು
ಪುನಗರ ಪೊಲೀಸ್ ಠಾಣೆಯಲ್ಲಿ ದೂರು
ರು. ಅತ್ತ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್
ಸಿಪಿಐ ನಾಗರಾಜು ಮೆಣಸಿನಹಳ್ಳಿ ಗ್ರಾಮದ
ದೂರಿನ ಮೇರೆಗೆ ಪತ್ತೆಯಾದ ಬೆಂದುಹೋದ
ಶವದ ಗುರುತು ಹಿಡಿಯಲು ಹರಸಾಹಸ
ದ್ದರು. ಮೈಸೂರು ಪೊಲೀಸರು ಆಕೆಯ
ಲ್‌ನ ಕಾಲ್‌ರೂಟ್ಸ್ ಹಿಡಿದು
ದುತ್ತಿದ್ದರೆ, ಯಾವ ಸುಳಿವನ್ನೂ ನೀಡದ
ಮೋಜಿನ ಜೀವನ ನಡೆಸುತ್ತಿದ್ದ.

ಕ್ಷಿತಾಳ ಗಂಡ ಕೊಟ್ಟಿರುವ ಮಿಸ್ಸಿಂಗ್
ಟ್‌ನ ಸುಳಿವು ಸಿಗುತ್ತಿದ್ದಂತೆಯೇ ಸುನೀಲನಿಗೆ
ಭಯ ಶುರವಾಗಿತ್ತು, ಹೇಗಾದರು ಮಾಡಿ
ಸನ್ನು ತಬ್ಬಿಬ್ಬುಗೊಳಿಸಿ, ತಾನು
ಾಗಬೇಕೆಂದು ಲೆಕ್ಕಾಚಾರ ಹಾಕುತ್ತಿದ್ದ ಅವನ
ಗೆ ಹೊಳೆದಿದ್ದೇ ಬೆಳಗಾಂ ಶಾಸಕ ಸಂಜಯ್
ಲ್‌ನ ಹೆಸರು. ಹೇಗೂ ಆತ ರಾಜಕಾರಣಿ,
ಹೆಸರಿನೊಂದಿಗೆ ಕೇಸು ಥಳುಕು ಹಾಕಿಕೊಂಡರೆ

ಮೀಡಿಯಾಗಳ ಅಬ್ಬರದಲ್ಲಿ ನಾನು ಮರೆತುಹೋಗುತ್ತೇನೆ ಅಂತ ಪ್ಲಾನ್ ಮಾಡಿಕೊಂಡ. ಕೂಡಲೇ ರಕ್ಷಿತಾಳ ತಮ್ಮನಿಗೆ ಫೋನಾಯಿಸಿ ಬೆಳಗಾಂ ಗ್ರಾಮಾಂತರ ಎಂಎಲ್‌ಎ ಸಂಜಯ್ ಪಾಟೀಲನಿಗೂ ರಕ್ಷಿತಾಗೂ ಇದ್ದ ಗೆಳೆತನದ ಬಗ್ಗೆ ಬಣ್ಣ ಕಟ್ಟಿ ಹೇಳಿದ್ದಲ್ಲದೆ ಸಂಜಯ್ ಪಾಟೀಲನನ್ನು ಹಿಡಿದು ವಿಚಾರಿಸಿದರೆ ರಕ್ಷಿತಾಳ ಸುಳಿವು ಸಿಗಬಹುದೆಂದು ತಲೆತುಂಬಿದ. ಮೊದಮೊದಲು ರಕ್ಷಿತಾಳ ತಮ್ಮ ಇವನ ಮಾತನ್ನು ನಿರ್ಲಕ್ಷಿಸಿದ. ಆದರೆ ಯಾವಾಗ ಸುನೀಲ ಪದೇಪದೇ ಫೋನ್ ಮಾಡಿ ಸಂಜಯ್ ಪಾಟೀಲನ ಮೇಲೆ ದೂರಲು ಶುರು ಮಾಡಿದನೊ ಆಗ ರಕ್ಷಿತಾ ತಮ್ಮನಿಗೆ ಇವನ ಮೇಲೆಯೇ ಅನುಮಾನ ಮೂಡಲಾರಂಭಿಸಿತು. ಆತ ತಡಮಾಡಲಿಲ್ಲ. ಕೂಡಲೇ ತನ್ನೆಲ್ಲಾ ಅನುಮಾನವನ್ನು ಪೊಲೀಸರ ಮುಂದಿಟ್ಟ. ಜಾಗೃತರಾದ ಕುವೆಂಪುನಗರ ಪೊಲೀಸರು ಸುನೀಲ ಅಲಿಯಾಸ್ ಅರ್ಜುನ್‌ಗಾಗಿ ಬಲೆ ಬೀಸಿ ಕಾದಿದ್ದರು. ಕೊನೆಗೊಂದು ದಿನ ರಿಂಗ್‌ರೋಡ್‌ನಲ್ಲಿರುವ ಚಾಮುಂಡೇಶ್ವರಿ ಬಾರ್‌ನಲ್ಲಿ ಪೊಲೀಸರ ಕೈಗೆ ತಗುಲಿಕೊಂಡ.

ಸಿಕ್ಕರೂ ಅವನನ್ನು ಆರೋಪಿಯಾಗಿ ಸಾಬೀತು ಮಾಡುವುದು ಸುಲಭವಾಗಿರಲಿಲ್ಲ. ಯಾಕೆಂದರೆ, ಸುನೀಲ ರಕ್ಷಿತಾಗೆ ಕರೆ ಮಾಡುತ್ತಿದ್ದುದು ತನ್ನ ಮೊಬೈಲ್‌ನಿಂದಲ್ಲ, ಬೇರೆಯವರ ಮೊಬೈಲ್‌ಗಳಿಂದ ಫೋನಾಯಿಸಿದ್ದ, ಅಲ್ಲದೇ ಅವತ್ತು ಕಾರ್‌ಬುಕ್ ಮಾಡಿದ್ದು ಕೂಡಾ ಬಾರ್ ಸಪ್ಲೈಯರ್‌ನ ಮೊಬೈಲ್‌ನಿಂದ. ಅಲ್ಲದೇ ಕೊಲೆಯಾದ ಸ್ಥಳದಲ್ಲೂ ತನ್ನ ಗುರುತುಗಳು ಇಲ್ಲದಂತೆ ಬುದ್ಧಿವಂತಿಕೆ ವಹಿಸಿದ್ದ. ಹೀಗಾಗಿ ಮೈಸೂರಿನ ಪೊಲೀಸರು ದಿಕ್ಕುತೋಚದಾಗಿ ಯಾವ ದಿಕ್ಕಿನಲ್ಲಿ ತನಿಖೆ ನಡೆಸಬೇಕೆಂದು ತಲೆಕೆಡಿಸಿಕೊಂಡಿದ್ದರು.

ಅಂಥಾ ಸಮಯದಲ್ಲಿ ಪೊಲೀಸರ ನೆರವಿಗೆ ಬಂದದ್ದು ರಘು ಎಂಬಾತ. ಈತ ರಕ್ಷಿತಾಳ ಮನೆಯ ಆಸುಪಾಸಿನಲ್ಲೇ ವಾಸವಿರುವಾತ. ಅವತ್ತು, ಅಂದರೆ ಮಾರ್ಚ್ 11ರಂದು, ಸುನೀಲ ಭಾರವಾದ




ಸುನೀಲ್‌ನ ತಂದೆ

ಸೂಟ್‌ಕೇಸ್ ಒಂದನ್ನು ಕಾರ್‌ನಲ್ಲಿ ಇಡುತ್ತಿದ್ದುದನ್ನು ಇವನು ನೋಡಿದ್ದ. ಆಗಲೇ ರಘುಗೆ ಅನುಮಾನ ಬಂದಿತ್ತು. ಆತ ಕಾರ್ ನಂಬರ್ ಸಹ ನೋಟ್ ಮಾಡಿಕೊಂಡಿದ್ದ. ಪೊಲೀಸರ ಮುಂದೆ ಇದಿಷ್ಟನ್ನೂ ವಿವರಿಸಿ ಹೇಳಿದ್ದೇ ತಡ, ಪೊಲೀಸ್ ಲಾಠಿ-ಬೂಟುಗಳು ಸುನೀಲ ದೇಹದ ಇಂಚಿಂಚನ್ನೂ ಅಳತೆ ಮಾಡಲು ಶುರು ಮಾಡಿದ್ದವು. ಕೊನೆಗೆ ಸುನೀಲ ತಾನೇ ರಕ್ಷಿತಾಳನ್ನು ಕೊಲೆ ಮಾಡಿ ಸುಟ್ಟುಹಾಕಿದ್ದಾಗಿ ಒಪ್ಪಿಕೊಂಡ. ಅವನು ಕೊಟ್ಟ ಮಾಹಿತಿಯಂತೆ ಮೆಣಸಿನಹಳ್ಳಿಯ ಕರಿಗುಡ್ಡದ ಬಳಿ ಇತ್ತೀಚೆಗೆ ಸಂಪೂರ್ಣ ಸುಟ್ಟು ಕರಕಲಾದ ದೇಹ ಪತ್ತೆಯಾದದ್ದು ಖಾತ್ರಿಯಾಯಿತು. ಅಲ್ಲದೇ ರಕ್ಷಿತಾಳ ಸಂಬಂಧಿಕರು ಸಹ ಚನ್ನಪಟ್ಟಣದ ಪೊಲೀಸರು ತೋರಿಸಿದ ಓಲೆಯನ್ನು ನೋಡಿ ಅದು ರಕ್ಷಿತಾಳದ್ದೇ ಅಂತ ದೃಢಪಡಿಸಿದರು.

ಒಟ್ಟಿನಲ್ಲಿ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನಾಗರಾಜು, ಅಕ್ಕೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್, ಮೈಸೂರು ಕುವೆಂಪುನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶೇಖರ್, ಪಿಎಸ್‌ಐ ಮರಿಸ್ವಾಮಿ, ಅಪರಾಧ ತನಿಖಾದಳದ ಲಕ್ಷ್ಮಿನಾರಾಯಣ್ ಹಾಗೂ ಮಹಿಳಾ ಮತ್ತು ಮಕ್ಕಳ ವಿಭಾಗದ ಮುಖ್ಯಸ್ಥೆ ವಸಂತರವರ ಶ್ರಮದಿಂದಾಗಿ ಕಾಮುಕ ಹಂತಕ ಬಲೆಗೆ ಬಿದ್ದಿದ್ದಾನೆ. ಅಲ್ಲದೇ ಅವನಿಂದ 572 ಗ್ರಾಂ ಚಿನ್ನಾಭರಣ, 2,44,770/- ರೂಪಾಯಿ ನಗದನ್ನೂ ವಶಕ್ಕೆ ಪಡೆದಿದ್ದಾರೆ.

■ ಮೋಹನ್ ಕೆ.ಆರ್

ಶ್ರೀರಾಮಸೇನೆ ಗೌರವಾಧ್ಯಕ್ಷನ ಲಾಡಿ ಬಿಚ್ಚಿದ ಎಚ್.ಕೆ.ಆರ್.ಡಿ.ಬಿ. ಸಂಸ್ಥೆ!



ಸಿದ್ದಲಿಂಗಸ್ವಾಮಿ

ಶ್ರೀರಾಮ ಸೇನೆಯ ಕೊಳ್ಳಿ ದೆವ್ವವೆಂದೇ ಕುಖ್ಯಾತನಾದ ನಟೋರಿಯಸ್ ಮಾತುಗಾರ ಆಂದೋಲದ ಸಿದ್ಧಲಿಂಗಸ್ವಾಮಿ ತನ್ನ ಬಾಲವನ್ನು ಸಿಕ್ಕಿ ಹಾಕಿಕೊಂಡು ಒಂದೇ ಸಮ ಕಿರುಚತೊಡಗಿದ್ದಾನೆ. ಆಂದೋಲಾ ಗ್ರಾಮದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು 10 ಲಕ್ಷ ರೂಪಾಯಿಗಳ ಅನುದಾನದಲ್ಲಿ ನೆಮ್ಮದಿ ಕೇಂದ್ರದ ಮುಂಭಾಗ ನಾಲ್ಕು ಕೋಣೆಗಳ ಕಟ್ಟಡವನ್ನು ನಿರ್ಮಿಸಿದೆ. ಸದರಿ ಕಟ್ಟಡವನ್ನು ಸರಕಾರಿ ಜಾಗದಲ್ಲಿಯೇ ಕಟ್ಟಬೇಕು ಎಂದು ಷರತ್ತನ್ನು ಗಾಳಿಗೆ ತೂರಿ ಖಾಸಗಿ ವ್ಯಕ್ತಿಗಳಿಗೆ ಸೇರಿದ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಮಾಡಲಾಗಿದೆ. ಇದನ್ನು ಪರಿಶೀಲಿಸಿದ ಎಚ್.ಕೆ.ಆರ್.ಡಿ.ಬಿ. ಕಾಮಗಾರಿ ನಿರ್ವಹಿಸಿದ ಇಂಜಿನಿಯರ್ ಹಾಗೂ ಗುತ್ತೇದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಜಿಲ್ಲಾ ಪಂಚಾಯತಿಗೆ ಸೂಚಿಸಿದೆ.

ಮತ್ತೊಂದು ತಮಾಷೆಯ ಸಂಗತಿಯೆಂದರೆ ಸದರಿ ಸರಕಾರಿ ಕಟ್ಟಡವನ್ನು ಅಕ್ರಮವಾಗಿ ತನ್ನ ಸುಪರ್ದಿಗೆ ಪಡೆದುಕೊಂಡಿರುವ ಆಂದೋಲದ ಚಡ್ಡಿ ಚತುರ ವೀರಭದ್ರೇಶ್ವರ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಜ್ಞಾನದೀಪ ಪೂರ್ವ ಮತ್ತು ಹಿರಿಯ ಪ್ರಾಥಮಿಕ ಶಾಲೆ ಇವರಿಗೆ ಶಾಲೆ ನಡೆಸಲು ಬಾಡಿಗೆ ಬೇರೆ ನೀಡಿದ್ದಾನೆ. ತನಗೆ ಸಂಬಂಧಿಸಿದಲ್ಲದ ಜಾಗದಲ್ಲಿ ಸರಕಾರದ ಅನುದಾನದಲ್ಲಿ ಸುಳ್ಳು ಮಾಹಿತಿ ನೀಡಿ ಕಟ್ಟಡ ನಿರ್ಮಿಸಿಕೊಂಡಿದ್ದಲ್ಲದೆ, ಅಲ್ಲಿನ ಕಟ್ಟಡವನ್ನು ತನ್ನ ಅಧೀನದಲ್ಲಿಟ್ಟುಕೊಂಡು ವಾರ್ಷಿಕ ನಲವತ್ತು ಸಾವಿರ ರೂಪಾಯಿಗಳಂತೆ ಪಡೆದುಕೊಂಡಿದ್ದಾನೆ. ಮಾತಾಡಿದರೆ ದೇಶದ ಹೆಸರಿನಲ್ಲಿ ದ್ವೇಷ ಸಾಧಿಸುವ, ಕೆಂಡ ಉಗುಳುವ ಸ್ವಾಮಿ ಒಳಗೊಳಗೆ ಪತರಗುಡತೊಡಗಿದ್ದಾನೆ.

ತಾನು ದೇವರ ಸ್ವರೂಪ, ಹಿಂದೂ ಧರ್ಮ ಗುರು, ಕಂಡಕಂಡಲ್ಲೆಲ್ಲ ಅಲ್ಪ ಸಂಖ್ಯಾತರ ವಿರುದ್ಧ ಗುಟುರುವವನಿಗೂ ಎಚ್.ಕೆ.ಆರ್.ಡಿ.ಬಿ. ಕ್ರಿಮಿನಲ್ ಕೇಸ್ ದಾಖಲಿಸುವಂತೆ ಸೂಚಿಸುವ ಸೂಚನೆಯೆ ಶುದ್ಧ ಸುಳ್ಳು ಎಂದು ಬೊಗಳತೊಡಗಿದ್ದಾನೆ. ಆದರೆ ಕಟ್ಟಡ ನಿರ್ಮಾಣದಲ್ಲಿ ಪ್ರಮುಖವಾದ ಷರತ್ತನ್ನೆ ಉಲ್ಲಂಘಿಸಲಾಗಿದೆ. ಖೊಟ್ಟಿ ದಾಖಲೆ, ದಾಖಲೆ ತಿರುಚಿರುವುದು ಮಂಡಳಿಯ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಕಾನೂನುತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪಿಆರ್‌ಇ ಇಲಾಖೆಯ ಅಧಿಕಾರಿಗಳು ಮೊಕದ್ದಮೆ ಹೂಡುವಂಥ ಕೃತ್ಯ ನಡೆಸಿದ್ದಾರೆ. ಐಪಿಸಿ 119, 409, 418 ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988, 1860 ಮತ್ತು ಯು/ಎಸ್ 13 ರ ಅನ್ವಯ ಕ್ರಿಮಿನಲ್ ಮೊಕದ್ದಮೆ ಹೂಡಬಹುದು ಎಂಬ ಕಾನೂನುತಜ್ಞರ ನಿಲುವು ಆಂದೋಲ ಸ್ವಾಮಿಯ ಲಾಡಿಯನ್ನು ಬಿಚ್ಚಿಬಿಟ್ಟಿದೆ.

ಕಲಬುರಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯದರ್ಶಿ ಪ್ರಕರಣವನ್ನು ಗಂಭೀರವಾಗಿ ಪರಿಶೀಲಿಸಿ ಖೊಟ್ಟಿ ದೇಶಪ್ರೇಮಿಯನ್ನು ಹಾಗೂ ಅವನಿಗೆ ಸಾಥ್ ನೀಡಿದ ಗುತ್ತೇದಾರ ಹಾಗೂ ಇಂಜಿನಿಯರ್‌ಗಳನ್ನು ಜೈಲಿಗೆ ಅಟ್ಟಬೇಕೆಂದು ಬಹು ಜನರ ಆಗ್ರಹವಾಗಿದೆ.

■ ವರದಿಗಾರ

ಅಪ್ಪನ ಬೆಲೆ


ಅಪ್ಪ ಆಫೀಸಿನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಸುಸ್ತಾಗಿ ಮನೆಗೆ ಬಂದ. ಬಾಗಿಲಿನಲ್ಲೇ ಐದು ವರ್ಷದ ಮಗ ಅಪ್ಪನಿಗಾಗಿ ಕಾಯುತ್ತಾ ಕುಳಿತಿದ್ದ. ಅಪ್ಪನನ್ನು ಕಾಣುತ್ತಿದ್ದಂತೆಯೇ ಮಗನ ಹುಮ್ಮಸ್ಸು ಉಕ್ಕಿ ಸ್ಫೋಟಿಸಿತು. ಛಂಗನೆ ಹಾರಿ ಅಪ್ಪನನ್ನು ತಬ್ಬಿಕೊಂಡ.

'ಅಪ್ಪಾ, ನಾನೊಂದು ಪ್ರಶ್ನೆ ಕೇಳಲಾ.'

'ಕೇಳು ಮಗನೇ, ಅದೇನು?' ಆಯಾಸವನ್ನು ನುಂಗಿ ಖುಷಿ ನಟಿಸಲು ಅಪ್ಪ ಯತ್ನಿಸಿದ.

'ಅಪ್ಪ, ನೀನು ಗಂಟೆಯೊಂದಕ್ಕೆ ಎಷ್ಟು ಸಂಪಾದನೆ ಮಾಡುತ್ತಿ?'

'ಅದೆಲ್ಲಾ ನಿಂಗ್ಯಾಕೆ, ಇಂತಹ ಪ್ರಶ್ನೆಯೆಲ್ಲಾ ಯಾಕೆ ಕೇಳ್ತಿದೀಯಾ?' ಮೊದಲೇ ದುಡಿಮೆ ವ್ಯವಹಾರದಿಂದ ದಣಿದು ವಿಶ್ರಾಂತಿ ಬಯಸಿ ಬಂದಿದ್ದ ತಂದೆ ಮಗನ ಪ್ರಶ್ನೆ ಕೇಳಿ ಕಿರಿಕಿರಿಗೊಂಡ.



'ನಂಗೆ ಬೇಕು, ಪ್ಲೀಸ್ ಹೇಳಪ್ಪ, ನೀನು ಗಂಟೆಗೆ ಎಷ್ಟು ಸಂಪಾದನೆ ಮಾಡ್ತೀಯಾ?' ಮಗ ಮತ್ತಷ್ಟೂ ಮುಗ್ಧವಾಗಿ ಗೋಗರೆದ.

'ಓಹ್! ಸರಿ, ಗಂಟೆಗೆ 100 ರೂಪಾಯಿ ಸಂಪಾದನೆ ಮಾಡ್ತೀನಿ. ಏನಿವಾಗ?' ಅಪ್ಪ ಅಸಹನೆಯ ಉತ್ತರವನ್ನು ಮುಂದುವರೆಸಿದ.

'ಓಹ್! ಹೌದಾ..' ಎಂದು ಲೆಕ್ಕಾಚಾರವಾಗಿ ತಲೆದೂಗಿದ ಮಗ 'ಅಪ್ಪಾ, ನನಗೆ ಪ್ಲೀಸ್ 50 ರೂಪಾಯಿ ಕೊಡ್ತೀಯಾ?' ಎಂಬ ಬೇಡಿಕೆಯನ್ನಿಟ್ಟ.

ಮಗ ಹಣ ಕೇಳುತ್ತಿದ್ದಂತೆಯೇ ದಣಿವಿನ ಅಸಹನೆಗೆ ಸಿಲುಕಿದ್ದ ಅಪ್ಪನಿಗೆ ರೇಗಿಹೋಯ್ತು 'ನಿಂಗ್ಯಾಕೆ 50 ರುಪಾಯಿ. ಅಂತ ಘನಂದಾರಿ ಖರ್ಚೇನಿದೆ ನಿಂಗೆ. ಅದೇ ಯಾವ್ದೋ ಕೆಲಸಕ್ಕೆ ಬಾರದ ಆಟದ ಸಾಮಾನು ಕೊಳ್ಳಲೊ ಇಲ್ಲವೇ ಚಾಕಲೇಟ್‌ಗೆಂದು ದಂಡ ಮಾಡೋದಕ್ಕೆ ತಾನೆ ನಿನಗೆ ದುಡ್ಡು ಬೇಕಾಗಿರೋದು. ನಾನು ಕೊಡೋದಿಲ್ಲ. ನಿನ್ನ ಪಾಡಿಗೆ ನೀನು ನಿನ್ನ ರೂಮಿಗೆ ಹೋಗು. ಮೊದಲೇ ನನಗೆ ಸುಸ್ತಾಗಿದೆ. ಒಂಚೂರು ರೆಸ್ಟ್ ಮಾಡ್ಬೇಕು.'

ಮಗ ಪೆಚ್ಚು ಮೋರೆ ಹಾಕಿಕೊಂಡು ರೂಮಿಗೆ ಬಂದು ಬಾಗಿಲು ಹಾಕಿಕೊಂಡ.

ಸ್ವಲ್ಪ ಹೊತ್ತಾದ ಮೇಲೆ ಅಪ್ಪನ ಕೋಪವೆಲ್ಲ ಇಳಿದುಹೋಯ್ತು, ಮಗನ ಮೇಲೆ ರೇಗಿದ್ದಕ್ಕೆ ಪಶ್ಚಾತ್ತಾಪವೂ ಮುತ್ತಿಕೊಂಡಿತು, ಯೋಚಿಸಲಾರಂಭಿಸಿದ 'ನನ್ನ ಮಗ ಯಾಕೆ ದುಡ್ಡು ಕೇಳಿರಬಹುದು. ಬಹುಶಃ ಶಾಲೆಯಲ್ಲಿ ಹಣ ಕೇಳಿರಬಹುದೆ. ಸ್ನೇಹಿತನಿಗೆ ಸಹಾಯ ಮಾಡಲಿಕ್ಕೆ ಇರಬಹುದೆ. ಯಾವತ್ತೂ ಹಣ ಕೇಳದವನು ಕೇಳುತ್ತಾನೆಂದರೆ ಏನಾದರು ಕಾರಣವಿರುತ್ತೆ, ಅದನ್ನು ನಾನು ವಿಚಾರಿಸಬೇಕಿತ್ತು, ಛೇ ಸುಖಾಸುಮ್ಮನೆ ರೇಗಿ ತಪ್ಪು ಮಾಡಿದೆ.'

ಕೂಡಲೇ ಎದ್ದು ಮಗನ ರೂಮಿನತ್ತ ಹೊರಟ. ಬಾಗಿಲು ತಳ್ಳಿ ನೋಡಿದ, ಮಗ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಾನೆ. ಮೆಲ್ಲಗೆ ಬಳಿ ಸಾರಿ, ಪ್ರೀತಿಯಿಂದ ತಲೆ ನೇವರಿಸುತ್ತಾ 'ಮಲಗಿರುವೆಯಾ ಮಗನೇ' ಎಂದ.

'ಇಲ್ಲ ಅಪ್ಪಾ, ನಾನು ಮಲಗಿಲ್ಲ' ಈ ಘಳಿಗೋಸ್ಕರ ಕಾದಿದ್ದವನಂತೆ ಮಗ ಎದ್ದು ಕೂತ.

'ಆಗಲೆ ನಿನ್ನ ಮೇಲೆ ರೇಗಬಾರದಿತ್ತು ಮಗನೇ, ಐ ಆ್ಯಮ್ ಸೋ ಸಾರಿ ಕಂದ. ಇಗೋ, ನೀನು ಕೇಳಿದ ಐವತ್ತು ರೂಪಾಯಿ' ಮಗನ ಕೈಗೆ ಹಣವಿಟ್ಟ.

ಐವತ್ತು ರೂಪಾಯಿ ಕೈಸೇರುತ್ತಿದ್ದಂತೆಯೇ ಖುಷಿಗೊಂಡ ಮಗ 'ಥ್ಯಾಂಕ್ಯೂ ಅಪ್ಪ' ಎಂದ. ಅಪ್ಪನ ಕೆನ್ನೆಗೆ ಮುತ್ತನ್ನೊತ್ತಿದ. ನಂತರ ತನ್ನ ದಿಂಬಿನ ಕೆಳಗೆ ಕೈಹಾಕಿ ಅದೇನನ್ನೊ ಹೊರಗೆ ಎಳೆದ. ಮುದುರಿಕೊಂಡ ಒಂದಷ್ಟು ನೋಟುಗಳು, ಚಿಲ್ಲರೆ ಕಾಯಿನ್‌ಗಳು ಅವನ ಕೈಗುಂಟ ಬಂದವು. ತನ್ನ ಮಗ ಆಗಲೇ ಒಂದಷ್ಟು ದುಡ್ಡು ಕೂಡಿಟ್ಟಿರುವ ವಿಚಾರ ತಿಳಿದ ಅಪ್ಪನಿಗೆ ಕುತೂಹಲ ಮತ್ತಷ್ಟೂ ಹೆಚ್ಚಾಯಿತು.

'ನಿನ್ನ ಬಳಿ ಈಗಾಗಲೇ ಹಣ ಇದ್ದಿದ್ದೇ ಆದಲ್ಲಿ, ನನ್ನ ಹತ್ತಿರ ಯಾಕೆ ಕೇಳಿದೆ? ಅಪ್ಪ ಪ್ರಶ್ನಿಸಿದ.

'ಹಣವೇನೋ ಇತ್ತು ಪಪ್ಪಾ, ಆದ್ರೆ ನನಗೆ ಬೇಕಾದಷ್ಟು ಹಣ ಇರಲಿಲ್ಲ. ಸ್ವಲ್ಪ ಕಡಿಮೆ ಇತ್ತು. ಈಗ ಸರಿಹೋಯ್ತು' ಮಗ ಉತ್ತರಿಸಿದ.

ಅಪ್ಪ ಕೊಟ್ಟಿದ್ದ ಐವತ್ತು ರೂಪಾಯಿಯೂ ಸೇರಿದಂತೆ ಎಲ್ಲ ಹಣವನ್ನು ಮತ್ತೆಮತ್ತೆ ಎಣಿಸಿ ಖಾತರಿ ಮಾಡಿಕೊಂಡ. ಈಗ ಅಷ್ಟೂ ದುಡ್ಡನ್ನು ತನ್ನ ಬೊಗಸೆಯಲ್ಲಿ ತುಂಬಿಕೊಂಡು ಅಪ್ಪನತ್ತ ಚಾಚಿದ.

'ಅಪ್ಪಾ, ತಗೋ ನನ್ನ ಬಳಿ ನೂರು ರೂಪಾಯಿ ಇದೆ. ಈ ಹಣ ತಗೊಂಡು ನಿನ್ನ ಸಮಯದ ಒಂದು ಗಂಟೆಯನ್ನು ನನಗೆ ಕೊಡು. ನಾಳೆ ಒಂದು ಗಂಟೆ ನನ್ನೊಂದಿಗೆ ಕಳಿ. ನಿನ್ನ ಜೊತೆ ಊಟ ಮಾಡ್ಬೇಕು ಅಂತ ಆಸೆ ಆಗ್ತಿದೆಯಪ್ಪ, ಪ್ಲೀಸ್ ನಾಳೆ ಬೇಗ ಬಾ ಅಪ್ಪ' ಮಗನ ವ್ಯವಹಾರವನ್ನು ಕಂಡು ಅಪ್ಪ ಅವಾಕ್ಕಾಗಿ ಹೋದ. ಮಾತುಗಳು ಗಂಟಲಿಂದ ಹೊರಗೆ ನುಸುಳಲೇ ಇಲ್ಲ. ಮಗನನ್ನು ಬಾಚಿ ತಬ್ಬಿದ. ಕಣ್ಣಾಲಿಗಳು ನೀರನ್ನು ಮಿಡಿಯಲಾರಂಭಿಸಿದವು. ಭಾವೋದ್ವೇಗ ಬಿಕ್ಕಲಾರಂಭಿಸಿತು.

■ ಇತ್ತೀಚೆಗೆ ನಮ್ಮ ಪ್ರಕಾಶನದಿಂದ ಬಿಡುಗಡೆಯಾದ ಗಿರೀಶ್ ತಾಳಿಕಟ್ಟೆಯವರ 'ಕಾಡುವ ಕಥೆಗಳು' ಪುಸ್ತಕದಿಂದ ಆಯ್ದ ಕಥೆ.



ಮಗಳ ಸಮೇತ ಹಸೆಮಣೆಗೆ ಚಿರಂಜೀವಿ-ಸುರೇಖಾ ದಂಪತಿ ಸಹಿತ ಶ್ರೀಜಾ ಮಗ ರಾಮಚರಣ್ ಪವನ್ ಕಲ್ಯಾಣ

ಚಿರು ಮಗಳ ಮರು ಮದುವೆ

ಒಬ್ಬ ತಂದೆ ಏನೆಲ್ಲಾ ಅವಮಾನ, ಕಿರುಕುಳ, ಅಪನಿಂದೆಗಳ ನಂತರವೂ ಅದಕ್ಕೆ ಕಾರಣಳಾದ ತನ್ನ ಮುದ್ದಿನ ಮಗಳನ್ನು ಕ್ಷಮಿಸುವುದಿದೆಯಲ್ಲ-

ಹಾಗೆ ದುಡುಕಿಗೆ ಬಿದ್ದು ಸಂಕಷ್ಟಕ್ಕೆ ಸಿಲುಕಿದ ತನ್ನ ಮಗಳನ್ನು ಮತ್ತೆ ಹಿಂದಿನಂತೆಯೇ ಪ್ರೀತಿಸುವುದು, ಸಂತೈಸುವುದು ಮತ್ತು ನೆಲಕಚ್ಚಿದ ಆಕೆಯ ಭವಿಷ್ಯವನ್ನು ತಾನೇ ನಿಂತು ಮತ್ತೆ ಕಟ್ಟಿಕೊಡುವುದು ಬಹುಶಃ ಅಸಾಮಾನ್ಯ ಹೃದಯವಂತ ತಂದೆಗಷ್ಟೇ ಸಾಧ್ಯವೇನೊ!

ಅಂಥೊಬ್ಬ ತಂದೆಯಾಗಿ ಹೊಮ್ಮಿದ್ದಾರೆ ಮೆಗಾಸ್ಟಾರ್ ಚಿರಂಜೀವಿ!

ಅದಕ್ಕೆ ಸಾಕ್ಷಿಯಾಗಿದ್ದು ಬೆಂಗಳೂರು-ದೇವನಹಳ್ಳಿ ಅಂತರರಾಷ್ಟ್ರೀಯ ಏರ್‌ಪೋರ್ಟ್ ರಸ್ತೆಯ ಚಿರಂಜೀವಿ ಫಾರ್ಮ್ ಹೌಸ್. ಐಟಿಸಿ ಫ್ಯಾಕ್ಟರಿ ಪಕ್ಕ ಹೆದ್ದಾರಿಗೆ ಹೊಂದಿಕೊಂಡಂತೆ ಹತ್ತೆಕರೆಗೂ ವಿಸ್ತೀರ್ಣದ ನಿಗೂಢ ತೋಟದ ಮನೆಯಲ್ಲಿ ಮಾರ್ಚ್ 28ರ ಸಂಜೆ ನಡೆದದ್ದು ಚಿರಂಜೀವಿಯ ದ್ವಿತೀಯ ಪುತ್ರಿ ಶ್ರೀಜಾಳ ಮದುವೆ. ಅದು ಮಾಮೂಲಿನ ಮದುವೆಯೇನಲ್ಲ. ಶ್ರೀಜಾ ಚಿರಂಜೀವಿಯ ಮುದ್ದಿನ ಮಗಳು. 2007ರ ಅಕ್ಟೋಬರ್ ಹದಿನೇಳರಂದು ತನ್ನ ಕಾಲೇಜು ಸಹಪಾಠಿ ಸಿರೀಷ್ ಭಾರದ್ವಾಜ್ ಎಂಬ 22ರ ಪೋರನ ಜೊತೆ ರಾತ್ರೋರಾತ್ರಿ ಮನೆಬಿಟ್ಟು ಪರಾರಿಯಾದವಳು ಶ್ರೀಜಾ.

ಆಂಧ್ರದ ಸೆಲ್ಯೂಲಾಯ್ಡ್ ಸಾರ್ವಭೌಮನಂತೆ ಮೆರೆದ ಚಿರಂಜೀವಿಗೆ ಆತನ ಮಗಳೇ ತಿರುಗಿಬಿದ್ದು ತನ್ನ ಮದುವೆ ಮುರಿಯಲು ತಂದೆ ರೌಡಿಗಳನ್ನು ಛೂ ಬಿಟ್ಟಿದ್ದಾನೆ, ತನಗೆ ತಂದೆಯಿಂದಲೇ ಪ್ರಾಣಾಪಾಯವಿದೆ, ತಾನು ಮತ್ತು ತನ್ನ ಪ್ರಿಯಕರನಿಗೆ ಪೊಲೀಸ್ ರಕ್ಷಣೆ ಬೇಕು... ಎಂದೆಲ್ಲ ಬಹಿರಂಗವಾಗಿ ಆರೋಪಿಸಿದ್ದೇನು; ಪೊಲೀಸರಿಗೆ ತಂದೆ ವಿರುದ್ಧವೇ ದೂರು ಕೊಟ್ಟಿದ್ದೇನು?

ದೇವನಹಳ್ಳಿ ತೋಟ

ಈಗ ನಡೆಯುತ್ತಿರುವುದು ಶ್ರೀಜಾಳ ಮರುಮದುವೆ. ತನ್ನ ಮೊದಲ ಗಂಡನಿಂದ ಜನಿಸಿದ ಎಂಟು ವರ್ಷದ ಪುಟ್ಟ ಮಗಳ ಸಮೇತ ಈಗ ಹಸೆಮಣೆಯೇರಿದ್ದಾಳೆ ಶ್ರೀಜಾ. ಮುರಿದುಬಿದ್ದ ಮೊದಲ ಮದುವೆ, ಕೈಕೊಟ್ಟ ಪ್ರಿಯಕರನ ದ್ರೋಹ, ಭಗ್ನ ಕನಸುಗಳ ಮೆರವಣಿಗೆ, ದುರಾಸೆಗೆ ಬಿದ್ದ ಪಶ್ಚಾತ್ತಾಪ, ನಂಬಿ ಹೆತ್ತವರನ್ನೇ ತೊರೆದ ತಪ್ಪಿಗೆ ಉಂಡ ಹಿಂಸೆ, ಯೌವನದ ಮಸ್ತಿಗೆ ಬಿದ್ದು ಹೆತ್ತವರನ್ನೇ ಫಜೀತಿಗೆ ನೂಕಿದ ಸಂಕಟ ಇತ್ಯಾದಿಗಳೆಲ್ಲವನ್ನೂ ನುಂಗುತ್ತಲೇ ಹಸೆಯೇರಿದ ಮೆಗಾಸ್ಟಾರ್ ಮುದ್ದಿನ ಮಗಳಿಗೀಗ ಎರಡನೇ ಮದುವೆ!

ಅದೂ ತಂದೆಯೇ ನಿಂತು ಮಾಡುತ್ತಿರುವ ಮರು ಮದುವೆ!

ಹೆಚ್ಚೂಕಮ್ಮಿ ರಹಸ್ಯ ಕಾರ್ಯಾಚಾರವೊಂದರ ಹಾಗೆ ನಡೆದ ಮದುವೆಗೆ ಕರ್ನಾಟಕದ ಅದರಲ್ಲೂ ಕನ್ನಡ ಚಿತ್ರರಂಗದ ಯಾರೊಬ್ಬರಿಗೂ ಆಹ್ವಾನವಿರಲಿಲ್ಲ. ಚಿರಂಜೀವಿಯ ಆ ಕಾಲದ ಆಪ್ತೆ ಸುಮಲತಾ, ಆ ಕಾರಣಕ್ಕೇ ಆತ್ಮೀಯರಾದ ಅಂಬಿ, ವರನಟ ರಾಜ್ ಕುಟುಂಬದ ಯಾರೊಬ್ಬರಾಗಲಿ ಯಾರನ್ನೂ ಆಹ್ವಾನಿಸದೆ ಬೆಂಗಳೂರಿನ ಯಾರೊಬ್ಬರಿಗೂ ಗೊತ್ತೇ ಆಗದ ಹಾಗೆ ತೀರ ಖಾಸಗಿಯಾಗಿ ಮಗಳ ಮದುವೆ ಮುಗಿಸಿದ ಚಿರಂಜೀವಿಯ ಮುಖದಲ್ಲಿದ್ದದ್ದು ಓರ್ವ ಛಲವಂತ ತಂದೆಯೊಬ್ಬನ ಸಾರ್ಥಕ ಭಾವ. ಸದ್ಯ ಮದುವೆಯ ದೃಶ್ಯಾವಳಿಗಳ್ಯಾವುದನ್ನೂ ಚಿರು ಕುಟುಂಬ ಬಹಿರಂಗಪಡಿಸಿಲ್ಲ. ತೆಲುಗಿನ ಯಾವುದೋ ಚಾನಲ್ಲೊಂದಕ್ಕೆ ಆರತಕ್ಷತೆಯ ಪ್ರಸಾರದ ಹಕ್ಕು ಮಾರಿದ್ದಾರಂತೆ. ಮಾರ್ಚ್ 31ಕ್ಕೆ ಹೈದರಾಬಾದಿನ 'ದಿ ಪಾರ್ಕ್ ಹಯಾತ್' ಹೊಟೇಲಿನಲ್ಲಿ ಆರತಕ್ಷತೆಯಿದೆ. ಆ ಸಂಜೆಯ ಸಡಗರಕ್ಕೂ ಅದೆಂಥದೋ ನಿರ್ಬಂಧ. ಕೇವಲ ಐನೂರು ಮಂದಿ ಅತಿಗಣ್ಯರಿಗಷ್ಟೇ ಆಹ್ವಾನ. ಆ ಪಟ್ಟಿಯಲ್ಲಿ ಸೂಪರ್‌ಸ್ಟಾರ್ ರಜನಿ, ಬಾಲಿವುಡ್ ಪಿತಾಮಹ ಅಮಿತಾಬ್, ಸಲ್ಮಾನ್‌ಖಾನ್, ಅಮೀರ್ ಖಾನ್ ಸೇರಿದಂತೆ ಮಲೆಯಾಳದ ಮಮ್ಮೂಟ್ಟಿ, ಕಮಲ್ ಹಾಸನ್ ಮತ್ತು ಕರ್ನಾಟಕದಿಂದ ಆಮಂತ್ರಣ ಪಡೆದ ಏಕೈಕ ಕುಟುಂಬವೆಂದರೆ ಅದು ಅಂಬಿ-ಸುಮಲತಾ ಮಾತ್ರ!

ನಡೆಯುತ್ತಿರುವುದು ಮರುಮದುವೆ. ಅದರಲ್ಲಂಥ ವಿಶೇಷವೇನಿದ್ದಿತು? ಕುತೂಹಲವಿರುವುದು ಚಿರಂಜೀವಿಯಂಥ ದೈತ್ಯನೊಬ್ಬ ದುಡುಕಿಗೆ ಬಿದ್ದು ಯಡವಟ್ಟು ಮಾಡಿಕೊಂಡ ತನ್ನ ಮುದ್ದಿನ ಮಗಳಿಂದ ಪಟ್ಟ ಫಜೀತಿ ಮತ್ತದನ್ನು ತಾಳ್ಮೆಯಿಂದ ಗೆದ್ದು ಹಳಿತಪ್ಪಿದ ಮಗಳ ಭವಿಷ್ಯವನ್ನು ಸರಿದಾರಿಗೆ ತಂದ ರೀತಿಯಲ್ಲಿ. ಅವತ್ತು ದೇಶದ ಮೀಡಿಯಾಗಳೆಲ್ಲದರ ಕಂಗಳಲ್ಲಿ ತಂದೆಯೇ ವಿಲನ್. ಶ್ರೀಮಂತನ ಮಗಳನ್ನು ಹಾರಿಸಿಕೊಂಡೊಯ್ದು ಆಕೆಯ ತಂದೆಯ ವಿರುದ್ಧ ಹೆಣಗಾಡುವ ಅದೆಷ್ಟೋ ಪಾತ್ರಗಳಲ್ಲಿ ಮಿಂಚಿದ ಚಿರಂಜೀವಿಗೆ ಮುಂದೊಂದು ದಿನ ತಾನೇ ಅಂಥ ತಂದೆಯೊಬ್ಬನ ಸ್ಥಾನಕ್ಕೆ ಬಂದು ನಿಲ್ಲುತ್ತೇನೆಂಬ ಕಿಂಚಿತ್ ನಿರೀಕ್ಷೆ ತಾನೇ ಎಲ್ಲಿತ್ತು.

ಅದು 2007ರ ಅಕ್ಟೋಬರ್ 15ನೇ ತಾರೀಖು. ಶ್ರೀಜಾ ಮುದ್ದಿನ ಮಗಳು. ಇವತ್ತಲ್ಲ ನಾಳೆ ಸೈನಾ ನೆಹವಾಲ್‌ಥರ ಮಗಳು ಬ್ಯಾಡ್ಮಿಂಟನ್ ಚಾಂಪಿಯನ್ ಆಗುತ್ತಾಳೆಂದೇ ಕನಸು ಕಟ್ಟಿದ್ದ ಚಿರು ಪ್ರತಿ ಬೆಳಗ್ಗೆಯಾದರೆ ಹೈದರಾಬಾದ್‌ನ ಲಾಲ್ ಬಹಾದ್ದೂರ್ ಶಾಸ್ತ್ರಿ ಇಂಡೋರ್ ಸ್ಟೇಡಿಯಂನ ಬ್ಯಾಡ್ಮಿಂಟನ್ ಅಕಾಡೆಮಿಗೆ ಖುದ್ದಾಗಿ ಮಗಳನ್ನೊಯ್ದು ಬಿಟ್ಟು ಬರುತ್ತಿದ್ದ. ಪ್ರಾಕ್ಟೀಸ್ ಮುಗಿದ ನಂತರವೂ ತಾನೇ ಹೋಗಿ ಮನೆಗೆ ಕರೆತರುತ್ತಿದ್ದ. ತನ್ನ ಬಂಜಾರಾ ಹಿಲ್



ಈಗ ಕಲ್ಯಾಣ್ ಜೊತೆ ಮರುಮದುವೆಯಲ್ಲಿ

ನವ ವರ ಕಲ್ಯಾಣ್ ಮತ್ತು ಚಿರು ಫ್ಯಾಮಿಲಿ ಲೆಕ್ಕಾಚಾರ!

ಶ್ರೀಜಾಳ ಮರುಮದುವೆಗೆ ಸಮ್ಮತಿಸಿದ ಕಲ್ಯಾಣ್ ಎಂಬ ಅಮೆರಿಕನ್ ಎನ್ನಾರೈ ಯಾರು ಎತ್ತ ಎಂಬ ಬಗ್ಗೆ ಸದ್ಯ ತೆಲುಗಿನ ಬಹುತೇಕ ಟೀವಿ ಚಾನಲ್‌ಗಳೆಲ್ಲ ದಿನವಿಡೀ ಚರ್ಚೆಗಿಳಿದಿವೆ. ಈ ಬಗ್ಗೆ ಚಿರಂಜೀವಿ ಕುಟುಂಬವಾಗಲಿ ಅಲ್ಲು ಫ್ಯಾಮಿಲಿಯಾಗಲಿ ಯಾವ ಗುಟ್ಟನ್ನು ಬಿಟ್ಟುಕೊಡುತ್ತಿಲ್ಲ. ಹಾಗೇ ಕಲ್ಯಾಣ್ ಕುಟುಂಬ ಕೂಡ ಯಾವ ಸಂಪರ್ಕಕ್ಕೂ ಸಿಲುಕುವುದಿಲ್ಲ.

ಒಂದು ಮೂಲದ ಪ್ರಕಾರ ನವವರ ಕಲ್ಯಾಣ್ ಅಮೆರಿಕದ ಬಿಜಿನೆಸ್ ಟೈಕೂನ್ ಕ್ಯಾಪ್ಟನ್ ಕಿಶನ್‌ನ ದ್ವಿತೀಯ ಪುತ್ರ. ಉದ್ದಿಮೆಪತಿ ಕಿಶನ್ ಮೂಲತಃ ಆಂಧ್ರದ ಚಿತ್ತೂರಿನವರಂತೆ. ಹೈದ್ರಾಬಾದಿನಲ್ಲಿದ್ದಾಗಲೇ ಚಿರಂಜೀವಿ ಕುಟುಂಬಕ್ಕೂ ಕಿಶನ್ ಕುಟುಂಬಕ್ಕೂ ಗೆಳೆತನವೇರ್ಪಟ್ಟಿತ್ತು. ಕಿಶನ್‌ನ ಮಗ ಕಲ್ಯಾಣ್ ಓದುತ್ತಿದ್ದ ಹೈಸ್ಕೂಲಿನಲ್ಲೇ ಶ್ರೀಜಾ ಸೇರ್ಪಡೆಗೊಂಡಿದ್ದರಿಂದ ಶ್ರೀಜಾ ಮತ್ತು ಕಲ್ಯಾಣ್ ಮಧ್ಯೆ ಒಡನಾಟವಿತ್ತಾದರೂ ಅಷ್ಟೊಂದು ಸುಂದರಿಯಲ್ಲದ, ಆಂಧ್ರ ತೆಲುಗರ ಯಾರೇ ಸರ್ವೇಸಾಮಾನ್ಯ ಯುವತಿಯಷ್ಟೂ ಆಕರ್ಷಣೆಯಿಲ್ಲದ ಶ್ರೀಜಾಳ ಬಗ್ಗೆ ಕಲ್ಯಾಣ್ ಆಸಕ್ತಿ ವಹಿಸಲಿಲ್ಲ.

ಮುಂದೆ ಉದ್ದಿಮೆಪತಿ ಕಿಶನ್ ತನ್ನ ವಹಿವಾಟನ್ನು ಅಮೆರಿಕ ವಿಸ್ತರಿಸಿ ಕ್ಯಾಲಿಫೋರ್ನಿಯಾ ವಾಸಿಯಾದ ಮೇಲೆ ಹೆಚ್ಚೂಕಮ್ಮಿ ಎರಡೂ ಕುಟುಂಬಗಳ ನಡುವಿದ್ದ ಒಡನಾಟ ಕ್ಷೀಣಿಸಿತಾದರೂ ಚಿರಂಜೀವಿಯ ಸ್ನೇಹಕ್ಕೆ ಕಿಶನ್ ದೂರವಾಗುವಂತಿಲಿಲ್ಲ. ಇವತ್ತಲ್ಲ ನಾಳೆ ಆಂಧ್ರದ ಮುಖ್ಯಮಂತ್ರಿಯಾಗಬಹುದೆಂಬ ಕಿಶನ್‌ನ ಲೆಕ್ಕಾಚಾರ ಸ್ನೇಹವನ್ನು ಹಸಿರಾಗೇ ಇಟ್ಟಿತ್ತು. ಚಿರು ಕುಟುಂಬದ ಪ್ರತಿಷ್ಠಿತ ಕಾರ್ಯಕ್ರಮಗಳೆಲ್ಲಕ್ಕೂ ವಿಶೇಷ ಅತಿಥಿಯಾಗಿ ಬರುತ್ತಿದ್ದ ಕಿಶನ್ ಕುಟುಂಬದಲ್ಲಿ ನಡೆದ ಸಣ್ಣ ಅವಘಡವೊಂದು ಮತ್ತೆ ಎರಡೂ ಕುಟುಂಬಗಳ ಮಧ್ಯೆ ಬೆಸುಗೆಯೇರ್ಪಡಿಸಿದ್ದು 2014 ರ ಡಿಸೆಂಬರ್‌ನಲ್ಲಿ. ಆ ಹೊತ್ತಿಗೆ ಕಿಶನ್ ಮಗ ಕಲ್ಯಾಣ್ ತನ್ನ ಪತ್ನಿಯಿಂದ ಡೈವೋರ್ಸ್ ಪಡೆದಿದ್ದ!!

ಇದು ಚಿರು ಪತ್ನಿ ಸುರೇಖಾರ ತಲೆ ಹೊಕ್ಕಿದ್ದೇ ಬೇರೆಯದೇ ತಿರುವು ಪಡೆಯಿತು. ಹೇಗೂ ಕಲ್ಯಾಣ್ ಪತ್ನಿಯಿಂದ ಡೈವೋರ್ಸ್ ಪಡೆದಾಗಿದೆ. ಏಕಾಂಗಿಯಾದ ಕಲ್ಯಾಣ್ ಬೇರೊಂದು ಮದುವೆಗಾಗಿ ಅಣಿಯಾಗಿದ್ದಾನೆ. ಇತ್ತ ಶ್ರೀಜಾಳ ದಾಂಪತ್ಯವೂ ಮುರಿದುಬಿದ್ದಿದೆ. ಕಾಕತಾಳೀಯವೋ ಪರಸ್ಪರ ಅನಿವಾರ್ಯವೋ ಚಿರುಪತ್ನಿ ಸುರೇಖಾ ಇಟ್ಟ ಪ್ರಸ್ತಾಪವನ್ನು ಚಕಾರವೆತ್ತದೆ ಕಲ್ಯಾಣ್ ಸಮ್ಮತಿಸಿದ್ದಾನೆ. ಅದೀಗ ಮದುವೆ ಮೂಲಕ ಸಾಕಾರಗೊಂಡಿದೆ. ಬೆಂಗಳೂರೊಂದರಲ್ಲೇ ಹತ್ತಕ್ಕೂ ಅಧಿಕ ಕಲ್ಯಾಣ್ ಜ್ಯುವೆಲ್ಲರ್ಸ್ ಮಳಿಗೆಗಳಿವೆ. ಕರ್ನಾಟಕದ ಪ್ರಮುಖ ನಗರಗಳಲ್ಲೂ ಇದರ ಶಾಖೆಗಳಿವೆ. ಕೇರಳ, ಆಂಧ್ರ ತೆಲಂಗಾಣ ಮತ್ತು ತಮಿಳುನಾಡು ಸೇರಿದಂತೆ ಕಲ್ಯಾಣ್ ಗ್ರೂಪ್ ಭಾರತವೊಂದರಲ್ಲೇ ಐವತ್ತಕ್ಕೂ ಅಧಿಕ ಆಭರಣ ಮಳಿಗೆಗಳನ್ನು ಹೊಂದಿದೆ.

ಅಲ್ಲಿಗೆ ಚಿರುಮಗಳ ಅದೃಷ್ಟ ಮತ್ತು ತಂದೆಯ ಪ್ರಯತ್ನ ಇನ್ನೆಂಥದ್ದಿರಬೇಕೆಂಬ ಲೆಕ್ಕ ಸಿಗಲೇಬೇಕು. ಅದೃಷ್ಟವೆಂದರೆ ಇದೇ ತಾನೆ? ಮಗಳ ಸಮೇತ ಶ್ರೀಜಾಳ ಕೈಹಿಡಿದ ಕಲ್ಯಾಣ್ ತಾನು ಚಿರಂಜೀವಿಯ ಅಳಿಯನಾಗುತ್ತೇನೆಂದು ಹೇಗೆ ತಾನೆ ನಿರೀಕ್ಷಿಸಲು ಸಾಧ್ಯವಿತ್ತು? ಮೊದಲೇ ಬಾಲ್ಯದ ಗೆಳತಿ. ಇತ್ತ ಈತನ ಪತ್ನಿಯೂ ಕೈಕೊಟ್ಟು ಅತ್ತ ಚಿರು ಮಗಳ ಮದುವೆಯೂ ಮುರಿದುಬಿದ್ದು ಎಲ್ಲಿಯ ಅಮೆರಿಕ ಎಲ್ಲಿಯ ಹೈದರಾಬಾದು ಎಂಥ ಸಂಬಂಧ ಯಾವ ಜನ್ಮದ ಅನುಬಂಧವೋ ಬಲ್ಲವರ್ಯಾರು



ದೇವನಹಳ್ಳಿಯ ಚಿರಂಜೀವಿ ಫಾರ್ಮ್ ಹೌಸ್

ಗಳೆಯಿಂದ ಆ ನುಸುಕಿನಲ್ಲೂ -ಮಗಳನ್ನು ಬ್ಯಾಡ್ಮಿಂಟನ್ ಾತೆಮಿಗೊಯ್ಯು ಕರೆತರುತ್ತಿದ್ದ ಚಿರು ಮಗಳ ಪಾಲಿನ ದಲ ಹೀರೋ. ಆದರೆ ತನ್ನನ್ನೂ ಮೀರಿಸುವಂತ ತೋ ಓರ್ವ ತನ್ನ ಮಗಳ ಬದುಕಿಗೆ ಕಾಲಿಟ್ಟು ವಷ್ಟೋ ವರ್ಷಗಳಾಯಿತೆಂಬುದು ಗೊತ್ತಾಗಿದ್ದು ಆವತ್ತೇ.

ಬ್ಯಾಡ್ಮಿಂಟನ್ ಪ್ರಾಕ್ಟೀಸ್‌ಗೆಂದು ಹೊರಟಿದ್ದ ಮಗಳು ಜಾ ಮತ್ತೆ ವಾಪಸ್ಸಾಗಲೇ ಇಲ್ಲ. ಅಂತಹ ತಂದೆಯಿಂದ ಳ ಮಗಳನ್ನು ಕಿತ್ತೊಯ್ದವನು ಸಿರೀಸ್ ಭಾರದ್ವಾಜ್ ಬ ಬ್ರಾಹ್ಮಣರ ಹುಡುಗ!

ಮಗಳ ರಾದ್ಧಾಂತ

ಒಂದೆಡೆ ಮಹತ್ವಾಕಾಂಕ್ಷೆಯಿಟ್ಟು ಹುಟ್ಟು ಹಾಕಿದ ಜಾರಾಜ್ಯಂ' ಪಕ್ಷಕ್ಕೆ ಬಹುಮತ ಬಾರದೆ ತನ್ನ ುಖ್ಯಮಂತ್ರಿ ಕನಸೆಲ್ಲ ನುಚ್ಚುನೂರಾದ ಹತಾಶೆ, ತ್ತೊಂದೆಡೆ ಮುದ್ದಿನ ತಮ್ಮ ಪವನ್ ಕಲ್ಯಾಣ್ ತನ್ನ ುದ್ಧವೇ ತಿರುಗಿಬಿದ್ದ ಅವಮಾನ. ಸಾಲದೆಂಬಂತೆ ಮುದ್ದಿನ ಗಳೇ ತನ್ನ ವಿರುದ್ಧ ತಿರುಗಿಬಿದ್ದು ಅಳಿದುಳಿದ ಮಾನವೂ ಣ್ಣು ಹಾಕಿದ ಘೋರ. ಒಂದರಮೇಲೊಂದರಂತೆ ಪ್ಪಳಿಸಿದ ಆಘಾತಗಳಿಂದ ಅಕ್ಷರಶಃ ಕುಸಿದುಹೋದ ರಂಜೀವಿ ಸುಲಭಕ್ಕೆ ಚೇತರಿಸಿಕೊಳ್ಳುವಂತಿರಲಿಲ್ಲ.

ತನ್ನ ಸಹಪಾಠಿ ಮತ್ತು ಬಾಯ್‌ಫ್ರೆಂಡ್ ಸಿರೀಸ್ ರದ್ವಾಜ್‌ನ ಜೊತೆ ಮನೆ ತೊರೆದು ಪರಾರಿಯಾಗಿ ದರಾಬಾದ್‌ನ ಯಾವುದೋ ದೇವಸ್ಥಾನವೊಂದರಲ್ಲಿ ತೀರ ೀತಿಗೆ ಬಿದ್ದು ಮದುವೆಯಾದಾಗ ಶ್ರೀಜಾಳಿಗಿನ್ನೂ ತ್ತೊಂಬತ್ತು ವರ್ಷ. ಸಿರೀಸ್ ಆಕೆಗಿಂತ ಕೇವಲ ಮೂರು ರ್ಷವಷ್ಟೇ ದೊಡ್ಡವ ಅಂದರೆ ಇಪ್ಪತ್ತೆರಡರ ಪೋರ. ೋಡಲು ಸುಂದರನಲ್ಲ. ಶ್ರೀಮಂತ ಹಿನ್ನೆಲೆಯವನೂ ಲ್ಲ. ಓದಿನಲ್ಲಿ ಅಪ್ರತಿಮನಾಗಲಿ, ಅಸಾಧ್ಯ ಬುದ್ಧಿವಂತ ಗಲಿ, ಯಾರೇ ಹೆಸರಾಂತನ ಮಗನಾಗಲಿ ಅಲ್ಲದ ೀಸ್‌ನಲ್ಲಿ ಶ್ರೀಜಾ ಅದೇನು ಕಂಡಳೋ ಯಾರೊಬ್ಬರಿಗೂ ರ್ಥವಾಗಲಿಲ್ಲ. ತನ್ನ ಮಗಳನ್ನೇ ಸಂಭಾಳಿಸದವನು ಇನ್ನು ಂಧ್ರದ ಮುಖ್ಯಮಂತ್ರಿಯಾಗಿ ಕಡೆದು ಗುಡ್ಡೇ ಕುವುದೇನು ಎಂದು ಸಿಕ್ಕಸಿಕ್ಕವರೆಲ್ಲ ಆಡಿಕೊಂಡಿದ್ದೆ.

ತನ್ನಿಚ್ಛೆಗೆ ವಿರುದ್ಧವಾಗಿ ತನ್ನನ್ನೇ ಧಿಕ್ಕರಿಸಿ ಮಗಳು ಾಡಿಕೊಂಡ ಮದುವೆಯನ್ನು ಮೇಲುನೋಟಕ್ಕಷ್ಟೇ ಮ್ಮತಿಸಿದ ಚಿರಂಜೀವಿ ಅಷ್ಟು ಸುಲಭಕ್ಕದನ್ನು ರೆಯುವಂತಿರಲಿಲ್ಲ. ಉಗಿಯಲಸಾಧ್ಯ ಬಿಸಿತುಪ್ಪದಂತೆ ಲ್ಲವನ್ನೂ ಮೌನವಾಗೇ ಸಹಿಸಿಕೊಂಡ. 'ಶ್ರೀಜಾ ನೀನು ್ನ ಮಗಳು. ನಾವೆಲ್ಲರೂ ನಿನ್ನನ್ನು ತುಂಬಾ ಪ್ರೀತಿಸುತ್ತಿದ್ದೇವೆ. ನೇನೇ ನಿರ್ಧಾರ ಕೈಗೊಂಡಿದ್ದರೂ ನಾನು ಅದನ್ನು ರವಿಸುತ್ತೇನೆ. ನೀನು ಎಲ್ಲೇ ಇದ್ದರೂ ಈ ಕೂಡಲೇ ಂದು ಬಿಡು...' ಎಂದು ಟೀವಿ ಚಾನಲ್ಲೊಂದರ ಮೂಲಕ ರು ಮಗಳಿಗೆ ಕರೆ ನೀಡಿದ ರೀತಿಯೇ ಮನ ಕುವಂತಿತ್ತು.

ಎರಡೇ ವರ್ಷಕ್ಕೆ!

ಎರಡೇ ವರ್ಷಕ್ಕೆ ಅಂದರೆ ಶ್ರೀಜಾ-ಸಿರೀಸ್ ದುವೆಯಾದ ಹೊಸದರಲ್ಲೇ ಚಿರು ಮಗಳ ದುಡುಕಿಗೆ ತಿಫಲ ದೊರಕಲಾರಂಭಿಸಿತ್ತು. ಸಿರೀಸ್‌ನ ತಂದೆ ಓರ್ವ ಧಾರಣ ವಕೀಲ. ತಾಯಿಗೂ ಅಂಥ ಶ್ರೀಮಂತ ಆಸ್ತಿ ನ್ನೆಲೆಯಿಲ್ಲ. ಸಿರೀಸ್‌ಗೇ ನೆಟ್ಟಗೊಂದು ಕೆಲಸ ಅಂತಿಲ್ಲ. ದರ ಪರಿಣಾಮ ಅದೆಷ್ಟು ನಿಚ್ಚಳವಾಗಿತ್ತೆಂದರೆ 2010 ಾರ್ಚ್ 15ರ ಹೊತ್ತಿಗೆ ಶ್ರೀಜಾ ಹೈದರಾಬಾದ್‌ನ ಟ್ರಲ್ ಕ್ರೈಂ ಪೊಲೀಸ್ ಠಾಣೆಯಲ್ಲಿ ತನ್ನ ಗಂಡ ಮತ್ತು ತ್ತೆಯ ವಿರುದ್ಧ ವರದಕ್ಷಿಣೆ ಕಿರುಕುಳದ ದೂರು ಖಲಿಸಿದ್ದಳು!

ಆಕೆ ನೀಡಿದ ದೂರಿನಲ್ಲೇ ವಿಷಾದ ಹೆಪ್ಪು ಗಟ್ಟಿದಂತೆ ತಿಸಿದ ಗಂಡ ಆಕೆಗೆ ನೀಡಿದ ಚಿತ್ರಹಿಂಸೆ, ಆಕೆಯ ಾನಸಿಕ ಕ್ಷೋಭೆ, ತಂದೆ ಮಗಳಿಗೆಂದು ಕೊಟ್ಟಿದ್ದ ್ತಿಯನ್ನು ಕರಗಿಸಿದ ರೀತಿ, ಅತ್ತೆ ಮಾವಂದಿರ ಕಿರುಕುಳ ಲ್ಲವೂ ವಿವರವಾಗಿ ದಾಖಲಾಗಿತ್ತು. "ಸಿರೀಸ್ ನಾಲ್ಕಾಣೆ ದುಡಿಯುವುದಕ್ಕೂ ಅಸಮರ್ಥನಾಗಿದ್ದ. ಪ್ರತಿ ಸಂಜೆ ಪಾನಮತ್ತನಾಗೇ ಮನೆಗೆ ಬರುತ್ತಿದ್ದ. ಬಂದವನು ವರದಕ್ಷಿಣೆಗಾಗಿ ಪೀಡಿಸುತ್ತಿದ್ದ. ಮದುವೆಯಾದ ಒಂದೇ ವರ್ಷಕ್ಕೆ ಹಿಂಸಿಸಲು ಆರಂಭಿಸಿದ. ಮೊದಲೇ ಮನೆಯವರ ವಿರೋಧ ಕಟ್ಟಿಕೊಂಡು ಮದುವೆಯಾಗಿದ್ದು ಮತ್ತು ಮಗಳ ಭವಿಷ್ಯದ ದೃಷ್ಟಿಯಿಂದ ಎಲ್ಲವನ್ನೂ ಸಹಿಸಿಕೊಂಡಿದ್ದೆ. ಆದರೆ ಇದನ್ನೇ ಸಿರೀಸ್ ನನ್ನ ದೌರ್ಬಲ್ಯ ಎಂದುಕೊಂಡು ನನ್ನ ಎಲ್ಲಾ ಒಡವೆಗಳನ್ನೂ ಗಿರಿವಿಗಿಕ್ಕಿದ. ತೀರ ಇತ್ತೀಚೆಗೆ ತಾನು ಹೈದರಾಬಾದ್‌ನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಬಂಡವಾಳಕ್ಕೆಂದು ಮತ್ತೆ ಒಂದೂವರೆ ಕೋಟಿ ತರುವಂತೆ ಪೀಡಿಸುತ್ತಿದ್ದಾನೆ. ಇದು ನನ್ನಲ್ಲಿ ಮತ್ತಷ್ಟು ಭೀತಿ ಹುಟ್ಟಿಸಿದ್ದರಿಂದಲೇ ನನ್ನ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಯನ್ನೂ ಮತ್ತೆ ತಂದೆತಾಯಿಗಳ ಹೆಸರಿಗೆ ವಾಪಸ್ಸು ಮಾಡಿಬಿಟ್ಟೆ...

ಇದು ಗೊತ್ತಾಗಿದ್ದೇ ಸಿರೀಸ್ ಮತ್ತಾತನ ಮನೆಯವರು ನನಗೆ ಇನ್ನಷ್ಟು ಹಿಂಸೆ ಕೊಡಲಾರಂಭಿಸಿದ್ದಾರೆ. ನನ್ನ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದಾರೆ. ಇತ್ತೀಚೆಗೆ ನನ್ನ ಕಜಿನ್ ಅಲ್ಲು ಅರ್ಜುನ್ ಮದುವೆಗೆಂದು ಬಂದಾಗಲೂ ಕನಿಷ್ಠ ಐವತ್ತು ಲಕ್ಷವನ್ನಾದರೂ ತಂದುಕೊಡು ಎಂದು ಸಿರೀಸ್ ಪೀಡಿಸುತ್ತಿದ್ದ. ಇನ್ನು ನನ್ನಿಂದ ಸಹಿಸಲು ಸಾಧ್ಯವಿಲ್ಲ ಅನ್ನಿಸಿ ನಾನು ವಾಪಸ್ಸು ಸಿರೀಸ್ ಬಳಿ ಹೋಗುವುದನ್ನೇ ನಿಲ್ಲಿಸಿಬಿಟ್ಟೆ...!"

ನೂರೈವತ್ತು ಕೋಟಿ...

ಇದು ಹೈದ್ರಾಬಾದ್ ಪೊಲೀಸರಿಗೆ 2010ರ ಮಾರ್ಚ್ 15ರಂದು ಶ್ರೀಜಾ ನೀಡಿದ ದೂರಿನ ಸಾರಾಂಶ. ಆಗ ಹೈದರಾಬಾದ್ ಪೊಲೀಸ್ ಕಮೀಷನರ್ ಆಗಿದ್ದದ್ದು ಎ.ಕೆ.ಖಾನ್. ವರದಕ್ಷಿಣೆ ನಿಷೇಧ ಕಾಯ್ದೆಯಡಿ ಸಿರೀಸ್ ಕುಟುಂಬದ ವಿರುದ್ಧ ಕೇಸೇನೋ ದಾಖಲಾಯಿತು. ಆದರೆ ಕಾಲ ಮಿಂಚಿ ಹೋಗಿತ್ತು. ಅಷ್ಟೊತ್ತಿಗಾಗಲೇ ಶ್ರೀಜಾಳ ಮಗಳಿಗೆ ಒಂದೂವರೆ ವರ್ಷ ತುಂಬಿತ್ತು. ಇದೆಲ್ಲಕ್ಕಿಂತಲೂ ಹೆಚ್ಚು ಸುದ್ದಿಯಾಗಿದ್ದು ಶ್ರೀಜಾ ಮತ್ತು ಸಿರೀಸ್ ಎಲ್ಲೆಂದರಲ್ಲಿ ಹೊತ್ತಲ್ಲದ ಹೊತ್ತಲ್ಲಿ ಕಚ್ಚಾಡುತ್ತಿದ್ದದ್ದು. ಶ್ರೀಜಾಳ ಅಣ್ಣ ರಾಮಚರಣ್ ತೇಜಾ ಅಭಿನಯದ 'ಮಗಧೀರ' ಚಿತ್ರದ ಪ್ರೀಮಿಯರ್ ಷೋ ವೇಳೆ ತನ್ನನ್ನು ಮೂಲೆಯಲ್ಲಿ ಕೂರಿಸಿದ ಕಾರಣಕ್ಕೇ ಮೀಡಿಯಾಗಳನ್ನೂ ಲೆಕ್ಕಿಸದೆ ಸಿರೀಸ್ ಜಗಳ ಕಾದಿದ್ದ

ಇದೆಲ್ಲದರ ಹೊರತಾಗ್ಯೂ ಖುದ್ದು ಚಿರಂಜೀವಿಗೇ ಅಳಿಯ ಸಿರೀಸ್‌ನ ಬಗ್ಗೆ ಅಸಹ್ಯವಿತ್ತು. ಹಾಗಿದ್ದೂ ಮಗಳಿಗೇನೂ ಕೊರತೆ ಮಾಡಿರಲಿಲ್ಲ. ತನ್ನ ಒಟ್ಟಾರೆ ಆಸ್ತಿಯಲ್ಲಿ ಮಗಳಿಗೆಂದೇ ಬರೋಬ್ಬರಿ ನೂರೈವತ್ತು ಕೋಟಿಯ ಸೊತ್ತನ್ನು ವರ್ಗಾಯಿಸಿದ್ದ. ಈ ಪೈಕಿ ಅತೀ ಬೆಲೆಬಾಳುವ ಸೊತ್ತೆಂದರೆ ಹೈದ್ರಾಬಾದ್‌ನ ನಟ್ಟ ನಡುವಿದ್ದ ಪ್ರತಿಷ್ಠಿತ ಆರ್ಕೇಡ್. ಇದರ ಹೊರತಾಗ್ಯೂ ಎರಡು ಕೆಜಿಯಷ್ಟು ಚಿನ್ನದ ಆಭರಣಗಳನ್ನು ಕಾಣಿಕೆಯಾಗಿ ನೀಡಿದ್ದ. ಹೀಗೆ ತಂದೆ ಮಗಳಿಗೆಂದು ಕೊಟ್ಟಿದ್ದ ಬಹುಪಾಲು ಒಡವೆಯನ್ನೆಲ್ಲ ಸಿರೀಸ್ ಗಿರವಿ ಗಿಟ್ಟಿದ್ದ.

ಚಿರು ಮಗಳ ವರದಕ್ಷಿಣೆ ಕಿರುಕುಳದ ದೂರು ದಾಖಲಾಗಿದ್ದೇ ಆಂಧ್ರಾದ್ಯಂತ ಅದು ಸುಂಟರಗಾಳಿಯಂತೆ ಕಲ್ಲೋಲವಾಯಿತು. ಆಗ ಆಂಧ್ರಕ್ಕೆ ಮುಖ್ಯಮಂತ್ರಿಯಾಗಿದ್ದ ಕಿರಣ್‌ಕುಮಾರ್ ರೆಡ್ಡಿಯೇ ಚಿರು ಅಣತಿಯಂತೆ ಪ್ರಕರಣವನ್ನು ನಿಭಾಯಿಸುತ್ತೇನೆಂದು ಮಾತು ಕೊಟ್ಟರು. ಸತತ ನಾಲ್ಕು ಗಂಟೆ ಕಾಲ ಶ್ರೀಜಾಳ ವಿಚಾರಣೆ ನಡೆಸಿದ ಪೊಲೀಸರಿಗೆ ಅತ್ತೆ ಸೂರ್ಯಮಂಗಳ ಮತ್ತು ಪತಿ ಸಿರೀಸ್ ಸೇರಿಕೊಂಡು ಥಳಿಸಿದ ಬಗ್ಗೆ ಯಾವುದೇ ಅನುಮಾನಗಳಿರಲಿಲ್ಲ. ಸಿರೀಸ್ ಮತ್ತು ಆತನ ತಾಯಿ ವಿರುದ್ಧ ವರದಕ್ಷಿಣೆ ಹಿಂಸೆಯ ಕೇಸೇನೋ ದಾಖಲಾಯಿತು. ಆದರೆ ಇದಕ್ಕೂ ಮುನ್ನ ಓರ್ವ ತಂದೆಯಾಗಿ ಕಂಗೆಟ್ಟ ಮಗಳಲ್ಲಿ ಚಿರು ತುಂಬಿದ ಆತ್ಮವಿಶ್ವಾಸ ಮತ್ತು ಭರವಸೆಯಿತ್ತಲ್ಲ, ಅದೇ ಮಗಳ ಮನ ಕಲಕಿತ್ತು.

ಕಲ್ಯಾಣ್...!

ತನ್ನಿಚ್ಛೆಗೆ ವಿರುದ್ಧ ಮದುವೆಯಾದಾಗಲೂ ತನ್ನ ವಿರುದ್ಧವೇ ದೂರು ನೀಡಿದಾಗಲೂ ಚಿರು ತಾಳ್ಮೆ ಕಳೆದುಕೊಳ್ಳಲಿಲ್ಲ. ನೂರೈವತ್ತು ಕೋಟಿಯಷ್ಟು ಆಸ್ತಿ ಕೊಟ್ಟರು. ಮಗಳ ಮೇಲೆ ಸಿಟ್ಟಿದ್ದರೂ ತಾನೇ ನುಂಗಿ ಪ್ರೀತಿಗೇನೂ ಕೊರತೆ ಮಾಡಲಿಲ್ಲ. ಹಾಗಂತ ಅಯೋಗ್ಯ ಅಳಿಯನತ್ತ ಕಣ್ಣೆತ್ತಿಯೂ ನೋಡಲಿಲ್ಲ. ಆತನನ್ನು ಬೇಕಂತಲೇ ದೂರವಿಟ್ಟರು. ಶುರುವಿನಲ್ಲಿ ಕುಟುಂಬದ ಯಾವುದೇ ಕಾರ್ಯಕ್ರಮದಲ್ಲೂ ಕಾಣಿಸದಿದ್ದ ಮಗಳು ಪತಿಯ ಹಿಂಸೆ ಅತಿಯಾಗಿದ್ದೇ ತಂದೆಯ ಪ್ರೀತಿಗೆ ಮನಸೋತಳು. ತಂದೆ ತನಗಾಗಿ ಮರುಗಿದ ರೀತಿ, ಅಪನಿಂದೆ ಎದುರಿಸಿದ ರೀತಿ, ಅದೆಲ್ಲವನ್ನೂ ನುಂಗಿ ತನ್ನನ್ನು ಪ್ರೀತಿಸಿದ ರೀತಿ ಆಕೆಯಲ್ಲಿ ಪಶ್ಚಾತ್ತಾಪದ ಅಲೆಗಳನ್ನೆಬ್ಬಿಸಿತ್ತು. 2011ರ ಹೊತ್ತಿಗೆ ಸಿರೀಸ್‌ನನ್ನು ತನ್ನ ಮನಸ್ಸಿನಿಂದಲೇ ಕಿತ್ತುಬಿಟ್ಟಳು. ಅಷ್ಟೇ ಆತುರಕ್ಕೆ ಬಿದ್ದು ವಿಚ್ಛೇದನವನ್ನೂ ಪಡಕೊಂಡಳು.

ಅಲ್ಲಿಗೆ ಒಂದು ಅಧ್ಯಾಯವಂತೂ ಮುಗಿದಿತ್ತಾದರೂ ಮಗಳ ಭವಿಷ್ಯ ಮತ್ತು ಆಕೆಯ ಬದುಕಿನ ಪ್ರಶ್ನೆಗಳೆಲ್ಲ ಹಾಗೆಯೇ ಉಳಿದುಬಿಟ್ಟವು. ತನ್ನ ಪಾಲಿನ ಅಸಲೀ ಹೀರೋ ತಂದೆ ತನಗಾಗಿ ಏನಾದರೂ ಮಾಡಿಯೇ ತೀರುತ್ತಾರೆಂಬ ಆಕೆಯ ನಿರೀಕ್ಷೆಗೆ ಹೆಚ್ಚು ದಿನ ಹಿಡಿಯಲಿಲ್ಲ. ಚಿರು ಪತ್ನಿ ಸುರೇಖಾ 2015ರ ಹೊತ್ತಿಗೆ ಬೇರೆಯದೇ ಪರ್ಯಾಯವೊಂದಕ್ಕೆ ಕೈಹಾಕಿದ್ದು ದಿನೇದಿನೇ ಫಲ ನೀಡುತ್ತಿತ್ತು. ಆತನೇ ಪ್ರತಿಷ್ಠಿತ ಕಲ್ಯಾಣ್ ಜ್ಯುವೆಲ್ಲರ್ಸ್ ಕಂಪೆನಿಯ ಧಣಿ ಕಲ್ಯಾಣ್. ಅಮೆರಿಕದಲ್ಲಿ ಕಮ್ಮಿಯೆಂದರೂ ಹದಿನೈದು ಚಿನ್ನಾಭರಣ ಮಳಿಗೆಗಳ ದಕ್ಷಿಣ ಭಾರತದ ಪ್ರಖ್ಯಾತ ಕಲ್ಯಾಣ್ ಜ್ಯುವೆಲ್ಲರಿ ಗ್ರೂಪ್‌ನ ಏಕೈಕ ವಾರಸುದಾರ ಮತ್ತು ಕೋಟ್ಯಾಧಿಪತಿ. ವಯಸ್ಸಿನ್ನೂ 32. ಅಂದರೆ ಶ್ರೀಜಾಳಿಗಿಂತಲೂ ಕೇವಲ ಎರಡು ವರ್ಷ ಹಿರಿಯ. ಹೆಚ್ಚೂ ಕಮ್ಮಿ ಸಿರೀಸ್‌ನಷ್ಟೇ ವಯಸ್ಸಿನ ಸಿರೀಸ್‌ಗಿಂತಲೂ ಹತ್ತು ಪಟ್ಟು ಸ್ಫುರದ್ರೂಪಿಯಾದ ಕಲ್ಯಾಣ್ ಶ್ರೀಜಾಳ ಪಾಲಿಗೆ ಹೊಸ ವರನಾಗಿ ನಿಂತಿದ್ದ!

ಯಾರನ್ನು ತಂದೆ ವಿರುದ್ಧ ತಿರುಗಿಬಿದ್ದ ತನ್ನವನೆಂದು ಶ್ರೀಜಾ ಭಾವಿಸಿದ್ದಳೋ ಅದು ತಾನೆಸಗಿದ ಮಹಾ ತಪ್ಪೆಂದು ಅರ್ಥವಾಗಲು ಹೆಚ್ಚು ಸಮಯ ಹಿಡಿಯಲಿಲ್ಲವೋ ಅದೇರೀತಿ ತನ್ನ ತಂದೆ ತನ್ನನ್ನೆಷ್ಟು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದಾನೆಂದು ಅರ್ಥವಾಗುವುದಕ್ಕೂ ಹೆಚ್ಚು ಹೊತ್ತು ಹಿಡಿಯಲಿಲ್ಲ. ನೋಡಲು ನರಪೇತಲ ನಾರಾಯಣನಂತಿದ್ದ ಸಿರೀಸ್‌ನೆಲ್ಲಿ ಈಗ ತಂದೆ ತನಗೆಂದು ಹುಡುಕಿ ತಂದ ಕಲ್ಯಾಣ್‌ನ ಸೌಂದರ್ಯವೆಲ್ಲಿ ಸಂಪತ್ತೆಲ್ಲಿ?


ನೋಡಿದ ಮೊದಲ ನೋಟಕ್ಕೆ ಶ್ರೀಜಾ ಮರುಮದುವೆಗೆ ಸಮ್ಮತಿಸಿಬಿಟ್ಟಳು. ಕಲ್ಯಾಣ್ ಎಲ್ಲಾ ಕತೆ ಕೇಳಿಕೊಂಡೇ ಆಕೆಯ ಸಮ್ಮತಿಗಾಗಿ ಕಾದು ನಿಂತಿದ್ದ. 2015ರ ಜೂನ್‌ನಲ್ಲೇ ಚಿಕ್ಕಪ್ಪ ಪವನ್ ಕಲ್ಯಾಣ್‌ನ ಮನೆಯಲ್ಲಿ ಶ್ರೀಜಾ-ಕಲ್ಯಾಣ್‌ರ ನಿಶ್ಚಿತಾರ್ಥವಾಯಿತು. ಈಗದು ಮಾಂಗಲ್ಯಂ ತಂತು ನಾನೇನ...

ಒಬ್ಬ ಪ್ರಾಮಾಣಿಕ ತಂದೆ, ಛಲವಂತ ತಂದೆ, ಧೃತಿಗೆಡದ ತಂದೆ, ಮಗಳು ಮಾಡಿದ ಎಲ್ಲಾ ಅವಮಾನವನ್ನೂ ನುಂಗಿಕೊಂಡ ತಂದೆ, ಮಗಳು ಬಗೆದ ದ್ರೋಹವನ್ನೇ ಸವಾಲಾಗಿ ಸ್ವೀಕರಿಸಿದ ತಂದೆ, ಕಣ್ಣೀರು ಸುರಿಸಿಯೂ ನೋವು ನುಂಗಿಯೂ ನಗುನಗುತ್ತಲೇ ಮುರಿದ ಮಗಳ ಬದುಕನ್ನು ಮತ್ತೆ ಕಟ್ಟಿದ ತಂದೆ.... ಮೆಗಾಸ್ಟಾರ್ ಚಿರು ಸುಲಭಕ್ಕೆ ಸೋಲೊಪ್ಪದ ತಂದೆ, ಅಸಾಮಾನ್ಯ ತಂದೆ!

● ರಾ. ಸೋಮನಾಥ್











ಗಾನ ಗಂಧರ್ವನ ಜೊತೆ




ಕಳೆದ ಶತಮಾನದಲ್ಲಿ ಕನ್ನಡ ರಂಗಭೂಮಿಯನ್ನು ಬೆಳಗಿದ ರಂಗಗೀತೆಗಳೆಲ್ಲಾ ಮರೆಯಾಗುತ್ತಿದ್ದ ಸಂದರ್ಭದಲ್ಲಿ ಎಚ್ಚೆತ್ತುಕೊಂಡ ಪ್ರೊ. ಎ.ವಿ. ಸೂರ್ಯನಾರಾಯಣಸ್ವಾಮಿ, ಗೋವಿಂದೇಗೌಡರು ಮತ್ತು ಪರಮಶಿವನ್ ಎಂಬ ತ್ರಿಮೂರ್ತಿಗಳು ಸೇರಿಕೊಂಡು ಮುಂದಿನ ತಲೆಮಾರಿಗಾಗಿ ರಂಗಗೀತೆಗಳನ್ನು ರಕ್ಷಿಸಿಕೊಟ್ಟಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆ ಮಾಡಬಹುದಾದ ಈ ಮಹಾಕಾರ್ಯಕ್ಕೆ ಅವರು ಪಟ್ಟಿರುವ ಶ್ರಮ ಗಮನಿಸಿದರೆ ಅಚ್ಚರಿಯಾಗುತ್ತದೆ.

> ಕನ್ನಡ ರಂಗಭೂಮಿಯನ್ನು ದಶಕಗಳ ಕಾಲ ಬೆಳಗಿದ ರಂಗಗೀತೆಗಳೆಲ್ಲಾ ಮರೆಯಾಗುತ್ತಿರುವ ಈ ಕಾಲದಲ್ಲಿ ಅವನ್ನೆಲ್ಲಾ ರಕ್ಷಿಸಿ, ಹಾಡಿಸಿ, ಮುದ್ರಿಸಿದ ಕೀರ್ತಿ ಗೋವಿಂದೇಗೌಡರು, ಎಂ.ವಿ. ಸೂರ್ಯನಾರಾಯಣ ಸ್ವಾಮಿ ಮತ್ತು ಪರಮಶಿವನ್‌ಗೆ ಸಲ್ಲಬೇಕು. ರಂಗಗೀತೆಗಳು ಮತ್ತು ಗೆಜ್ಜೆನಾದ ಸಂಪುಟಗಳು ಮುಂದಿನ ತಲೆಮಾರಿಗಾಗಿ ಸಂಗ್ರಹಿಸಿದ ನಿಧಿ. ಈ ನಿಧಿ ಶೋಧನೆ ಮಾಡಿದ ಎಂ.ವಿ. ಸೂರ್ಯನಾರಾಯಣಸ್ವಾಮಿ ಇವುಗಳನ್ನು ಹಾಡಿದ ಪರಮಶಿವನ್ ಮತ್ತು ತಮ್ಮ ದುಡಿಮೆಯಲ್ಲಿ ಆರು ಲಕ್ಷ ರೂ.ಗಳನ್ನು ಸುರಿದ ಗೋವಿಂದೇಗೌಡರನ್ನು ಕರೆದು ಶಿವಮೊಗ್ಗದ ರಂಗಗೀತೆ ಕಲಾವಿದೆ ನಾಗರತ್ನ ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಅಭಿನಂದಿಸಿದ್ದು ಸಾರ್ಥಕತೆಯಿಂದ ಕೂಡಿತ್ತು.

ಮೊದಲು ಇವರು ಮಾಡಿದ ಕೆಲಸವೆಂದರೆ ಕನ್ನಡ ರಂಗಭೂಮಿಯ ಗೀತೆಗಳನ್ನು ಆಗಿನ ಕೆಲವು ಕಲಾವಿದರಿಂದಲೇ ಹಾಡಿಸಿ ಕ್ಯಾಸೆಟ್ ಮಾಡಿದ್ದು ಮತ್ತು ಅದೇ ಗೀತೆಗಳನ್ನೊಳಗೊಂಡ ರಂಗಗೀತೆ ಸಂಪುಟ ಹೊರತಂದದ್ದು. ಅಷ್ಟರಲ್ಲಿ ಸಿಡಿ ಬಂದಿದ್ದರಿಂದ ಎಲ್ಲಾ ಗೀತೆಗಳನ್ನು ಸಿಡಿ ಮಾಡಿಸಿದರು. ಎ.ವಿ. ಸೂರ್ಯನಾರಾಯಣಸ್ವಾಮಿ ಗೀತೆ ಸಂಗ್ರಹಿಸಿದರೆ, ಪರಮಶಿವನ್ ಹಾಡಿದರು, ಗೋವಿಂದೇಗೌಡರು ಧನ ಸಹಾಯ ಮಾಡಿದರು. ನಂತರ ಎ.ವಿ.ಎಸ್ ಮತ್ತು ಗೋವಿಂದೇಗೌಡರ ಸಂಪಾದಕತ್ವದಲ್ಲಿ ಕನ್ನಡ ಕಾವ್ಯಗಳ ಗೆಜ್ಜೆನಾದ ಸಂಪುಟ ಹೊರಬಂದಿತು. ಈ ಸಂಪುಟ ನಿಜಕ್ಕೂ ವಿಸ್ಮಯಕರವಾಗಿದೆ. ಏಕೆಂದರೆ ಕ್ರಿ.ಶ. ಐದನೆಯ ಶತಮಾನದಿಂದ ಇಪ್ಪತ್ತನೆ ಶತಮಾನ ದಾಟಿ ಹರಿಯುತ್ತಿರುವ ಕನ್ನಡ ಕಾವ್ಯ ವಾಹಿನಿಯನ್ನು ದಾಖಲಿಸುವ ಸಂಪುಟ ಇದಾಗಿದೆ. ಇಲ್ಲಿ ಕನ್ನಡ ಕಾವ್ಯ ಮೀಮಾಂಸಕರಿಂದ ಹಿಡಿದು ಆಧುನಿಕ ಚಿತ್ರಗೀತೆಗಳವರೆಗೂ ಸಂಗ್ರಹಗೊಂಡಿರುವ ಹೂರಣದ ಪರಿ ನೋಡಿದರೆ ಕನ್ನಡದ ಎಲ್ಲ ಮನಸುಗಳನ್ನು ಒಳಗೊಂಡ ಕಾವ್ಯ ಸಂಪುಟದಂತಿದೆ. ಅದಾಗಲೇ ಎರಡನೆಯ ಸಂಪುಟವೂ ಬಂದಿದೆ. ಕನ್ನಡದ ಹಳೆ ಚಿತ್ರಗೀತೆಗಳು ಬೇಕೆನ್ನುವವರಿಗೆ ಮೊದಲ ಸಂಪುಟ ಸಂಗ್ರಹಯೋಗ್ಯವಾಗಿದೆ.



ಗೋವಿಂದೇಗೌಡರು



ಈಚೆಗೆ ಪರಮಶಿವನ್ ಗಾಯನದಲ್ಲಿ ರಂಗಪಂಚಾಮೃತ ಗೀತೆಗಳ ಸಿಡಿ ಬಿಡುಗಡೆಯಾಗಿದೆ. ಇದಕ್ಕಿಂತಲೂ ಮೊದಲು ಜನಪ್ರಿಯ ರಂಗಗೀತೆಗಳ ಸಿಡಿ ಹೊರತಂದರು. ಈ ಸಿಡಿಯಲ್ಲಿ ರಂಗಭೂಮಿಯ ದಿಗ್ಗಜರಾಗಿದ್ದ ಸುಮಾರು 20 ಜನ ಗಾಯಕರು ಹಾಡಿದ್ದಾರೆ. ಈ ಪೈಕಿ ಮುಸುರಿ ಕೃಷ್ಣಮೂರ್ತಿಯವರು ಹಾಡಿರುವ ಆಂಜನೇಯನ ರಾಗಮಾಲಿಕೆ ಹಾಡು ಎಷ್ಟು ಅದ್ಭುತವಾಗಿದೆ ಎಂದರೆ ಇನ್ಯಾರೂ ಹಾಡಲು ಸಾಧ್ಯವಿಲ್ಲ ಎಂಬಷ್ಟರ ಮಟ್ಟಿಗಿದೆ.

ಇನ್ನು ಡಾ. ರಹಮತ್ ತರೀಕೆರೆಯವರು ಸಂಶೋಧಿಸಿದ ಗಾಯಕಿ ಅಮೀರ್‌ಬಾಯಿ ಕರ್ನಾಟಕಿಯವರ ಒಂದು ಹಾಡು ಈ ಸಂಗ್ರಹದಲ್ಲಿದೆ. ಆಕೆಯ ಧ್ವನಿ ಪರಿಚಯವಿಲ್ಲದವರು ಈ ಹಾಡನ್ನು ಕೇಳಬಹುದು. ವಿಚಿತ್ರವಾಗಿ ನಮ್ಮನ್ನು ಹಿಂಬಾಲಿಸುವ ಹಾಡಿದು.

ಸುಮಾರು 96 ಹಾಡುಗಳನ್ನೊಳಗೊಂಡ 2 ಸಿಡಿ ಕವರ್ ಬಾಕ್ಸಿನ ಮೇಲೆ ವರದಾಚಾರ್ಯರು ಮಾಡಿದ ದುಷ್ಯಂತನ ಪಾತ್ರದ ಚಿತ್ರವಿದೆ. ಅಂದಿನ ಮೈಸೂರು ಮಹಾರಾಜರ ಪರಿವಾರ ಈ ನಾಟಕ ನೋಡಲು ಬಂದಾಗ ಮಹಾರಾಜರೇ ಸ್ಟೇಜಿಗೆ ಬಂದಂತೆ ಗೊಂದಲ ಮೂಡಿಸಿ, ಕಣೆಗಣ್ಣೇ ಹುಟ್ಟಿಸಿದ ಭಾವಚಿತ್ರವಿದು. ರಂಗಭೂಮಿಯ ವೈಭವವನ್ನೇ ನೆನಪಿಸುವಂತಹ ಚಿತ್ರ.


ಈ ಸಿಡಿಯಲ್ಲಿನ ಗೀತೆ ಕೇಳುವಾಗ ಯಾಕೆ ನಮ್ಮ ಜನ ರಾತ್ರಿಯೆಲ್ಲಾ ನೆಲದ ಮೇಲೆ ಕುಳಿತು ನಾಟಕ ನೋಡುತ್ತಿದ್ದರು ಎಂಬುದು ಅರಿವಿಗೆ ಬರುತ್ತದೆ. ಸಾಮಾನ್ಯವಾಗಿ ರಾಮಾಯಣ, ಮಹಾಭಾರತದ ಕತೆಗಳು ಎಲ್ಲರಿಗೂ ಗೊತ್ತಿರುವಂತಹವು. ಆದರೆ ಕಂಪನಿ ನಾಟಕಗಳ ಕಲಾವಿದರ ಅಭಿನಯ ಮತ್ತು ಹಾಡುಗಾರಿಕೆಗಾಗಿ ಜನ ಮುಗಿಬೀಳುತ್ತಿದ್ದ ಕಾಲ. ಈಗ ಅಂದಿನ ಪಳೆಯುಳಿಕೆಯಂತೆ ಪರಮಶಿವನ್ ಕಾಣುತ್ತಾರೆ.

ಸಾಮಾನ್ಯವಾಗಿ ವಯಸ್ಸಾದಂತೆ ಧ್ವನಿಗೂ ವಯಸ್ಸಾಗುತ್ತದೆ. ಆದರೆ ಈ ಪರಮಶಿವನ್‌ರವರ ಧ್ವನಿ ವಯಸ್ಸಾದಂತೆ ಕಂಚಿನ ದನಿಯಾಗುತ್ತಿದೆ. ಈ 85ನೇ ವಯಸ್ಸಿನಲ್ಲಿ ಅವರು ಹಾಡುತ್ತಿದ್ದರೆ ಧ್ವನಿಯಲ್ಲಿನ ಬಳುಕು ಮತ್ತು ಝುಲಕ್ ವಿಸ್ಮಯವೆನ್ನಿಸುತ್ತದೆ.

ಕಳೆದ ಸೋಮವಾರ ಅವರನ್ನು ಶಿವಮೊಗ್ಗದ ರಂಗಗೀತೆ ಕಲಾವಿದೆ ನಾಗರತ್ನ ಅವರು ಕರೆಸಿದ್ದರು. ಆರೇಳು ವರ್ಷದ ಹಿಂದೆ ನಾನು ಅವರನ್ನು ಕರೆಸಿದ್ದೆ. ಕೇವಲ ಒಂದು ಪತ್ರಿಕಾ ಪ್ರಕಟಣೆಗೆ ಜನ ಹರಿದುಬಂದಿದ್ದರು. ಈಗಲೂ ಸಾಕಷ್ಟು ಜನ ಸೇರಿದ್ದರು. ಆ ದಿನ ಬೆಳಗ್ಗೆ ಸರ್ಕಿಟ್ ಹೌಸಿನ ಪಾರ್ಕಿನ ಕಲ್ಲುಬೆಂಚಿನ ಮೇಲೆ ತನ್ನ ಪತ್ನಿಯೊಂದಿಗೆ ಎಳೆಬಿಸಿಲು ಸವಿಯುತ್ತಿದ್ದ ಪರಮಶಿವನ್‌ರನ್ನು ಮಾತನಾಡಿಸಿದೆ. ಅವರು ಸುಮ್ಮನೆ ಮಾತನಾಡುತ್ತ ಹೋದರು...

"ನಮ್ಮ ಪೂರ್ವಿಕರು ತಮಿಳುನಾಡಿನವರು. ಮೈಸೂರಿಗೆ ಬಂದು ನೆಲೆಸಿದೆವು; ನಾನು ನಾಲ್ಕು ವರ್ಷದವನಾಗಿದ್ದಾಗಿನಿಂದಲೂ ಸಂಗೀತಾಭ್ಯಾಸದಲ್ಲಿ ತೊಡಗಿದ್ದೇನೆ. ನನಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗಲೆ ಮದ್ರಾಸಿನ ಆಕಾಶವಾಣಿಯಲ್ಲಿ ಹಾಡಲು ಕರೆಬಂದು ಹೋಗಿ ಒಂದು ಗಂಟೆ ಶಾಸ್ತ್ರಿಯ ಸಂಗೀತ ಹಾಡಿದೆ. ಆದ್ದರಿಂದ ಮದ್ರಾಸಿನ ಆಕಾಶವಾಣಿಗೆ ನಾನು ಋಣಿ. ಅಂದಿನಿಂದ ನನ್ನ ಹಾಡುಗಾರಿಕೆ ನಿರಂತರವಾಗಿ ನಡೆಯಿತು.

ನಾವೆಲ್ಲಾ ನಾಟಕ ಕಂಪನಿಯಲ್ಲಿದ್ದಾಗ ರಾಜ್‌ಕುಮಾರ್ ಕೂಡ ಸೊಗಸಾಗಿ ಹಾಡುತ್ತಿದ್ದರು. ಅವರ ತಂದೆಯವರು ಒಳ್ಳೆ ಹಾರ್ಮೋನಿಯಂ ಕಲಾವಿದರಾದ್ದರಿಂದ ಮಗನನ್ನು ತಯಾರು ಮಾಡಿದ್ದರು. ರಾಜ್‌ಕುಮಾರ್ ಸಿನಿಮಾಕ್ಕೆ ಆಯ್ಕೆಯಾದಾಗ ಅವರಿಂದಲೇ ಹಾಡಿಸಬಹುದಿತ್ತು ಆದರೆ 'ಆತ ಕಿರಿಚುತ್ತಾನೆ' ಅಂತ ಮೂದಲಿಸಿ ಬೇರೆ ಕಲಾವಿದರಿಂದ ಹಾಡಿಸಿದರು. ರಾಜ್‌ಕುಮಾರ್ ಕೂಡ ತಾವು ಹಾಡುವ ಅಪೇಕ್ಷೆ ಬದಿಗಿಟ್ಟು ಇತರ ಕಲಾವಿದರಿಗೆ ಅವಕಾಶ ಕೊಟ್ಟ ವಿನಯವಂತರು: ಅವರ ತಂದೆಗೆ ಗುಬ್ಬಿ ಕಂಪನಿಯಲ್ಲಿ ಒಳ್ಳೆ ದೈತ್ಯ ಪಾತ್ರ ಸಿಕ್ಕಿದವು. ಅವರ ಮಗ ರಾಜ್‌ಕುಮಾರ್‌ಗೆ ಗುಬ್ಬಿ ಕಂಪನಿ ಒಳ್ಳೆ ಪಾತ್ರಗಳನ್ನೇ ಕೊಡಲಿಲ್ಲ. ಆದರೆ ಸುಬ್ಬಯ್ಯ ನಾಯ್ಡು ಕಂಪನಿಯಲ್ಲಿ ಸ್ವತಃ ಸುಬ್ಬಯ್ಯನವರೆ ತಮ್ಮ ಎದುರು ಸ್ಪರ್ಧೆಯಂತ ಪಾತ್ರ ಕೊಟ್ಟರು. ಉದಾಹರಣೆಗೆ ಸುಬ್ಬಯ್ಯನಾಯ್ಡು ಅಂಬರೀಶ್ ಪಾತ್ರ ಮಾಡಿದರೆ ರಾಜ್‌ಕುಮಾರ್ ರಮಾಕಾಂತ, ಬಸವೇಶ್ವರದಲ್ಲಿ ಹರಳಯ್ಯ, ರಾಮಾಯಣದಲ್ಲಿ ಆಂಜನೇಯ, ಭೂಕೈಲಾಸದಲ್ಲಿ ನಾರದ... ಹೀಗೆ ರಾಜ್ ಪ್ರತಿಭೆ ಬೆಳಗಲು ಅವಕಾಶ ಸಿಕ್ಕಿದ್ದು ಸುಬ್ಬಯ್ಯ ನಾಯ್ಡು ಕಂಪನಿಯಲ್ಲಿ. ಆದರೆ ಆವಾಗ ತುಂಬ ಹೆಸರು ಮಾಡಿದ ಕಂಪನಿ ಎಂದರೆ ಗುಬ್ಬಿ ಕಂಪನಿ. ಆದ್ದರಿಂದ ರಾಜಕುಮಾರ್ ಚಿತ್ರರಂಗ ಪ್ರವೇಶಕ್ಕೆ ಗುಬ್ಬಿ ಕಂಪನಿ ಕಾರಣ ಎಂಬ ಸುದ್ದಿ ಹೆಚ್ಚು ಪ್ರಚಾರ ಪಡೆದುಕೊಂಡಿತು.



ಎಲ್ಲಾ ಕಂಪನಿಗಿಂತಲೂ ಸುಬ್ಬಯ್ಯ ನಾಯ್ಡು ಕಂಪನಿ ತುಂಬಾ ಶಿಸ್ತಿನಿಂದ ಕೂಡಿತ್ತು, ಪ್ರತಿದಿನ ತಾಲೀಮು ನಡೆಸುತ್ತಿತ್ತು, 11 ರಿಂದ ಒಂದು ಗಂಟೆವರೆಗೆ ಎಲ್ಲ ಪಾತ್ರಧಾರಿಗಳೂ ಭಾಗವಹಿಸಬೇಕಿತ್ತು, ಗೈರುಹಾಜರಾದರೆ ಸಂಬಳ ಹಿಡಿಯುತ್ತಿದ್ದರು. ಆಗ ಗೈರುಹಾಜರಾದ ರಾಜ್‌ಕುಮಾರ್‌ಗೆ 30 ರೂಪಾಯಿ ಹಿಡಿದರು. 'ಕೊಡೋದೆ 80 ರೂಪಾಯಿ. ಅದರಲ್ಲಿ 30 ರೂಪಾಯಿ ಹಿಡಿಕೊಂಡ್ರೆ ಹ್ಯಂಗೆ ಸ್ವಾಮಿ' ಎಂದು ರಾಜ್‌ಕುಮಾರ್ ಕೇಳಿದ್ಕೆ 'ಕಲಾವಿದರಲ್ಲಿ ಶಿಸ್ತು ಮೂಡೋದಿಕ್ಕೆ ಬೇರೆ ಪನಿಷ್‌ಮೆಂಟೇ ಇಲ್ಲ' ಎಂಬ ಉತ್ತರ ಬಂತು.

ನನಗಾಗ ರಾಜ್‌ಗಿಂತಲೂ ಜಾಸ್ತಿ ಸಂಬಳ. ಅಂದರೆ ನೂರ ಇಪ್ಪತ್ತು ರೂಪಾಯಿ. ಐದೂವರೆ ವರ್ಷದಲ್ಲಿ ಒಂದೇ ಒಂದು ಪೈಸೆ ಕಟ್ ಮಾಡದಂತೆ ನಾನು ತಾಲೀಮಿಗೆ ಹಾಜರಾಗಿದ್ದೆ. ಆಗಿನ ಎಲ್ಲಾ ಕಂಪನಿಯಲ್ಲೂ ನಾನು ಹಾಡಿದ್ದೇನೆ. ಪಾತ್ರ ಮಾಡುವುದಕ್ಕಿಂತಲೂ ನನಗೆ ಹಾಡುಗಾರಿಕೆ ತುಂಬಾ ಇಷ್ಟ. ಈ ಹಾರ್ಮೋನಿಯಂ ಇದೆಯಲ್ಲಾ, ಇದಕ್ಕಿರುವ ವಶೀಕರಣದ ಶಕ್ತಿಯೇ ವಿಶೇಷವಾದದ್ದು.

ದಾವಣಗೆರೇಲಿ ಗುಂಡೇರ ಅಂತ ಹಾರ್ಮೋನಿಯಂ ತಯಾರು ಮಾಡತಿದ್ರು. ಎಷ್ಟು ಚೆನ್ನಾಗಿ ಮಾಡತಿದ್ರು ಅಂದ್ರೆ, ರಾತ್ರಿಯೆಲ್ಲಾ ಒಂದೇ ಕಾಲಿನಲ್ಲಿ ಒತ್ತಿದ್ರೂ ಸಾಕು ಏರ್‌ಸಪ್ಲೈ ಮಾಡೋದು. ರಾತ್ರಿ 10 ಗಂಟೆಗೆ ಶುರುವಾದ ಹಾರ್ಮೋನಿಯಂ ಬೆಳಗ್ಗೆ 6 ಗಂಟೆಗೆ ನಿಲ್ಲುತ್ತಿತ್ತು, ಆದ್ರು ನಮಗೆ ಆಯಾಸವಾಗುತ್ತಿರಲಿಲ್ಲ, ಆಗ ಸರಿಯಾಗಿ ಆರು ತಿಂಗಳು ದಾವಣಗೆರೆ ಕ್ಯಾಂಪ್ ಇರುತಿತ್ತು, ಗುಂಡೇರ ಅವರಿಗೆ ಹೇಳಿ ನಾವೆಲ್ಲಾ ಒಂದೊಂದು ಹಾರ್ಮೋನಿಯಂ ತಯಾರಿ ಮಾಡಿಕೊಂಡು ಬರತಿದ್ವಿ. ರಾಜ್‌ಕುಮಾರ್, ಹಿರಣ್ಣಯ್ಯ ಯೋಗ ನರಸಿಂಹ ಇವರ ಬಳಿಯೆಲ್ಲಾ ದಾವಣಗೆರೆ ಹಾರ್ಮೋನಿಯಂ ಇವೆ. ಇವತ್ತಿನ ಹಾರ್ಮೋನಿಯಂ ಒಂದೂ ಸರಿಯಿಲ್ಲ, ಗುಯ್ ಅಂತವೆ. ಕೀಬೋರ್ಡ್ ಅಂತ ಬಂದಿವೆ, ಅದು ಸಂಗೀತದ ನಾದವನ್ನೇ ತೆಗೆದಿದೆ. ಇನ್ನ ಅವರು ಬಳಸೊ ದೈತ್ಯಾಕಾರದ ಸೌಂಡ್ ಬಾಕ್ಸಿಂದ ನಮ್ಮ ಕಿವಿಗಳೇ ಹಾಳಾಗ್ತಿವೆ.

ನನ್ನ ಬಳಿ 1967 ರಲ್ಲಿ ಮಾಡಿದ ಹಾರ್ಮೋನಿಯಂ ಇದೆ. ಇವತ್ತಿಗೂ ಚೆನ್ನಾಗಿದೆ. ಅವತ್ತಿನ ರಂಗಗೀತೆಗಳಿಗೆ ಸಂಗೀತ ಹಿನ್ನೆಲೆಯಾಗಿದ್ದು ಹಾಡುಗಾರಿಕೆನೆ ಮುಂದೆ ಇರತಿತ್ತು. ಹಿಂದಿನ ನಾಲ್ಕಾಣೆ ಸೀಟಿಗೆ ಕೇಳುವಂತೆ ಹಾಡಿ ಮಾತನಾಡಬೇಕಿತ್ತು, ನೆಲ ನಾಲ್ಕಾಣೆ, ಚಾಪೆ ಎಂಟಾಣೆ, ಬೆಂಚು ಹನ್ನೆರಡಾಣೆ... ಹಿಂಗಿತ್ತು ಆ ಕಾಲ. ಹೊರಗಿನ ಬದುಕಿನ ಬೆಲೆಗಳೂ ಹಾಗೇ ಇದ್ವು, ಒಂದು ರೂಪಾಯಿಗೆ 16 ಸೇರು ಕೊಯಮತ್ತೂರು ಸಣ್ಣಕ್ಕಿ ಸಿಗದು. ಮಸಾಲೆ ದೋಸೆ ಆರು ಕಾಸು. ಜಿಲೇಬಿ ಜಾಮೂನು ಆರು ಕಾಸಿಗೆ ಸಿಗತಿತ್ತು, ಇನ್ನ ಮನೆ ಕಟ್ಟಬೇಕಾದ್ರೆ 6 ರೂಪಾಯಿಗೆ ಮೂಟೆ ಸಿಮೆಂಟು. 10 ಪೈಸೆ ಕೊಟ್ರೆ ಮನೆಬಾಗಿಲಿಗೆ ತಂದು ಹಾಕತಿದ್ರು. ಆಗಿನ ಕಾಲಕ್ಕೆ ನಾನು 950 ರೂಪಾಯಿಗೆ ಒಂದು ಒಳ್ಳೆ ಸೈಟು ತಗೊಂಡು ಮನೆ ಕಟ್ಟಿದೆ.

ನಾನು, ಮುಸುರಿ ಕೃಷ್ಣಮೂರ್ತಿ, ಮಾಸ್ಟರ್ ಹಿರಣ್ಣಯ್ಯ ಭಾರಿ ಕುಡಿತಿದ್ವೊ. ನಾನು ಆಗ್ಲೆ ಬಿಟ್ಟೆ. ಅದ್ಕೆ ಮನೆ ಕಟ್ಟಿದ್ದು. ಆಗ ಎಲ್ಲಾ ಸುಖನೂ ಸಿಗತಿತ್ತು, ಆದ್ರು ನಾವು ಕಷ್ಟ ಪಡಬೇಕಿತ್ತು, ಅದರಲ್ಲೇ ಒಂದು ಸುಖ ಇರದು. ಈಗ ಎಲ್ಲಾ ಸವಲತ್ತು ಇದೆ. ಮೈಗಳ್ಳತನಕ್ಕೆ ಏನೇನು ಬೇಕೊ ಅದೆಲ್ಲಾ ಇದೆ. ಆದರೆ ಬದುಕಿನ ನಿಜವಾದ ಖುಷಿ ಹೊರಟೋಗಿದೆ. ಸಂಗೀತದಲ್ಲಿ ನಾದ ಹೊರಟೋಗಿದೆ. ಊಟದಲ್ಲಿ ಸ್ವಾದ ಹೊರಟೋಗಿದೆ.

ನಮ್ಮ ಕಾಲದಲ್ಲಿ ನಮ್ಮ ನಮ್ಮ ವೃತ್ತೀಲಿ ತುಂಬ ಖುಷಿಯಾಗಿದ್ವೊ. ಒಂದು ಕಂಪನಿ ಬಿಟ್ರೆ ಇನ್ನೊಂದು ಕಂಪನೀಲಿ ಕರಿತಿದ್ರು. ಆಗಿನ ಎಲ್ಲಾ ಕಂಪನೀಲೂ ನಾನು ಕೆಲಸ ಮಾಡಿದೆ. ಹಾಸನ, ದಾವಣಗೆರೆ, ಚುಂಚನಕಟ್ಟೆಗೆ ಮೂರು ನಾಲ್ಕು ಕಂಪನಿ ಬರತಿದ್ವೊ, ರೈತರು ರಾತ್ರಿಯೆಲ್ಲಾ ನಾಟಕ ನೋಡಿ ಹಗಲು ಮಲಗತಿದ್ರು. ಚುಂಚನಕಟ್ಟೆಗೆ ಮೂರು ಕಂಪನಿ ಬರತಿದ್ವೊ. ಸಿ.ಬಿ. ಮಲ್ಲಪ್ಪನವರ ಚಂದ್ರ ಮೌಳೇಶ್ವರ ಕಂಪನಿ, ಪೀರ್ ಕಂಪನಿ, ನಮ್ಮ ಮೈಸೂರು

ಮಹಾರಾಜರ ಚಾಮುಂಡೇಶ್ವರಿ ಕಂಪನಿ ಬರುತಿದ್ರೊ ಆದರಲ್ಲಿ ...ೀರ್ ಕಂಪನಿಯ ಪೀರ್ ಸಾಹೇಬರು ಮಾಡತಿದ್ದ ಗೌತಮಬುದ್ಧನ ಪಾತ್ರ ಹೆಸರು ಮಾಡಿತ್ತು, ಆತ ತುಂಬ ...ದ್ದಾಗಿ ಕಾಣತಿದ್ದ. ಸಂಸಾರ ನೌಕೆ ನಾಟಕದ ಸುಂದರನ ...ತ್ರನೂ ಹೆಸರು ಮಾಡಿತ್ತು. ವಿಶೇಷ ಅಂದ್ರೆ ಆತನ ...ಪನಿ ಗೌತಮಬುದ್ಧ ನಾಟಕ ಆಡಿದ್ರೆ ಮಲ್ಲಪ್ಪನ ಕಂಪನಿ ...ತ್ಪಾತ್ನ ಕಬೀರನ ನಾಟಕ ಆಡತಿತ್ತು!

ನಮ್ಮ ಮೈಸೂರು ಮಹಾರಾಜರ ಒಡೆತನದ ...ಾಮುಂಡೇಶ್ವರಿ ಕಂಪನಿ ವೈಭವವಾಗಿತ್ತು, ಅರಮನೆ ...ಸ್ತುಗಳು ಬಳಕೆಯಾಗತಿದ್ರೊ. ಶ್ರೀಕೃಷ್ಣರಾಜೇಂದ್ರ ಒಡೆಯರ್ ...ಷ್ಟು ಕಲಾಪೋಷಕರೆಂದರೆ ಗುಬ್ಬಿ ಕಂಪನಿಗೆ ಒಂದು ...ನೆ, ಎರಡು ಕುದುರೆ ಕೊಟ್ಟಿದ್ರು. ಆ ಕುದುರೆಗಳಂತೂ ...ಾಲಿನ ಬಣ್ಣದವು. ಯುದ್ಧಭೂಮಿ ಮಧ್ಯೆ ನಿಂತು ಕೃಷ್ಣನ ...ಗವದ್ಗೀತೆ ಮುಗಿಯೋವರೆಗೂ ಶಿಲಾವಿಗ್ರಹದಂತೆ ...ಂತಿರತಿದ್ರೊ. ಗುಬ್ಬಿ ಕಂಪನಿಯ ಕುರುಕ್ಷೇತ್ರ ಈ ...ಾಡಿನಲ್ಲಲ್ಲದೆ ಹೊರರಾಜ್ಯದಲ್ಲೂ ಹೆಸರು ಮಾಡಕ್ಕೆ ಇವೆಲ್ಲಾ ...ರಣ.

ಗುಬ್ಬಿ ಕಂಪನೀಲಿ ಕಾಳಿಂಗರಾಯರು ಕೂಡ ...ಾರ್ಮೋನಿಯಂ ನುಡಿಸುತ್ತಾ ಇದ್ದರು. ನಾನು ಗ್ರಹಿಸಿದಂತೆ ...ಳಿಂಗರಾಯರೇ ಶ್ರೇಷ್ಠ ಸಂಗೀತ ಸಂಯೋಜಕರು. ಅವರ ...ಟ್ಟಿಗೆ ಹೊಸ ಮಟ್ಟುಗಳಲ್ಲಿ ಹಾಡನ್ನ ಕಟ್ಟಿದವರು ವಿರಳ. ...ತ ಹಿಂದೂಸ್ತಾನಿ ಬಲ್ಲವರಾಗಿದ್ರು. ಹಾಗೆ ಕರ್ನಾಟಕ ...ಂಗೀತದ ವಿದ್ವಾಂಸರಾಗಿದ್ರು. ಅವರ ಮುಂದೆ ನನಗೆ ...ನ್ನಾವ ಸಂಗೀತಗಾರನೂ ಕಾಣ್ತಾಯಿಲ್ಲ, ಗುಬ್ಬಿ ಕಂಪನಿಯ ...ವಕುಶ ನಾಟಕದ ಸಂಗೀತ ಅವರದ್ದೆ.

ನಿಜವಾಗ್ಲು ಜನಗಳು ಗೌರವ ಕೊಡೋದು ನಿಜವಾದ ...ಂಗೀತಗಾರನಿಗೆ ಹೊರತು ಬೇರೆಯವರಿಗಲ್ಲ. ನಿಜವಾದ ...ಂಗೀತಗಾರನಲ್ಲದವನು ಬಂದ್ರೆ ಹೋದ್ರೆ ಕಂಪನಿ ಜನಗಳೇ ...ಡಿಕೊಳ್ತಿದ್ರು. 'ಬಂದಾ ನೋಡು-ಹೋದಾ ನೋಡು' ...ನ್ನಿಸಿಕೊಂಡ್ರೆ ಆತ ಸಂಗೀತಗಾರನಲ್ಲ. ಇಂತಹ ಹಗುರ ...ಾತಿಗೆ ಪಕ್ಕಾದವರು ಇವತ್ತಿನ ಸಂಗೀತ ಸಂಯೋಜಕರು. ...ವರಲ್ಲಿ ಸಂಶೋಧನೆನೇ ಇಲ್ಲ, ಶ್ರಮವೂ ಇಲ್ಲ.

ಕಾಳಿಂಗರಾಯರು ಯಾವುದಾದ್ರು ಲೈಬ್ರರಿಗೆ ಹೋಗಿ ...ಂದು ಕವನದ ಪುಸ್ತಕ ಕೈಲಿಡಿದುಕೊಂಡು ಬಂದ್ರು ...ಂದ್ರೆ, ಬರುತ್ತಲೇ ಅದಕ್ಕೆ ರಾಗ ಸಂಯೋಜನೆ ...ಾಡಿಕೊಂಡೇ ಬರ್ತಿದ್ರು. ಪಾರ್ಕಿನಲ್ಲಿ ತಿರುಗಾಡಿಕೊಂಡೇ ...ಾಗ ಜೋಡಿಸಿ ಬಿಡತಿದ್ರು. 1942 ರಿಂದ 1952 ...ವರೆಗೂ ನಾನವರ ಜೊತೆ ಇದ್ದೆ. ಅವರೊಬ್ಬ ಅದ್ಭುತ ...ಂಗೀತಗಾರ. ಕುಡಿತ ಅವರನ್ನು ಹಾಳು ಮಾಡ್ತು.

ಸ್ವರ ಜ್ಞಾನವೇ ಇಲ್ಲದ ಇಂದಿನವರು ಕಾಳಿಂಗರಾಯರ ...ಮ ಕುರಿತು ಧ್ಯಾನಿಸೋದು ಒಳ್ಳೆದು. ಕಾಳಿಂಗರಾಯರು ...ಗಮ ಸಂಗೀತದ ಭೀಷ್ಮ. ಕನ್ನಡದ ಕವಿಗಳನ್ನು ಜನರ ...ತ್ತಿರಕ್ಕೆ ತಂದ್ರು. ಮೋಹನಕುಮಾರಿ, ಸೋಹನಕುಮಾರಿ ...ಳಿಂಗರಾಯರ ಸ್ವರ ವಾಹಕಿಯಾಗಿದ್ದರು. ಇವತ್ತಿಗೂ ...ಳಿಂಗರಾಯರ ಹಾಡುಗಳು ಎಷ್ಟು ಚೆನ್ನಾಗಿವೆಯಲ್ಲವೆ. ...ಗಿನ ರಂಗಭೂಮಿಯೆಂದರೆ ಹಾಡುಗಳ ಹಬ್ಬ. ...ಾಮಾಯಣ ನಾಟಕದಲ್ಲಿ 200 ಹಾಡುಗಳಿದ್ದವು. ...ಂಜನೇಯನಿಗೇ 60 ಹಾಡುಗಳಿದ್ದವು. ಆತ ನೋಡಿದ ...ೃಶ್ಯಕ್ಕೆಲ್ಲಾ ಒಂದು ಹಾಡು ಹೇಳಬೇಕಿತ್ತು.

ನಾನು ಪುಸ್ತಕ ನೋಡದೆ 200 ಹಾಡು ಹೇಳಬಲ್ಲೆ. ...ಲ್ಲಾ ನಾಟಕದ ಹಾಡುಗಳೂ ನನ್ನ ತಲೆಯಲ್ಲಿವೆ. ನನ್ನ ...ನೆಯಲ್ಲಿ ನನ್ನ ನಂತರವೂ ಸಂಗೀತ ಮುಂದುವರಿಯುತ್ತೆ. ...ನ್ನ ಮಗ ಡಾ. ದೀಪಕ್ ಪರಮಶಿವನ್ ಸಾರಂಗಿ ಕಲಿತಿದ್ದಾನೆ. ...ನಡಾದಲ್ಲಿದ್ದಾನೆ. ಅಲ್ಲೇ ಮ್ಯೂಜಿಕ್‌ನಲ್ಲಿ Ph.d ...ಾಡುತ್ತಿದ್ದಾನೆ. ಜೊತೆಗೆ ಸಾರಂಗಿ ಕಾರ್ಯಕ್ರಮವನ್ನು ...ೊಡುತ್ತಾನೆ. ಸಾರಂಗಿ 32 ತಂತಿ ವಾದ್ಯ 4 ಮೈನ್. ...ಷ್ಟನ್ನೂ ಟ್ಯೂನ್ ಮಾಡಬೇಕು. ರಾಮ ನಾರಾಯಣ್‌ಜಿ ...ಳಿ ಚೆನ್ನಾಗಿ ಕಲಿತಿದ್ದಾನೆ.

...ಮಗಳಿಗೆ ಭರತನಾಟ್ಯದಲ್ಲಿ ಸೀನಿಯರ್ ಆಗಿದೆ. ...ಂ.ಎಸ್. ಮಾಡಿಕೊಂಡಿದ್ದಾಳೆ. ಸಿನಿಮಾ ಹಾಡನ್ನು ಚೆನ್ನಾಗಿ ...ಾಡುತ್ತಾಳೆ" ಎಂದು ಪರಮಶಿವನ್‌ರವರು ತಮ್ಮ ಅದ್ಭುತ ...ೃತ್ತಾಂತವನ್ನು ಮುಗಿಸುತ್ತಿದ್ದಂತೆ ಅವರನ್ನು ಕುವೆಂಪು ...ಂಗಮಂದಿರಕ್ಕೆ ಕರೆದೊಯ್ಯುವ ವಾಹನ ಬಂತು.

ನಾನು ಅವರ ಫೋಟೋಗಳನ್ನು ಕ್ಲಿಕ್ಕಿಸಿಕೊಳ್ಳುವಾಗ ...ರ್ ವೀಕಾಗಿದ್ದುದರಿಂದ ಅವರ ಚಿತ್ರಗಳು ಕ್ಯಾಮರಾದಲ್ಲಿ ...ರೆಯಾಗುತ್ತಿರಲಿಲ್ಲ, ಆದರೂ ಫೋಟೋ ತೆಗೆಯುತ್ತಿದ್ದೆ ...ಮರಾದಿಂದ ಕ್ಲಿಕ್ ಶಬ್ದ ಬರುತ್ತಿರಲಿಲ್ಲ, ಅದು ಅವರಿಗೆ ...ಳಿಯುತ್ತೂ ಇಲ್ಲವೊ ಎಂಬ ಅನುಮಾನದಿಂದ ಹೊರಟೆ!!

■ ಬಿ. ಚಂದ್ರೇಗೌಡ

ಒಂದು ಮೀಸಲಾತಿ ಹೋರಾಟದ ವೃತ್ತಾಂತ

ದತ್ತುರವರ ದಲಿತ ಪರ ತೀರ್ಪು

ಸರ್ವೋಚ್ಚ ನ್ಯಾಯಾಲಯದ 42ನೇ ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳಾಗಿ ಡಿಸೆಂಬರ್ 2, 2015 ರಂದು ನಿವೃತ್ತ ಕನ್ನಡಿಗರಾದ ಹಂದ್ಯಾಲ ಲಕ್ಷ್ಮೀನಾರಾಯಣ ಸ್ವಾಮಿ ದತ್ತು (ಎಚ್.ಎಲ್.ದತ್ತು) ಅವರು ಇದೀಗ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿದ್ದಾರೆ.

ದತ್ತುರವರು ನಮ್ಮ ರಾಜ್ಯದ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿದ್ದ ಸಂದರ್ಭದಲ್ಲಿ 2001 ರಲ್ಲಿ ನೀಡಿದ ಆದೇಶದಿಂದಾಗಿ ಪರಿಶಿಷ್ಟರ ಒಟ್ಟು 118 ಶಿಕ್ಷಕರ ಬ್ಯಾಕ್‌ಲಾಗ್ ಹುದ್ದೆಗಳನ್ನು ಬೆಂಗಳೂರು ಕೃಷಿವಿಶ್ವವಿದ್ಯಾಲಯದಲ್ಲಿ ಗುರುತಿಸಿ ಭರ್ತಿ ಮಾಡಲಾಯಿತು. ಆ ಎಲ್ಲಾ ಪರಿಶಿಷ್ಟ ಫಲಾನುಭವಿಗಳ ಪರವಾಗಿ ನ್ಯಾಯಮೂರ್ತಿ ದತ್ತುರವರಿಗೆ ಧನ್ಯವಾದಗಳು. ಒಂದು ಚಾರಿತ್ರಿಕ ಸಾಧನೆಗಾಗಿ ಮತ್ತು ನೆನಪಿಗಾಗಿ ಆ ಕೇಸಿನ ವೃತ್ತಾಂತ.

ಬೆಂಗಳೂರು ಕೃಷಿ ವಿವಿಯಲ್ಲಿ ಮೀಸಲಾತಿ ಉಲ್ಲಂಘನೆ

ಜೂನ್, 1996ರ ಶಿಕ್ಷಕರ ನೇಮಕಾತಿ ಪ್ರಕಟಣೆಯಲ್ಲಿ ಬೆಂಗಳೂರು ಕೃಷಿ ವಿವಿಯು ಪರಿಶಿಷ್ಟರ ಮೀಸಲಾತಿಯನ್ನು ಗರಿಷ್ಟ ಪ್ರಮಾಣದಲ್ಲಿ ಉಲ್ಲಂಘಿಸಿತು. ನೂರಾರು ಹಿಂಬಾಕಿ ಹುದ್ದೆಗಳನ್ನು ಮೀಸಲಾತಿಯ ಪರಿಧಿಯಿಂದ ಹೊರಗಿಟ್ಟು ಸಾಮಾನ್ಯ ವರ್ಗದ ಪರ ವರ್ಗೀಕರಿಸಿತು. ಜುಲೈ, 1989ರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದೇಶಗಳಂತೆ ಹಿಂಬಾಕಿ ಹುದ್ದೆಗಳನ್ನು ಗುರ್ತಿಸಿ ವಿಶೇಷ ನೇಮಕಾತಿ ನಡೆಸಬೇಕಿತ್ತು. ಆದರೆ, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕ ಮತ್ತು ರೀಡರುಗಳ ಮೀಸಲಾತಿ ಕುರಿತ ರಾಜ್ಯ ಸರ್ಕಾರದ ಫೆಬ್ರವರಿ 1994ರ ಆದೇಶವನ್ನು ತಪ್ಪಾಗಿ ವಿಶ್ಲೇಷಿಸಿಕೊಂಡ ವಿವಿಯು ಬೇಕಂತಲೇ ಶಿಕ್ಷಕರ ಹುದ್ದೆಗಳ ಮೀಸಲಾತಿಯನ್ನು ಮನಬಂದಂತೆ ನಿಗದಿಗೊಳಿಸಿತು.

ವಿವಿಯ ಪರಿಶಿಷ್ಟ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘವು ಪರಿಶಿಷ್ಟ ಜಾತಿಯ ರಾಷ್ಟ್ರೀಯ ಆಯೋಗಕ್ಕೆ ದೂರನ್ನು ಸಲ್ಲಿಸಿತು. ರಾಷ್ಟ್ರೀಯ ಆಯೋಗವು ವಿವಿಗೆ ಒಂದು ಪತ್ರ ಬರೆದು ಕೈತೊಳೆದುಕೊಂಡಿತು. ರಾಷ್ಟ್ರೀಯ ಆಯೋಗದ ನಿರ್ದೇಶನವನ್ನು ವಿವಿಯು ಮಾನ್ಯತೆ ಮಾಡಲಿಲ್ಲ, ಕಾರಣ, ಆಯೋಗವು ನೀಡುವ ನಿರ್ದೇಶನಗಳು ನ್ಯಾಯಾಲಯದ ನಿರ್ದೇಶನಕ್ಕೆ ಸಮನಲ್ಲ ಎಂದು ಯಾವುದೋ ಕೋರ್ಟು ಹೇಳಿತ್ತು. ವಿವಿಯ ಅಧಿಕಾರಿಗಳಿಗೆ ನೇಮಕಾತಿ ಪ್ರಕಟಣೆಯನ್ನು ಸರಿಪಡಿಸಿಕೊಳ್ಳದಿರಲು ಇಷ್ಟು ಪಿಳ್ಳೆನೆವ ಸಾಕಾಗಿತ್ತು.

1997 ರಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭವಾಯಿತು. ಪರಿಶಿಷ್ಟ ಶಿಕ್ಷಕರ ಸಂಘಕ್ಕೆ ಇದನ್ನು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸದೆ ಗತ್ಯಂತರವಿರಲಿಲ್ಲ. ಆರಂಭದಲ್ಲಿ ಪರಿಶಿಷ್ಟರ ಪರವಾಗಿ ತಡೆಯಾಜ್ಞೆ ಸಿಕ್ಕಿತು. ಆದರೆ, ಮೀಸಲು ಉಲ್ಲಂಘಿಸಿದ ಬಲಾಢ್ಯರು ತಡೆಯಾಜ್ಞೆ ತೆರವುಗೊಳಿಸಿಕೊಂಡರು. ನ್ಯಾಯಾಲಯದ ಈ ಆಜ್ಞೆಯಲ್ಲಿ ನೇಮಕಗಳು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತವೆ ಎಂಬ ಷರತ್ತನ್ನು ವಿಧಿಸಲಾಯಿತು.

ನ್ಯಾಯಾಲಯದ ಮಧ್ಯಂತರ ಆದೇಶದಂತೆ ಪರಿಶಿಷ್ಟರ ನೂರಾರು ಹಿಂಬಾಕಿ ಹುದ್ದೆಗಳಿಗೆ ಇತರೆ ವರ್ಗದವರನ್ನು 1998ರಲ್ಲಿ ಭರ್ತಿ ಮಾಡಿಕೊಳ್ಳಲಾಯಿತು. ಅಂತಿಮವಾಗಿ, ಮೊಕದ್ದಮೆಯ ವಿಚಾರಣೆಯು 2000ರಲ್ಲಿ ಆರಂಭವಾಯಿತು. ಬೆಂಗಳೂರು ಕೃಷಿ ವಿವಿ ಹಾಗೂ ಸರಕಾರ ಪ್ರತಿವಾದಿಗಳಾಗಿದ್ದವು. ಆದರೆ, ವಿಚಾರಣೆ ಆರಂಭವಾಗುತ್ತಿದ್ದಂತೆ, ಪ್ರಶ್ನಿತ ಹಿಂಬಾಕಿ ಹುದ್ದೆಗಳ ಎದುರು ನೇಮಕಗೊಂಡ ಪರಿಶಿಷ್ಟೇತರರು ಹಾಗೂ ಅವರಿಂದ ಪುಸಲಾವಣೆಗೊಳಪಟ್ಟ ಕೆಲ ಪರಿಶಿಷ್ಟರು ನ್ಯಾಯಾಲಯದಲ್ಲಿ ಇದೇ ಮೊಕದ್ದಮೆಯ ಅರ್ಜಿದಾರ (ಇಂಪ್ಲೀಡಿಂಗ್ ಅಪ್ಲಿಕಾಂಟ್ಸ್)ರಾಗಿ ಸೇರಿಕೊಂಡರು. ಅವರ ಸಂಖ್ಯೆ ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಗಿ 65 ಕ್ಕೇರಿತು.

ಅವರೆಲ್ಲರ ಪರವಾಗಿ ಹೈಕೋರ್ಟಿನಲ್ಲಿ ಎದ್ದು ನಿಲ್ಲುತ್ತಿದ್ದ ಹತ್ತಾರು ವಕೀಲರ ಸಂಖ್ಯೆಯನ್ನು ಗಮನಿಸುತ್ತಿದ್ದರೆ ನಮ್ಮೆದೆಗಳಲ್ಲಿ ದಿಗಿಲು ಹುಟ್ಟುತ್ತಿತ್ತು. ಪರಿಶಿಷ್ಟರ ಸಂಘವು ಇಂತಹ ಕೇಸನ್ನು ನ್ಯಾಯಾಲಯದಲ್ಲಿ ಹೋರಾಡುವಂತಿಲ್ಲ, ದಲಿತ ಸೇನಾ ವರ್ಸಸ್ ಕರ್ನಾಟಕ ವಿಶ್ವವಿದ್ಯಾಲಯ ಕೇಸಿನಲ್ಲಿ ಈ ಅಂಶವನ್ನು ನಿರೂಪಿಸಲಾಗಿದೆ ಎಂಬ ವಿತಂಡವಾದಗಳು ಅರ್ಜಿದಾರರಿಂದ ಹರಿದುಬಂದವು. ಅಂತಿಮ ವಿಚಾರಣೆಯ ಆರಂಭದ ಹಂತದಲ್ಲೇ ಕೇಸನ್ನು ಬೀಳಿಸಿಬಿಡಬೇಕೆನ್ನುವುದು ಮೀಸಲಾತಿ ನುಂಗಿದ ಬಲಾಢ್ಯರ ಕುಟಿಲ ತಂತ್ರವಾಗಿತ್ತು.

ಸಾಕಷ್ಟು ಚರ್ಚೆ, ವಾದ-ವಿವಾದಗಳ ನಂತರ ಉಚ್ಚ ನ್ಯಾಯಾಲಯವು ಪರಿಶಿಷ್ಟರು ದುರ್ಬಲ ವರ್ಗವಾಗಿರುವುದರಿಂದ, ಅವರು ಒಂದು ಸಂಘವಾಗಿರುವುದರಿಂದ, ಪರಿಶಿಷ್ಟ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘವು ಇಂತಹ ಕೇಸುಗಳನ್ನು ನಡೆಸಬಹುದೆಂದು ವಿಚಾರಣೆಯನ್ನು ಮುಂದುವರೆಸಿತು.

ಕುದ್ಮುಲ್ ರಂಗರಾಯರಂತಹ ವಕೀಲರಾದ ಹೊಳ್ಳರವರು

ನಮ್ಮ ಸಂಘದ ವಕೀಲರು ಪಿ.ಡಿ.ವಿಶ್ವನಾಥ್. ಅವರ ಪರವಾಗಿ ವಾದ ಮಂಡಿಸಿದವರು ಎ.ಜಿ.ಹೊಳ್ಳ ಎಂಬ ಹಿರಿಯ ವಕೀಲರು. ಇವರೆಷ್ಟು ದಲಿತರ ಪರವಾದವರೆಂದರೆ "ನನಗೆ ನೀವು ಶುಲ್ಕ ಕೊಡಬೇಡಿ. ಅದು ನಿಮ್ಮಿಂದಾಗುವುದಿಲ್ಲ, ನನ್ನ ಜೂನಿಯರ್ ಲಾಯರಿಗೆ ನಿಮ್ಮಿಂದಾದಷ್ಟು ಕೊಡಿ" ಎಂದರು. "ನಿಮಗೆ ನ್ಯಾಯ ಕೊಡಿಸಬೇಕೆನ್ನುವುದು ನನ್ನ ಹಂಬಲ. ನನ್ನ ದುಡಿಮೆಯಲ್ಲಿ ನನ್ನೂರಿನ ದಲಿತರಿಗೆ ಮನೆ ಕಟ್ಟಿಸಿಕೊಟ್ಟಿದ್ದೇನೆ" ಎಂದು ಥೇಟ್ ಕುದ್ಮುಲ್ ರಂಗರಾಯರಂತೆ ನಮ್ಮ ಪರ ನಿಂತವರು ಹೊಳ್ಳರವರು. ಕೇಸಿಗೆ ಸಂಬಂಧಿಸಿದ ಎಲ್ಲಾ ಚರ್ಚೆಗಳು ಹೊಳ್ಳರವರ ಮನೆಯ ಕಚೇರಿಯಲ್ಲಿ ತಡರಾತ್ರಿಯವರೆಗೂ ನಡೆಯುತ್ತಿತ್ತು, ಸಂಘದ ಸದಸ್ಯನಾಗಿ, ಮೀಸಲಾತಿ ಜಾರಿಯ ತಜ್ಞತೆಯಿಂದಾಗಿ ಚರ್ಚೆಯಲ್ಲಿ ನನ್ನದೇ ಪ್ರಮುಖ ಪಾತ್ರವಿರುತ್ತಿತ್ತು.

ಹೈಕೋರ್ಟಿನಲ್ಲಿ ಹತ್ತಾರು ದಿನಗಳ ಕಾಲ ವಾದಮಂಡನೆ ನಡೆಯಿತು. ಮೀಸಲಾತಿ ಉಲ್ಲಂಘನೆಯಾಗಿದೆ ಎಂಬ



ಅರಿವಿದ್ದರೂ ವಿರೋಧಿ ವಕೀಲರು ವ್ಯಥಾ ಗಂಟೆಗಟ್ಟಲೆ ಒಣವಾದ ಮಂಡಿಸಿದರು. ನ್ಯಾಯಮೂರ್ತಿ ದತ್ತುರವರು ಎಲ್ಲವನ್ನೂ ತದೇಕಚಿತ್ತದಿಂದ ಆಲಿಸುತ್ತಿದ್ದರು. ನಮ್ಮ ವಕೀಲರಾದ ಮಿತಭಾಷಿ ಹೊಳ್ಳರವರೂ ವಾದ ಮಂಡಿಸಿದರು. ಒಂದು ಹಂತದಲ್ಲಿ ದತ್ತುರವರು ತಾವು ತೀರ್ಪು ಕೊಡಲು ಯಾವ ಸರ್ಕಸ್ಸನ್ನೂ ಮಾಡುವುದಿಲ್ಲ, ಕಡ್ಡಿ ಮುರಿದಂತೆ ತಮ್ಮ ತೀರ್ಪಿರುತ್ತದೆ ಎಂದುಬಿಟ್ಟರು. ಮೀಸಲು ಹುದ್ದೆಗಳ ಎದುರು ಆಯ್ಕೆಯಾಗಿ ಎಲ್ಲ ಸವಲತ್ತುಗಳನ್ನು ಅನುಭವಿಸುತ್ತಿದ್ದ ಅರ್ಜಿದಾರರಿಗೆ ಇದರಿಂದ ಗಾಬರಿಯಾಯಿತು. ವಿವಿಯು ಕೇಸು ಗೆಲ್ಲಲು ಇಂತಹ ಅರ್ಜಿದಾರರನ್ನೇ ಅವಲಂಬಿಸಿತ್ತು. ಕಾಗೆಯನ್ನು ಕೋಗಿಲೆಯನ್ನಾಗಿಸಿಕೊಳ್ಳುವ ಇರಾದೆ ವಿರೋಧಿಗಳಲ್ಲಿತ್ತು.

ಕೃಷಿ ವಿಶ್ವವಿದ್ಯಾಲಯದ ಸಬ್ಜೆಕ್ಟುಗಳೆಂದರೆ ಕೃಷಿ, ಪಶುವೈದ್ಯಕೀಯ, ಮೀನುಗಾರಿಕೆ, ಡೇರಿ, ಅರಣ್ಯಶಾಸ್ತ್ರ ತೋಟಗಾರಿಕೆ ಹೀಗೆ ಪ್ರತಿ ಫ್ಯಾಕಲ್ಟಿಯಲ್ಲಿ ಹತ್ತು ಹಲವಾರು ವಿಷಯಗಳು. ಯಾವ ಯಾವ ಸಬ್ಜೆಕ್ಟಿನಲ್ಲಿ ಹೇಗೆ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಮೀಸಲಾತಿಯನ್ನು ಕಬಳಿಸಲಾಗಿದೆ ಎನ್ನುವುದನ್ನು ನ್ಯಾಯಾಲಯ ಕೂದಲೆಳೆಯಂತೆ ಪರೀಕ್ಷಿಸುವುದು ಕಷ್ಟದ ಕೆಲಸವೇ ಆಗಿತ್ತು.

ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ನೇಮಿಸಬೇಕೆಂದಾಯಿತು. ಅಂತಹ ಸಮಿತಿಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಆರು ತಿಂಗಳೊಳಗೆ ಗುರುತಿಸಿ ವರದಿ ನೀಡಿದ ನಂತರದ ಆರು ತಿಂಗಳೊಳಗೆ ಕಾಲಮಿತಿಯಲ್ಲಿ ನೇಮಕಾತಿ ನಡೆಸಬೇಕು, ಖಾಲಿ ಹುದ್ದೆಗಳು ಇಲ್ಲದಿದ್ದಲ್ಲಿ ಅಗತ್ಯಬಿದ್ದಲ್ಲಿ ಹೆಚ್ಚುವರಿ ಹುದ್ದೆ ಸೃಷ್ಟಿಸಿಯಾದರೂ ದಲಿತರಿಗಾದ ನಷ್ಟವನ್ನು ತುಂಬಿಕೊಡಬೇಕು. ಈ ಕುರಿತು ವಿವಿಯ ಕುಲಸಚಿವರು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು, ಇದನ್ನು ಎರಡೂ ಕಡೆಯವರು ಒಪ್ಪಬೇಕು ಎಂದರು ದತ್ತುರವರು.

ಇಂತಹ ರಾಜೀಕಬೂಲಿ ಸೂತ್ರಕ್ಕೆ ಕೋರ್ಟ್ ಹಾಲಿನಲ್ಲಿ ಅವರೊಂದು ನಿದರ್ಶನವನ್ನು ಕೊಟ್ಟರು. ತಾವು ದಲಿತನೊಬ್ಬನ ಪರ 1987ರಲ್ಲಿ ತೀರ್ಪು ಕೊಟ್ಟಿದ್ದಾಗಿಯೂ, ಆದರೆ ಕಂಪನಿಯು ಮೇಲ್ಮನವಿ ಸಲ್ಲಿಸಿಕೊಂಡು ಸುಪ್ರೀಂ ಕೋರ್ಟಿಗೆ ಹೋಗಿದ್ದರಿಂದ ಇಂದಿಗೂ ಆ ದಲಿತನಿಗೆ ನ್ಯಾಯ ಸಿಕ್ಕಿಲ್ಲ ಎಂಬ ಖೇದವನ್ನು ವ್ಯಕ್ತಪಡಿಸಿದರು. ಈ ಕೇಸಿನಲ್ಲೂ, ಮೀಸಲಾತಿ ಉಲ್ಲಂಘಿಸಿ ಮಾಡಲಾದ ನೇಮಕಗಳನ್ನು ನಾನು ರದ್ದುಪಡಿಸಬಲ್ಲೆ, ಆದರೆ, ಇಲ್ಲಿಯ ಅರ್ಜಿದಾರರು ಮೇಲ್ಮನವಿ ಹೋಗುತ್ತಾರೆ. ಆಗ ದಲಿತರಿಗೆ ನ್ಯಾಯ ಸಿಗುವುದು ಕಷ್ಟ ಸಾಧ್ಯ ಎಂದರು.

ಪ್ರೊ. ನರಸಿಂಹಯ್ಯ ನೇತೃತ್ವದಲ್ಲಿ ತಜ್ಞರ ಸಮಿತಿ

ವಿವಿಯು ಹೈಕೋರ್ಟಿಗೆ ಅಫಿಡವಿಟ್ ಸಲ್ಲಿಸಿ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ಪ್ರೊ.ಎನ್.ವಿ.ನರಸಿಂಹಯ್ಯನವರನ್ನು ತಜ್ಞರ ಸಮಿತಿಯ ಚೇರಮನ್ ಆಗಿ ನೇಮಿಸುವ ಇಚ್ಛೆ ವ್ಯಕ್ತಪಡಿಸಿತು. ಇತರೆ ಅಧಿಕಾರಿಗಳು ಸಮಿತಿಯಲ್ಲಿದ್ದರು. ಕುಲಪತಿ ಡಾ.ಎಸ್.ಬಿಸಲಯ್ಯನವರಿಗೆ ದಲಿತರಿಗಾಗಿದ್ದ ನಷ್ಟವನ್ನು ತುಂಬಿಕೊಡುವ ಮನಸ್ಸಿತ್ತು, ಸಮಿತಿಯು ಆರು ತಿಂಗಳ ಬದಲು ಹನ್ನೊಂದು ತಿಂಗಳು ಸಭೆಗಳನ್ನು ನಡೆಸಿತು.

ಅಂತಿಮವಾಗಿ ನನ್ನನ್ನು ಅನಧಿಕೃತ ಆಹ್ವಾನಿತನನ್ನಾಗಿ ಬರಮಾಡಿಕೊಂಡ ಸಮಿತಿಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಪಟ್ಟಿ ಮಾಡಿಕೊಡಲು ಕೋರಿತು. ಎರಡೇ ದಿನದಲ್ಲಿ ನಾನದನ್ನು ಮಾಡಿಕೊಟ್ಟೆ. ಬ್ಯಾಕ್‌ಲಾಗ್ ಹುದ್ದೆಗಳ ಕರಾರುವಾಕ್ಕು ಲೆಕ್ಕ ನನ್ನ ಬಳಿ ಇತ್ತು, ಫೆಬ್ರವರಿ 2002ರಲ್ಲಿ ಸಲ್ಲಿಸಿದ ವರದಿಯಂತೆ ಒಟ್ಟು 118 ಮೀಸಲು ಹುದ್ದೆಗಳನ್ನು ಗುರ್ತಿಸಲಾಯಿತು. ಇದು ಪ್ರೊ. ನರಸಿಂಹಯ್ಯ ವರದಿ ಎಂಬ ಖ್ಯಾತಿ ಗಳಿಸಿತು.

ಹುದ್ದೆಗಳ ಭರ್ತಿಗಾಗಿ 2003ರಲ್ಲಿ ನೇಮಕಾತಿ ಪ್ರಕಟಣೆ ಹೊರಬಿತ್ತು, ಆದರೆ, ಅಂದಿನ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ತಪ್ಪು ನಿರ್ಧಾರಗಳಿಂದಾಗಿ ನೇಮಕಾತಿ ಸ್ಥಗಿತಗೊಂಡಿತು. ಸಂಪುಟದ ತೀರ್ಮಾನದಂತೆ ವಿವಿಗಳಲ್ಲಿ ಬ್ಯಾಕ್‌ಲಾಗ್ ಭರ್ತಿಗೆ ಶಾಸನ ರೂಪಿಸಬೇಕಿದೆ ಎಂದಿತು ಸರ್ಕಾರ. ಎಸ್.ಎಂ.ಕೃಷ್ಣ ಸರ್ಕಾರ ಲೋಕಸಭೆಯ ಜೊತೆಗೆ ವಿಧಾನಸಭೆಗೂ ಚುನಾವಣೆ ಘೋಷಿಸಲು ಅನುವಾಗುವಂತೆ ವಿಧಾನಸಭೆಯನ್ನು ವಿಸರ್ಜಿಸಿತು. ಹುದ್ದೆಗಳ ಭರ್ತಿಗೆ ಚುನಾವಣೆಗಳು ಅಡ್ಡಿಯಾದವು. 2003ರಲ್ಲಿ ಭರ್ತಿಯಾಗಬೇಕಿದ್ದ ಪರಿಶಿಷ್ಟರ ಬ್ಯಾಕ್‌ಲಾಗ್ ಹುದ್ದೆಗಳು ಅಂತಿಮವಾಗಿ 2006 ಹಾಗೂ 2007 ರ ಹೊತ್ತಿಗೆ ಭರ್ತಿಯಾದವು.

ಈ ಮಧ್ಯೆ ಹಲವಾರು ಸ್ಥಿತ್ಯಂತರಗಳಾದವು. ಪಶುವೈದ್ಯಕೀಯ ವಿಶ್ವವಿದ್ಯಾಲಯವು 2005ರಲ್ಲಿ ಹೊಸದಾಗಿ ಸ್ಥಾಪಿತವಾಗಿ ಅಲ್ಲಿಗೆ ಕೆಲ ಹುದ್ದೆಗಳು ವರ್ಗಾವಣೆಗೊಂಡವು. ಪೆನ್‌ಷನ್ ಯೋಜನೆ ಬದಲಿಗೆ ಹೊಸ ಪೆನ್‌ಷನ್ ಯೋಜನೆ ಬಂದಿತು. ಒಟ್ಟನಲ್ಲಿ 1996 ರಿಂದ 2006 ರವರೆಗೆ ಸುಮಾರು ಹತ್ತು ವರ್ಷಗಳ ಕಾಲ ಮೀಸಲಾತಿ ಸರಿಪಡಿಸಲು ನಾನು ಮತ್ತು ಸಂಘದ ಪದಾಧಿಕಾರಿಗಳು ಪಟ್ಟ ಪಾಡು ಒಂದು ಮಹಾಯುದ್ಧವನ್ನು ಗೆದ್ದಂತಾಯಿತು. "ಅಯ್ಯೋ, ಶೋಷಿತರಿಗೆ ನ್ಯಾಯಾಲಯದಲ್ಲಿ ನ್ಯಾಯ ಸಿಗುತ್ತದೆಯೇ?" ಎಂದು ಮೀಸಲಾತಿ ಉಲ್ಲಂಘನೆ ಪ್ರಕರಣಗಳನ್ನು ತಣ್ಣಗೆ ಸಹಿಸಿಕೊಂಡ ಹಲವಾರು ಪ್ರಕರಣಗಳೂ ಇವೆ.

ನಮ್ಮ ಗೆಲುವಿನಲ್ಲಿ ನ್ಯಾಯಮೂರ್ತಿ ದತ್ತುರವರ ದಲಿತ ಪರ ಪ್ರಾಮಾಣಿಕ ಕಾಳಜಿ ಇತ್ತು. ಎಲ್ಲ ಬ್ಯಾಕ್‌ಲಾಗ್ ಫಲಾನುಭವಿಗಳ ಪರವಾಗಿ ಅವರಿಗೆ ಧನ್ಯವಾದಗಳು. ಇದಿಷ್ಟನ್ನು ಎಂದಾದರೊಮ್ಮೆ ಬರವಣಿಗೆಯ ರೂಪದಲ್ಲಿಡದಿದ್ದರೆ, ನನ್ನ ಮನಸ್ಸು ಇನ್ನೂ ಭಾರವಾಗಿಯೇ ಇರುತ್ತಿತ್ತು. ಈಗ ಆ ಭಾರವನ್ನು ಇಳಿಸಿಕೊಂಡಿದ್ದೇನೆ. ನಿರುಮ್ಮಳನಾಗಿದ್ದೇನೆ. ಅಂಬೇಡ್ಕರ್ ಹಾದಿಯಲ್ಲಿ ಹೆಜ್ಜೆ ಹಾಕಿ ಶೋಷಿತ ವರ್ಗಗಳಿಗೆ ನ್ಯಾಯ ದೊರಕಿಸಿಕೊಟ್ಟಿದ್ದಕ್ಕಾಗಿ ಹೆಮ್ಮೆಯವನಾಗಿದ್ದೇನೆ. ಕಾಲಗರ್ಭದಲ್ಲಿ ಬದ್ಧತೆಗೆ ಮುಖ್ಯಾಗದಂತೆ ಮುತುವರ್ಜಿ ವಹಿಸಿಕೊಂಡಿದ್ದೇನೆ

■ ಪ್ರೊ. ಎಂ. ನಾರಾಯಣಸ್ವಾಮಿ

ಜನರನ್ನು ಒಳಗೊಳ್ಳುವ ಸಿದ್ದರಾಮಯ್ಯ ಬಜೆಟ್

ಈ ಲೇಖನದಲ್ಲಿ ಕರ್ನಾಟಕ ಸರ್ಕಾರದ 2016-2017ನೇ ಸಾಲಿನ ಬಜೆಟ್ಟಿನ ವಿವಿಧ ಆಯಾಮಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಪ್ರಬಂಧದ ಮೊದಲ ಭಾಗದಲ್ಲಿ ಕರ್ನಾಟಕದ ಆರ್ಥಿಕ ಮತ್ತು ಹಣಕಾಸು ಸ್ಥಿತಿಗತಿಯು ಸದೃಢವಾಗಿ ರುವುದನ್ನು ಅಂಕಿಅಂಶಗಳ ಆಧಾರದಲ್ಲಿ ಗುರುತಿಸಲಾಗಿದೆ. ಎರಡನೆಯ ಭಾಗದಲ್ಲಿ ಬಜೆಟ್ಟಿನ ವಿಶೇಷ ಲಕ್ಷಣಗಳನ್ನು ಮತ್ತು ನಮ್ಮ ಅಭಿವೃದ್ಧಿ ಕುರಿತ ಮಿತಿಗಳನ್ನು ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ ಬಜೆಟ್ಟಿನ ಮತ್ತು ಕರ್ನಾಟಕದ ಅಭಿವೃದ್ಧಿಯ ಮೂಲ ಸಮಸ್ಯೆಗಳನ್ನು ಮತ್ತು ಬಜೆಟ್ಟು ಅವುಗಳನ್ನು ಎದುರಿಸುತ್ತಿರುವ ಕ್ರಮಗಳನ್ನು ವಿಶ್ಲೇಷಿಸಲಾಗಿದೆ.



ಕರ್ನಾಟಕದ ಸದೃಢ ಆರ್ಥಿಕತೆ

ಭಾಗ 1

ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರದ ಬಜೆಟ್ಟಿನ ಬಗ್ಗೆ ಇರುವ ಒಂದು ಟೀಕೆಯೆಂದರೆ ಅದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ರಾಜ್ಯದ ಅಭಿವೃದ್ಧಿಯನ್ನು ಬಲಿ ಕೊಡುತ್ತಿದೆ ಎಂಬುದಾಗಿದೆ. ಆದರೆ ರಾಜ್ಯದ ಅಭಿವೃದ್ಧಿ ಸ್ಥಿತಿಗತಿಯು ಇದನ್ನು ಬೆಂಬಲಿಸುವುದಿಲ್ಲ. ಒಂದು ವೇಳೆ ಹಾಗೆ ಅಭಿವೃದ್ಧಿಯನ್ನು ಅವರು ಬಲಿಕೊಟ್ಟದ್ದಾಗಿದ್ದರೆ 2013-14ರಿಂದ ರಾಜ್ಯದ ಬೆಳವಣಿಗೆ ಕುಂಠಿತಗೊಳ್ಳಬೇಕಾಗಿತ್ತು. ನಮ್ಮ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಎಸ್‌ಡಿಪಿ) ಬೆಳವಣಿಗೆ ಪ್ರಮಾಣ (ಸ್ಥಿರ ಬೆಲೆಗಳಲ್ಲಿ) 2012-13ರಲ್ಲಿ ಶೇ. 5.8ರಷ್ಟಿದ್ದುದು 2013-14ರಲ್ಲಿ ಅದು ಶೇ. 6.9ಕ್ಕೆ, 2014-15ರಲ್ಲಿ ಶೇ. 7.8ಕ್ಕೆ ಮತ್ತು 2015-16ರಲ್ಲಿ ಅದು ಶೇ. 6.2ರಷ್ಟಾಗಿದೆ. ಇಲ್ಲಿ ಆರ್ಥಿಕ ಬೆಳವಣಿಗೆ ಪ್ರಮಾಣದಲ್ಲಿ ಕುಸಿತವೇನು ಸಂಭವಿಸಿಲ್ಲ. ಸಿದ್ದರಾಮಯ್ಯ ಅವರು ಅಭಿವೃದ್ಧಿಯನ್ನು ಕಡೆಗಣಿಸಿದ್ದಾರೆ ಅನ್ನುವುದಕ್ಕೆ ಆಧಾರಗಳೇನಿಲ್ಲ.

ಇವರ ಅವಧಿಯಲ್ಲಿ ಸಾರ್ವಜನಿಕ ಸಾಲದ ಪ್ರಮಾಣ ಮಿತಿಮೀರಿ ಬೆಳೆದಿದೆ ಅನ್ನುವುದು ಅವರ ಮೇಲಿರುವ ಮತ್ತೊಂದು ಟೀಕೆ. ನಮ್ಮ ರಾಜ್ಯದ ಒಟ್ಟು ಸಾರ್ವಜನಿಕ ಸಾಲ ರೂ. 2,08,557 ಕೋಟಿಯಷ್ಟಿದೆ. ನಮ್ಮ ರಾಜ್ಯದ 2016-17ನೆ ಸಾಲಿನ ಒಟ್ಟು ಆಂತರಿಕ ಉತ್ಪನ್ನದ ಅಂದಾಜು ರೂ. 12.11 ಲಕ್ಷ ಕೋಟಿ. ಸಾರ್ವಜನಿಕ ಸಾಲವು ರಾಜ್ಯದ 2016-2017ನೆಯ ಸಾಲಿನ ಅಂದಾಜು ವರಮಾನದ ಶೇ. 17.22 ರಷ್ಟಾಗುತ್ತದೆ. ಕರ್ನಾಟಕ ರಾಜಸ್ವ ಜವಾಬುದಾರಿ ಕಾಯಿದೆಯ ಪ್ರಕಾರ ಸಾರ್ವಜನಿಕ ಸಾಲದ ಮೊತ್ತ ರಾಜ್ಯದ ಒಟ್ಟು ವರಮಾನದ ಶೇ. 25 ಮೀರಬಾರದು. ಅದು ನಿಗದಿಪಡಿಸಿದ ಗಡಿಯೊಳಗೆ ಸಾಲದ ಮೊತ್ತವಿದೆ. ಸಾಲವನ್ನು ಎತ್ತುವುದೇ ಕೆಟ್ಟದಲ್ಲ. ಏಕೆಂದರೆ ಸಾಲದ ಹಣವನ್ನು ಉತ್ಪಾದನಾ ಚಟುವಟಿಕೆಗಳಿಗೆ ಬಳಸಿಕೊಂಡರೆ ಅದರಿಂದ ಅಪಾಯವೇನಿಲ್ಲ. ಅನುಭೋಗಕ್ಕೆ ಸಾಲ ಮಾಡಿದರೆ ತೊಂದರೆ. ಈ ಪ್ರಮಾಣದ ಸಾಲವನ್ನು ಭರಿಸುವ ಸಾಮರ್ಥ್ಯ ಕರ್ನಾಟಕ ಆರ್ಥಿಕತೆಯಿದೆ. ಬಜೆಟ್ಟಿನಲ್ಲಿ ವಿತ್ತೀಯ ಕೊರತೆ ರೂ. 25,657 ಕೋಟಿ. ಅದು ಕೂಡ 2016-17ನೆಯ ಸಾಲಿನ ಒಟ್ಟು ರೆವಿನ್ಯೂ ಸ್ವೀಕೃತಿಯ ಶೇ. 19.62ರಷ್ಟಿದೆ. ಸಾಲದ ಮೇಲಿನ ವಾರ್ಷಿಕ ಬಡ್ಡಿಯು ರೂ. 12,671.54 ಕೋಟಿ. ಇದು ರಾಜ್ಯದ ಒಟ್ಟು ರೆವಿನ್ಯೂ ಸ್ವೀಕೃತಿಯ ಶೇ. 9.69ರಷ್ಟಾಗುತ್ತದೆ. ರಾಜ್ಯದ 2016-17ನೆಯ ಸಾಲಿನ ಒಟ್ಟು ವರಮಾನದಲ್ಲಿ ಒಟ್ಟು ವೆಚ್ಚದ ಪ್ರಮಾಣ ಶೇ. 13.46 ರಷ್ಟಾಗಿದೆ. ರಾಷ್ಟ್ರದ ಜಿಡಿಪಿಗೆ (ವರಮಾನಕ್ಕೆ) ಕರ್ನಾಟಕದ ಕಾಣಿಕೆಯು ಶೇ. 5.5 ರಿಂದ ಶೇ. 7ಕ್ಕೇರಿದೆ. ಕರ್ನಾಟಕದಲ್ಲಿ ತಲಾ ವರಮಾನವು 2014-15 ರಲ್ಲಿ ರೂ. 1,30,897 ರಷ್ಟಿದ್ದುದು 2015-2016ರಲ್ಲಿ ಅದು ರೂ. 1,45,799 ರಷ್ಟಾಗಿದೆ. ಇದು ರಾಷ್ಟ್ರಮಟ್ಟದ 2015-2016ರ ತಲಾ ವರಮಾನವಾದ ರೂ. 93,231ಕ್ಕಿಂತ ಅಧಿಕವಾಗಿದೆ. ಎಲ್ಲ ದೃಷ್ಟಿಯಿಂದಲೂ ಕರ್ನಾಟಕದ ಆರ್ಥಿಕ ಮತ್ತು ಹಣಕಾಸು ಸ್ಥಿತಿಗತಿಯು ಉತ್ತಮವಾಗಿದೆ.

ಕೈಗಾರಿಕಾ ರಂಗವನ್ನು ಸಿದ್ದರಾಮಯ್ಯ ಸರ್ಕಾರ ಕಡೆಗಣಿಸಿಲ್ಲ ಎಂಬುದಕ್ಕೆ ಅವರ ಸರ್ಕಾರ ಪ್ರಕಟಿಸಿರುವ 'ಕೈಗಾರಿಕಾ ನೀತಿ: 2014-2019' ಸಾಕ್ಷಿಯಾಗಿದೆ. ಅದರಲ್ಲಿ ಹಿಂದುಳಿದ ಪ್ರದೇಶಗಳಿಗೆ, ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ ಉದ್ದಿಮೆ ಸ್ಥಾಪಿಸಲು ಅನೇಕ ಬಗೆಯ ರಿಯಾಯಿತಿ, ಸಹಾಯಧನ, ವಿನಾಯಿತಿಗಳನ್ನು ಘೋಷಿಸಲಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೈಗಾರಿಕೆಯ ಕೊಡುಗೆಯನ್ನು ಕನಿಷ್ಠ ಶೇ. 25ಕ್ಕೆರಿಸುವ ಉದ್ದೇಶ ಸದರಿ ನೀತಿಗಿದೆ. ಇಲ್ಲಿ ಒಂದು ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ 1991ರಲ್ಲಿ ಹೊಸ ಆರ್ಥಿಕ ನೀತಿಯನ್ನು ಅಳವಡಿಸಿಕೊಂಡ ಮೇಲೆ ಕೈಗಾರಿಕಾ ವಲಯದಲ್ಲಿ ಬಂಡವಾಳ ಹೂಡುವ ಜವಾಬುದಾರಿಯನ್ನು ಖಾಸಗಿ ವಲಯಕ್ಕೆ ಬಿಟ್ಟು ಕೊಡಲಾಗಿದೆ. ಈ ಕ್ಷೇತ್ರದಲ್ಲಿ ಮಾರುಕಟ್ಟೆ ಶಕ್ತಿಗಳು, ಖಾಸಗಿ ವಲಯ ಪ್ರಾಮುಖ್ಯತೆಯನ್ನು ಗಳಿಸಿಕೊಂಡ ಮೇಲೆ ಅಲ್ಲಿಗೆ ಸರ್ಕಾರಿ ವಲಯದಿಂದ ಬಂಡವಾಳವನ್ನು ಏಕೆ ಅಪೇಕ್ಷಿಸಬೇಕು? ಸರ್ಕಾರದ ಜವಾಬುದಾರಿ ಈಗ ಏನಿದ್ದರೂ ಮಾರುಕಟ್ಟೆ ವ್ಯವಸ್ಥೆ ಹಾಗೂ ಖಾಸಗಿರಂಗವು ಉಂಟುಮಾಡುವ ಎಲ್ಲ ಹಾನಿಯಿಂದ, ಶೋಷಣೆಯಿಂದ, ವಿನಾಶಕಾರಿ ಪರಿಣಾಮಗಳಿಂದ ಜರ್ಜರಿತವಾಗುವ ಜನರ ಹಿತಾಸಕ್ತಿಗಳನ್ನು ರಕ್ಷಿಸುವುದು ಮಾತ್ರವಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ಬಜೆಟ್ ಸರಿಯಾದ ದಾರಿಯಲ್ಲಿ ನಡೆಯುತ್ತಿದೆ ಎಂದು ಹೇಳಬಹುದು. ಅಲ್ಲಿ ಅನೇಕ ಮಿತಿಗಳಿವೆ, ನಿಜ. ಆದರೆ ಉದ್ದಿಮೆಗಳ, ಉದ್ದಿಮೆಗಾರರ ವಕ್ತಾರರು ಹೇಳುವಂತೆ ಸರ್ಕಾರ ಕೈಗಾರಿಕಾ ವಲಯವನ್ನು ಕಡೆಗಣಿಸಿಲ್ಲ. ಆರ್ಥಿಕತೆ ಅಂದರೆ ಉದ್ದಿಮೆ ರಂಗ ಮಾತ್ರವಲ್ಲ ತಾನೆ! ಸತತವಾಗಿ ಬರವನ್ನು ಅನುಭವಿಸುತ್ತಿರುವ ರಾಜ್ಯದಲ್ಲಿ ಹಣಕಾಸು ಸ್ಥಿತಿಗತಿಯು ಸದೃಢವಾಗಿರುವುದು ಸಿದ್ದರಾಮಯ್ಯ ಸರ್ಕಾರದ ಸಾಧನೆಯಾಗಿದೆ.

ಬಜೆಟ್ಟಿನ ವಿಶೇಷ ಲಕ್ಷಣಗಳು ಮತ್ತು ಅಭಿವೃದ್ಧಿಯ ಮಿತಿಗಳು

ಭಾಗ 2

ಕರ್ನಾಟಕದ ಬಜೆಟ್ಟಿನಲ್ಲಿನ 2016-17ನೆಯ ಸಾಲಿನ ಯೋಜನಾ ವೆಚ್ಚದ ಗಾತ್ರ ರೂ. 85,375 ಕೋಟಿ. ಇದರಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳನ್ನು ಒಳಗೊಂಡಂತೆ ಬಜೆಟ್ಟಿನಲ್ಲಿ ತೆಗೆದಿರಿಸಿರುವ ಒಟ್ಟು ಮೊತ್ತ ರೂ. 22,024 ಕೋಟಿ. ಇದು ಒಟ್ಟು ಯೋಜನಾ ವೆಚ್ಚದ ಶೇ. 25.80ರಷ್ಟಾಗುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಮೊತ್ತ ಕ್ರಮವಾಗಿ ರೂ. 13,018 ಕೋಟಿ ಮತ್ತು ರೂ. 14,853 ಕೋಟಿ. ಇಂಧನ ಮತ್ತು ನೀರಾವರಿಗೆ ಬಜೆಟ್ಟಿನಲ್ಲಿ ಕೊಟ್ಟಿರುವ ಮೊತ್ತ ಕ್ರಮವಾಗಿ ರೂ. 12,632 ಕೋಟಿ ಮತ್ತು ರೂ. 14,477 ಕೋಟಿ. ಮೇಲೆ ತಿಳಿಸಿರುವ ಬಾಬತ್ತುಗಳಿಗೆ ಐದು ಅಂಕಿಗಳಲ್ಲಿ ಹಣಕಾಸು ಒದಗಿಸಿದ್ದರೆ ಆರೋಗ್ಯಕ್ಕೆ ಮಾತ್ರ ರೂ. 5,032 ಕೋಟಿ ಮೀಸಲಿಡಲಾಗಿದೆ. ನಮ್ಮ ಸರ್ಕಾರಗಳು (ಕೇಂದ್ರ ಹಾಗೂ ರಾಜ್ಯ) ಮಂಡಿಸುತ್ತಿರುವುದು 'ಸಂಪನ್ಮೂಲ ಆಧರಿಸಿದ ಬಜೆಟ್'. ಇದರಿಂದ ಸಿದ್ದರಾಮಯ್ಯ ಬಜೆಟ್ ಕೂಡ ಹೊರತಾಗಿಲ್ಲ. ಆದರೆ ನಮಗೆ 'ಜನರ ಅಗತ್ಯಗಳನ್ನು ಆಧರಿಸಿದ ಬಜೆಟ್' ಬೇಕು. ಬಡವರ, ದುಸ್ಥಿತಿಯಲ್ಲಿರುವವರ, ಪ.ಜಾ., ಪ.ಪಂ., ಅಲ್ಪಸಂಖ್ಯಾತರ, ಮಹಿಳೆಯರ ಅಗತ್ಯಗಳು ಭಿನ್ನಭಿನ್ನವಾಗಿರುತ್ತವೆ. ಹೇಳಿ ಕೇಳಿ ನಮ್ಮದು ಶ್ರೇಣೀಕೃತ ಸಮಾಜ. ಸರ್ವೇಸಾಮಾನ್ಯವಾಗಿ ಬಜೆಟ್ಟುಗಳು ಅಲ್ಪಾವಧಿಯಲ್ಲಿ ಫಲಿತಾಂಶಗಳನ್ನು ನಿರೀಕ್ಷಿಸುತ್ತಾ ಉಳ್ಳವರ ಹಿತಾಸಕ್ತಿಗಳ ಬಗ್ಗೆ ಜಾಗೃತವಾಗಿರುತ್ತದೆ. ಉಳಿದವರ ಹಿತಾಸಕ್ತಿಗಳನ್ನು ಕಡೆಗಣಿಸಿಯೂ ಸರ್ಕಾರಗಳು ಉಳಿದುಕೊಳ್ಳಬಹುದು. ಆದರೆ ಉಳ್ಳವರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿ ಸರ್ಕಾರಗಳು ಬದುಕುಳಿಯುವುದು ಕಷ್ಟಸಾಧ್ಯ. ನಾಡಿನಲ್ಲಿ ಶೇ. 60ರಷ್ಟಿರುವ ಗ್ರಾಮೀಣರಿಗೆ ಮೀಸಲಿಟ್ಟಿರುವ ಹಣವು ಶೇ. 40ರಷ್ಟಿರುವ ನಗರವಾಸಿಗಳಿಗೆ ಮೀಸಲಿಟ್ಟಿರುವ ಹಣಕ್ಕಿಂತ ಕಡಿಮೆ. ನಗರ ಪ್ರದೇಶಗಳ, ಅದರಲ್ಲೂ ಬೆಂಗಳೂರಿನ ಹಿತಾಸಕ್ತಿಗಳನ್ನು ಒತ್ತಾಯ ಮಾಡುವ ಎನ್.ಆರ್.ನಾರಾಯಣಮೂರ್ತಿ, ಕಿರಣ್ ಮುಜುಂದಾರ್ ಶಾ ಅಥವಾ ಮೋಹನ್‌ದಾಸ್ ಪೈ ಅವರಂತಹ ದೊಡ್ಡ ಬಾಯಿಯಿರುವ ಬಂಡವಾಳಶಾಹಿ ಮುಂದಾಳುಗಳು ಗ್ರಾಮೀಣರಿಗೆ ಇಲ್ಲ. ಇವರಿಗೆಲ್ಲ ಕರ್ನಾಟಕ ಅಂದರೆ ಬೆಂಗಳೂರು ಮಾತ್ರ. ಇವರೆಲ್ಲ ಬೆಂಗಳೂರಿನ ಬಗ್ಗೆ ಮಾತನಾಡುತ್ತಾರೆ ವಿನಃ ಕರ್ನಾಟಕದ ಬಗ್ಗೆ ಯಾವತ್ತೂ ಮಾತನಾಡಿಲ್ಲ, ಮಾತನಾಡುವುದಿಲ್ಲ. ಕಿರಣ್ ಮುಜುಂ[ದಾರ್]
ಶಾ ಅವರು ಎಂದಾದರೂ ಕರ್ನಾಟಕದ
ಮಾತನಾಡಿದ್ದನ್ನು ಕೇಳಿದ್ದೀರಾ!! ಸಿದ್ದರಾಮಯ್ಯನ
ಕರ್ನಾಟಕದ ಬಗ್ಗೆ, ಆಹಿಂದದ ಬಗ್ಗೆ ಮಾತನಾ
ಇವರಿಗೆ ಕೋಪ ಏಕೆ ಬರಬೇಕು? ಹಾಗೆ ನೋಡಿ
ಸಿದ್ದರಾಮಯ್ಯ ಅವರ ಬಜೆಟ್ಟು ಬೆಂಗಳೂರಿನ ಬಗ್ಗೆ
ಮಾತನಾಡುತ್ತದೆ, ಉದ್ದಿಮೆ ಬಗ್ಗೆಯೂ ಮಾತನಾಡು
ಅತ್ಯಂತ ಜಾಗರೂಕತೆಯಿಂದ ಸಿದ್ದರಾಮಯ್ಯ ಅ
ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿಗಳ ನಡುವೆ
ಬಗೆಯ ಸಮತೋಲನವನ್ನು ಸಾಧಿಸಲು ಪ್ರ
ನಡೆಸುತ್ತಿರುವುದು ಕಂಡುಬರುತ್ತದೆ.

ನಿಜಕ್ಕೂ ಕರ್ನಾಟಕದ ಅಭಿವೃದ್ಧಿಯ ಸಮಸ್ಯೆಯೇ
ಮೆಹಬೂಬ್ ಉಲ್ ಹಕ್ ಅವರು 1990
'ವರಮಾನವೇ ಜನರ ಬದುಕಿನ ಮೊತ್ತವಲ್ಲ' ಎ
ಹೇಳಿದ್ದರು. ಅಮರ್ತ್ಯಸೇನ್ ಪ್ರಕಾರ ಅಭಿವೃದ್ಧಿಯಲ್ಲಿ ಜ
ಬದುಕಿನ ಸಮೃದ್ಧತೆ ಮುಖ್ಯವೇ ವಿನಃ ಆರ್ಥಿಕತೆ
ಸಮೃದ್ಧತೆಯಲ್ಲ. ಕರ್ನಾಟಕದ ಆರ್ಥಿಕತೆಯು ಸಮೃದ್ಧವಾ
ಆದರೆ ಜನರ ಬದುಕು ದುಸ್ಥಿತಿಯಿಂದ ಕೂಡಿದೆ.
ಉದ್ದಿಮೆಯ ಪಾಳೆಯಗಾರರು ಬಂಡವಾಳ ಹೂಡಿಕೆ
ಅಭಿವೃದ್ಧಿ ಎಂದು ಹೇಳುತ್ತಾರೆ. ಅದಕ್ಕೆ ಅನುಗುಣ
ಕರ್ನಾಟಕದ ಅಭಿವೃದ್ಧಿ ನಡೆದಿದೆ. ಅಭಿವೃದ್ಧಿ ಅನ್ನು
ಮಹಿಳೆಯರನ್ನು ಸೇರಿಸಿಕೊಂಡು ಜನರಿಗೆ ಸಂಬಂಧಿ
ಸಂಗತಿ. ಜನರನ್ನು ಕೇಂದ್ರವಾಗಿಟ್ಟುಕೊಂಡು ಅಭಿವೃದ್ಧಿ
ರೂಪಿಸುವ ಅಗತ್ಯವಿದೆ.

ಸಿದ್ದರಾಮಯ್ಯ ಸರ್ಕಾರವು ಕಾರ್ಯಕ್ರಮಗಳ
ಘೋಷಿಸುವುದಕ್ಕೆ, ಅವುಗಳಿಗೆ ಸಂಪನ್ಮೂಲ ಒದಗಿಸು
ನೀಡುತ್ತಿರುವಷ್ಟು ಪ್ರಾಮುಖ್ಯತೆಯನ್ನು ಅವುಗಳ ಸಮ
ಅನುಷ್ಠಾನಕ್ಕೆ ಮತ್ತು ಅವುಗಳ ನಿರ್ವಹಣೆಗೆ ನೀಡು
ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಕಾರ್ಯಕ್ಷ
ಅತ್ಯಂತ ಕೆಳಮಟ್ಟದಲ್ಲಿದೆ. ಸಿದ್ದರಾಮಯ್ಯನವರು
ಸಂಗತಿಯ ಕಡೆಗೆ ಹೆಚ್ಚು ಗಮನ ಕೊಡುವ ಅಗತ್ಯ
ಸಮಸ್ಯೆ ಸಂಪನ್ಮೂಲದ್ದಲ್ಲ, ಅದರ ಸಮರ್ಥ ಬ
ಕಾರ್ಯಕ್ರಮಗಳ ಕಾರ್ಯಕ್ಷಮತೆ, ನಿರ್ವಹಣೆ, ಕಾರ್ಯ
ಗಳ ಫಲಶ್ರುತಿ ಮುಖ್ಯ.

ಆರ್ಥಿಕತೆಯಲ್ಲಿನ ಸಂಕಷ್ಟದ ಸಂಗತಿಗ

ಭಾಗ 3

ನಮ್ಮ ಆರ್ಥಿಕತೆಯು ವರಮಾನದ ದೃಷ್ಟಿಯಿ
ಉತ್ತಮ ಸ್ಥಿತಿಯಲ್ಲಿದೆ. ಆದರೆ ಜನರ ಬದುಕು ಮ
ತೀವ್ರ ದುಸ್ಥಿತಿಯಲ್ಲಿದೆ. ಉದಾಹರಣೆಗೆ ಇಂದು ನ
ರಾಜ್ಯದ ಅರ್ಧದಷ್ಟು ಮಹಿಳೆಯರು ಮತ್ತು ಅರ್ಧ
ಹೆಚ್ಚು ಮಕ್ಕಳು ಅಪೌಷ್ಟಿಕತೆಯನ್ನು ಎದುರಿಸುತ್ತಿದ
ಬಜೆಟ್ ಭಾಷಣದಲ್ಲಿನ ಆರೋಗ್ಯ ಮತ್ತು ಕುಟು
ಕಲ್ಯಾಣ ಕಂಡಿಕೆಯಲ್ಲಿ ಅಪೌಷ್ಟಿಕತೆಯ ಬಗ್ಗೆ ಉಲ್ಲೇಖ
ಇಲ್ಲ. ಪ್ರಾದೇಶಿಕ ಅಸಮಾನತೆ ನಿವಾರಣೆ ಕಾರ್ಯಕ್ರಮ
ರೂ. 4,000 ಕೋಟಿ ನೀಡಲಾಗಿದೆ. ಇದು ಸರಿ. ಆ
ಸದರಿ ಮೊತ್ತವನ್ನು ಹಿಂದುಳಿದ ಪ್ರದೇಶಗಳಲ್ಲಿ ಯಾವ
ಮೇಲೆ ವಿನಿಯೋಗಿಸಲಾಗುತ್ತದೆ? ಈ ಹಿಂದೆ ಇದ
ನೀಡಿದ ಹಣವನ್ನು ಖರ್ಚು ಮಾಡಿಲ್ಲವೇಕೆ? ಪ್ರಾದೇ
ಅಸಮಾನತೆ ನಿವಾರಣೆ ಕಾರ್ಯಕ್ರಮದಲ್ಲಿ ಕಾಮಗಾರಿಗ
ಅಭಿವೃದ್ಧಿಯೆಂದು ತಿಳಿಯಲಾಗಿದೆ. ಅಲ್ಲಿ ಅನಕ್ಷರತೆ
ಅಧಿಕವಾಗಿದೆ. ಅಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿ
ಮಕ್ಕಳ ಪ್ರಮಾಣ ಅಧಿಕವಾಗಿದೆ. ಬದುಕನ್ನು ಅರಸಿಕೊ
ಹಿಂದುಳಿದ ಪ್ರದೇಶಗಳಿಂದ ಜನರು ವಲಸೆ ಹೋಗುತ್ತಿದ್ದ
ಇವುಗಳ ಬಗ್ಗೆ ಬಜೆಟ್ಟು ಮೌನವಾಗಿದೆ.

ಸಿದ್ದರಾಮಯ್ಯನವರ ಬಜೆಟ್ಟನ್ನು ಲೋಕಾರೂಢಿಯ
ಟೀಕಿಸುವ ವಿರೋಧ ಪಕ್ಷಗಳು ಗಮನಿಸದ ಅ
ಗಮನಿಸಿದರೂ ಚಿಂತಿಸದ ಅನೇಕ ಮಹತ್ವದ ಸಮಸ್ಯೆ
ಅವರ ಬಜೆಟ್ಟಿನಲ್ಲಿವೆ. ಮೊದಲನೆಯದಾಗಿ ಆ
ಪದಾರ್ಥದ ಉತ್ಪಾದನೆ. ನಮ್ಮ ರಾಜ್ಯದಲ್ಲಿ ಆ
ಉತ್ಪಾದನೆ ಕುಸಿಯುತ್ತಾ ನಡೆದಿದೆ. ಅದು 2010-11
ಸುಮಾರು 140 ಲಕ್ಷ ಟನ್ನುಗಳಷ್ಟಿತ್ತು, ಇಂದು ಅ
110 ಲಕ್ಷ ಟನ್ನುಗಳಿಗೆ ಇಳಿದಿದೆ. ಇದು ಅತ್ಯಂತ ಆತ
ಸಂಗತಿ. ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದ
1960ರಿಂದ ನಾವು ಸಾವಿರಾರು ಕೋಟಿ ರೂಪಾ
ಬಂಡವಾಳವನ್ನು ನೀರಾವರಿಯ ಮೇಲೆ ವಿನಿಯೋಗಿಸ
ಬಂಧಿದ್ದೇವೆ. ಪ್ರತಿ ಹೆಕ್ಟೇರ್ ಜಮೀನಿಗೆ ನೀರಾ
ಯೋಜನೆಯಿಂದ ನೀರು ಒದಗಿಸಲು ಹತ್ತಾರು
ರೂಪಾಯಿ ಖರ್ಚಾಗುತ್ತದೆ. ಆದರೆ ಅದು ನ
ಸಮಸ್ಯೆಯನ್ನು ನೀಗಿದಂತೆ ಕಾಣಲಿಲ್ಲ. ಇಡೀ ದೇಶ
ಒಣ ಭೂಮಿ ಕೃಷಿ ಅತ್ಯಧಿಕವಿರುವ ಎರಡನೆಯ ದ
ರಾಜ್ಯ ಕರ್ನಾಟಕ. ಆದರೆ ನಾವು ಬಂಡವಾ
ವಿನಿಯೋಗಿಸುತ್ತಿರುವುದು ನೀರಾವರಿ ಯೋಜನೆಗಳ ಮೆ

ಎಲ್ಲ ದುರಂತಗಳಿಗೂ ಸಿದ್ದರಾಮಯ್ಯ ಜವಾಬುದಾರಿ!!

ನಮ್ಮ ರಾಜ್ಯದ ಮಾಧ್ಯಮ ಮತ್ತು ಟಿವಿ ವಾಹಿನಿಗಳು ಸಿದ್ದರಾಮಯ್ಯ ಸರ್ಕಾರದ ಬಗ್ಗೆ ಮಾತನಾಡುವುದಕ್ಕಿಂತ ಸಿದ್ದರಾಮಯ್ಯ ಅವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುವುದು ಅಧಿಕ. ಐಎಎಸ್ ಅಧಿಕಾರಿ ಡಿ.ಕೆ.ರವಿ ಅವರ ಆತ್ಮಹತ್ಯೆಗೆ ಸಿದ್ದರಾಮಯ್ಯ ಜವಾಬುದಾರಿ, ಬೆಂಗಳೂರಿನ ಶಾಲೆಗಳಲ್ಲಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆದರೆ ಸಿದ್ದರಾಮಯ್ಯ ಜವಾಬುದಾರಿ, ಪಿಯುಸಿ ಪ್ರಶ್ನೆ ಪತ್ರಿಕೆ ಬಯಲಾದರೆ ಸಿದ್ದರಾಮಯ್ಯ ಜವಾಬುದಾರಿ, ಅಣೆಕಟ್ಟೆಗಳು ತುಂಬದಿದ್ದರೆ ಸಿದ್ದರಾಮಯ್ಯ ಜವಾಬುದಾರಿ, ಲೋಕಾಯುಕ್ತರ ಭ್ರಷ್ಟಾಚಾರದ ಬಗೆಗಿನ ಆರೋಪ ಬಂದರೆ ಅದಕ್ಕೂ ಸಿದ್ದರಾಮಯ್ಯ ಹೊಣೆ, ಎಲ್ಲೋ ಬಸ್ಸಿನ ಅಪಘಾತ ನಡೆದರೆ ಅದಕ್ಕೆ ಸಿದ್ದರಾಮಯ್ಯ ಹೊಣೆ- ಹೀಗೆ ಟಿವಿವಾಹಿನಿಗಳಲ್ಲಿ 'ಅಬ್ಬರಿಸುವುದು ನಮ್ಮ ಹಕ್ಕು' ಅನ್ನುವ ನೀತಿಯನ್ನು ಪಾಲಿಸುತ್ತಾ ಸಿದ್ದರಾಮಯ್ಯ ಅವರನ್ನು ಕಟಕಟೆಯಲ್ಲಿ ನಿಲ್ಲಿಸಿ ಟೀಕೆ ಮಾಡಲಾಗುತ್ತಿದೆ. ಲಂಗು-ಲಗಾಮು ಇಲ್ಲದಂತೆ ಉಳ್ಳವರು, ಉನ್ನತವರ್ಗದ ಜನರು ಮಾಧ್ಯಮವನ್ನು ಗುತ್ತಿಗೆ ಹಿಡಿದುಕೊಂಡು ಬೇಜವಾಬುದಾರಿಯಿಂದ ಮಾತನಾಡುತ್ತಿದ್ದಾರೆ. ಹಿಂದೆ ಒಬ್ಬ ಮಂತ್ರಿ ರೂ. 45 ಕೋಟಿ ಬೆಲೆಬಾಳುವ ವಜ್ರದ ಕಿರೀಟವನ್ನು ತಿರುಪತಿ ತಿಮಪ್ಪನಿಗೆ ಕಾಣಿಕೆ ಸಲ್ಲಿಸಿದಾಗ ಆ ಹಣದ ಮೂಲದ ಬಗ್ಗೆ ಯಾರೂ ಮಾತನಾಡಲಿಲ್ಲ, ಸರಿಸುಮಾರು ರೂ. 15,000 ಕೋಟಿ ಗಣಿಗಾರಿಕೆಯ ಸಂಪತ್ತು ಲೂಟಿಯಾದಾಗ ಅದನ್ನು ಬಯಲು ಮಾಡಲು ನ್ಯಾಯಮೂರ್ತಿ ಹೆಗ್ಡೆ, ಹೋರಾಟಗಾರ ಎಸ್.ಆರ್. ಹಿರೇಮಠ್ ಬೇಕಾಯಿತು. ಆದರೆ ಸ್ನೇಹಿತರೊಬ್ಬರು ಸಿದ್ದರಾಮಯ್ಯ ಅವರಿಗೆ ಗಡಿಯಾರ ಕಾಣಿಕೆ ನೀಡಿದ್ದನ್ನು ಬೀದಿರಂಪ ಮಾಡಲಾಯಿತು. ಆದರೆ ಯಾವ ರಾಡಿಯೂ ಅವರ ವ್ಯಕ್ತಿತ್ವಕ್ಕೆ ಕುಂದು-ಕಳಂಕ ತರಲಿಲ್ಲ.



ದಿಗೂ ಮುಕ್ಕಾಲುಮೂರುವೀಸೆ ಪಾಲು ದ್ವಿದಳ ಧಾನ್ಯ ಸುವುದು ಒಣಭೂಮಿ ಪ್ರದೇಶದಿಂದ ಎಂಬುದನ್ನು ನಿಸಬೇಕು. ನಮ್ಮ ಕೃಷಿ ನೀತಿಯಲ್ಲಿನ ಮಹತ್ವದ ಸ್ಯೆಯೆಂದರೆ ನೀರಾವರಿಯು ನಮ್ಮ ಕೃಷಿಯ ಎಲ್ಲ ಸ್ಯೆಗಳಿಗೂ ಪರಿಹಾರ ಎಂದು ತಿಳಿದುಕೊಂಡಿರುವುದು. ು ದಶಕಗಳಾದರೂ ನಮಗೆ ಇನ್ನೂ ಬುದ್ಧಿ ಬಂದಿಲ್ಲ. ಭೂಮಿ ಬೇಸಾಯಕ್ಕೆ ನಾವು ಪ್ರಾಮುಖ್ಯತೆ ನೀಡುತ್ತಿಲ್ಲ. ರ ಮೇಲೆ ಬಂಡವಾಳ ಹೂಡುತ್ತಿಲ್ಲ. ನಮ್ಮ ನಾಡು ುರಿಸುತ್ತಿರುವ ಪ್ರಮುಖ ಎರಡು ಸಮಸ್ಯೆಗಳಿಗೆ ಭೂಮಿ ಬೇಸಾಯವು ಉತ್ತರವಾಗಬಲ್ಲದು: ದಲನೆಯದು ಆಹಾರ ಪದಾರ್ಥದ ಉತ್ಪಾದನೆ. ಡನೆಯದು ಅಂತರ್ ಜಲದ ಸಂವರ್ಧನೆ ಮೂಲಕ ಡಿಯುವ ನೀರಿನ ಸಮಸ್ಯೆಯ ನಿವಾರಣೆ. ರಾಜ್ಯದ ಡಿಯುವ ನೀರಿನ ತೀವ್ರ ಬರ ಎದುರಿಸುತ್ತಿರುವ ಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮೀಣ ಜ್ಯದ ಅನೇಕ ಜಿಲ್ಲೆಗಳು ಇದನ್ನು ಎದುರಿಸುತ್ತಿವೆ) ಂತಾದ ಜಿಲ್ಲೆಗಳ ನೀರಿನ ಸಮಸ್ಯೆಯನ್ನು ನದಿ ನೀರಿನ ೀಜನೆಗಳಿಂದ ಬಗೆಹರಿಸಲು ಸಾಧ್ಯವಿಲ್ಲ. ಅದಕ್ಕೆ ಮಳೆ ರಿನ ಕೊಯ್ಲು, ಅಂತರ್‌ಜಲದ ಸಂವರ್ಧನೆ, ಸಂರಕ್ಷಣೆ, -ಕಟ್ಟೆ, ಹಳ್ಳ-ಕೊಳ್ಳಗಳ ಪುನರುಜ್ಜೀವನ ಮುಂತಾದ ುಗಳಿಂದ ಮಾತ್ರ ಅದನ್ನು ಬಗೆಹರಿಸಬಹುದು. ಿಗಳಲ್ಲಿಯೇ ನೀರು ಇಲ್ಲದಿರುವಾಗ ಹೇಗೆ ಕ್ಕಬಳ್ಳಾಪುರಕ್ಕೆ ನೀರು ತರುತ್ತೀರಿ!! ನಜೀರ್ ಸಾಬ್ ರು ಹೇಗೆ ಕೊಳವೆಬಾವಿಗಳ ಕ್ರಾಂತಿ ಮೂಲಕ ಒಂದು ಲಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿ ೀರ್ ಸಾಬ್' ಅನ್ನಿಸಿಕೊಂಡರೋ (ಅದು ಈಗ ಸಮಸ್ಯೆಯ ಿಹಾರವಾಗಿ ಉಳಿದಿಲ್ಲ!) ಅದೇರೀತಿಯಲ್ಲಿ ಸಿದ್ದರಾಮಯ್ಯ ವರು ಒಣಭೂಮಿ ಬೇಸಾಯ, ಮಳೆ ನೀರು ಕೊಯ್ಲು, ತರ್‌ಜಲದ ಸಂವರ್ಧನೆ, ಸಂರಕ್ಷಣೆ, ಕೆರೆ-ಕಟ್ಟೆಗಳ ರಕ್ಷಣೆ, ಹತ್ ಪ್ರಮಾಣದಲ್ಲಿ ಸೌರಶಕ್ತಿ ಉತ್ಪಾದನೆ ಮುಂತಾದ ವುಗಳ ಮೂಲಕ ಒಣಭೂಮಿ ಬೇಸಾಯದ ಿಕಾರರಾಗಬಹುದು. ನೀರಾವರಿ, ಅಣುಶಕ್ತಿ, ಶಾಖೋತ್ಪನ್ನ ದ್ಯುತ್ ಮುಂತಾದವು ನಮ್ಮ ಸಮಸ್ಯೆಗಳಿಗೆ ತ್ತರವಾಗುವುದಿಲ್ಲ. ಶುಮಾಂಕರ್ ಹೇಳುವ 'ಸಣ್ಣದು ಂದರ್' ಅನ್ನುವುದನ್ನು ನಾವು ನಂಬಬೇಕು. ನೀರಾವರಿಯು ಳ್ಳವರ ಜೋಬು-ಹೊಟ್ಟೆ ತುಂಬಿಸಬಹುದೇ ವಿನಃ ಳಿದವರ ಬದುಕನ್ನು ಸಮೃದ್ಧಗೊಳಿಸಲಾರದು. ದ್ದರಾಮಯ್ಯನವರು ಪ್ರತಿಪಾದಿಸುತ್ತಿರುವ ಅಹಿಂದ ನಸಮೂಹದಲ್ಲಿ ಶೇ. 60 ರಿಂದ 70ರಷ್ಟು ಒಣಭೂಮಿ ೀಸಾಯವನ್ನು ಅವಲಂಬಿಸಿಕೊಂಡಿರುವರು ಇದ್ದಾರೆ. ಈ ಗೆಯ ಅಭಿವೃದ್ಧಿ ತಂತ್ರವು ಪರಿಸರಸ್ನೇಹಿಯೂ ಆಗಿದೆ. ಮ್ಮ 2016-17ನೆಯ ಸಾಲಿನ ಬಜೆಟ್ಟಿನಲ್ಲಿ ಅವರು ಲಸಂಪನ್ಮೂಲ ಅಭಿವೃದ್ಧಿಗೆ ರೂ. 14,477 ಕೋಟಿ ಾ ಮೀಸಲಿಟ್ಟಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ರಾವರಿಯ ಮೇಲೆ ರೂ. 46,931 ಕೋಟಿ ಿಯೋಗಿಸಿರುವುದಾಗಿ ಸಿದ್ದರಾಮಯ್ಯ ಅವರು ಬಹಳ ತ್ಸಾಹದಿಂದ ಹೇಳಿದ್ದಾರೆ. ಅದರಿಂದ ಏನಾಗಿದೆ? ದರಿಂದ ನಮ್ಮ ಕೃಷಿಯ, ಕೃಷಿಕರ, ನೀರಿನ, ಜಾನುವಾರುಗಳ ಮಸ್ಯೆಗಳು ನಿವಾರಣೆಯಾಗಿವೆಯೇ? ಈ ಸಮಸ್ಯೆಗಳ ಗ್ಗೆ ಪರ್ಯಾಯ ಕ್ರಮಗಳನ್ನು ಕುರಿತಂತೆ ಚಿಂತಿಸದೆ ಂಪ್ರದಾಯಿಕ ರೀತಿಯಲ್ಲಿ ಬಜೆಟ್ಟನ್ನು ಮಂಡಿಸಲಾಗಿದೆ. ಮ್ಮಲ್ಲಿ ಎರಡನೆಯ ಹಸಿರು ಕ್ರಾಂತಿ ಅನ್ನುವುದೇನಾದರೂ ನುಭವಿಸಬೇಕು ಎಂದಾದರೆ ಅದು ಒಣಭೂಮಿ ಬೇಸಾಯದ ಬೆಳವಣಿಗೆಯಿಂದ ಮಾತ್ರ ಸಾಧ್ಯ.

ಇಂದು ಕೃಷಿ ಅಂದರೆ ಉಳುಮೆ, ಬೆಳೆ ಬೆಳೆಯುವುದು ಎಂದು ತಿಳಿಯಲಾಗಿದೆ. ಕೃಷಿ ಅನ್ನುವುದು ಕುರಿ ಸಾಕಣೆಕೆ, ಕೋಳಿ ಸಾಕಣೆಕೆ, ಮೀನುಗಾರಿಕೆ, ಪಶುಸಂಗೋಪನೆ, ರೇಷ್ಮೆ ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ಬಗೆಯ ವೈವಿಧ್ಯಮಯ ಕೃಷಿಯನ್ನು ಬಿಟ್ಟು ಇಂದು ಮ್ಮ ರೈತರು ಏಕಾಕಾರಿ ಕೃಷಿಯನ್ನು ನಂಬಿಕೊಂಡಿದ್ದಾರೆ. ಇದೆ ಕೃಷಿಯ ಮೂಲ ಸಮಸ್ಯೆ. ಒಂದು ಕಾಲಕ್ಕೆ ನಮ್ಮ ರೈತರು ಕೃಷಿಯ ಜೊತೆಯಲ್ಲಿ ಎರಡು ಕುರಿ, ನಾಲ್ಕು ಕೋಳಿ, ಎರಡು ಎಮ್ಮೆ ಇಟ್ಟುಕೊಂಡು ಬದುಕು ಸಾಗಿಸುತ್ತಿದ್ದರು.

ಎರಡನೆಯದು ನಗರ ಪ್ರದೇಶದ ಅಭಿವೃದ್ಧಿಗೆ ಬಜೆಟ್ಟಿನಲ್ಲಿ ರೂ. 14,853 ಕೋಟಿ ಹಣವನ್ನು ನೀಡಲಾಗಿದೆ. ಇದರಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ರೂ. 6,044 ಕೋಟಿ ಮೀಸಲಿರಿಸಲಾಗಿದೆ. ರಾಜ್ಯದ ಪ್ರತಿ ಆರು ಜನ ಕರ್ನಾಟಕಸ್ಥರಲ್ಲಿ ಒಬ್ಬರು ಬೆಂಗಳೂರಿನವರಾಗಿದ್ದಾರೆ. ರಸ್ತೆಗಳ ಅಗಲೀಕರಣ, ಫ್ಲೈಓವರ್‌ಗಳ ನಿರ್ಮಾಣ, ಅಂಡರ್‌ವೇಗಳನ್ನು ರೂಪಿಸುವುದು, ಲಂಬಾಕಾರವಾದ ವಸತಿ ಸಮುಚ್ಚಯಗಳ ಬೆಳವಣಿಗೆ, ಮೆಟ್ರೋ ಸಾರಿಗೆ, ನಾಡಿನ ಎಲ್ಲ ನದಿಗಳ ನೀರನ್ನು ಬೆಂಗಳೂರಿನತ್ತ ತಿರುಗಿಸುವುದು, ಸರ್ಕಾರದ ಎಲ್ಲ ಕಚೇರಿಗಳು, ನಿಗಮ-ಮಂಡಳಿಗಳು, ಕಾರ್ಪೋರೇಷನ್ನುಗಳು ಹೀಗೆ ಎಲ್ಲವನ್ನೂ ಬೆಂಗಳೂರಿನಲ್ಲಿಯೇ ಸ್ಥಾಪಿಸುವುದು ಅಂದರೆ ಅದರ ಸಮಸ್ಯೆಗಳು ನಿವಾರಣೆಯಾಗುವುದು ಸಾಧ್ಯವೆ? ಬೆಂಗಳೂರಿನ ಬೆಳವಣಿಗೆಯನ್ನು ರವಷ್ಟಾದರೂ ತಡೆಯುವುದರ ಬಗ್ಗೆ ಅದರ ಸುತ್ತಮುತ್ತ ಇರುವ ಸೆಟಲೈಟ್ ನಗರಗಳನ್ನು ಬೆಳೆಸುವುದರ ಬಗ್ಗೆ ನಾಡಿನ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಬೆಂಗಳೂರಿಗೆ ಜನರ ವಲಸೆಯನ್ನು ತಡೆಯುವುದರ ಬಗ್ಗೆ ಯಾಕೆ ಸರ್ಕಾರ ಯೋಚಿಸಬಾರದು? ನನ್ನ ಮಗಳು ಹೇಳುವಂತೆ ಬೆಂಗಳೂರಿನಲ್ಲಿ ನಡೆದಾಡಲು, ಕೈಯಿಂದ ಮುಟ್ಟಲು ಕೂಡ ಮಣ್ಣು ದೊರೆಯುವುದಿಲ್ಲ. ಮಣ್ಣಿನ ಸಂಪರ್ಕವಿಲ್ಲದೆ ಜನರು ಬದುಕುತ್ತಿದ್ದಾರೆ. ನಮ್ಮ ಮಕ್ಕಳು ಚಿತ್ರಗಳಲ್ಲಿ ಮಣ್ಣನ್ನು ಗುರುತಿಸುವ ಕಾಲ ದೂರವಿಲ್ಲ ಎಂದು ಕಾಣುತ್ತದೆ!

ಬೆಂಗಳೂರಿನಲ್ಲಿರುವ ಎಲ್ಲ ಕಾರ್ಪೋರೇಟ್ ದಿಗ್ಗಜಗಳಿಗೆ ಸಿದ್ದರಾಮಯ್ಯನವರ ಬಗ್ಗೆ ವಿಶ್ವಾಸವಿಲ್ಲ. ಅನೇಕರು ಸಿದ್ದರಾಮಯ್ಯನವರ ವಿರುದ್ಧ ಕಿಡಿ ಕಾರುತ್ತಿದ್ದಾರೆ. ಉದ್ದಿಮೆಗಳೆಲ್ಲ ಬೆಂಗಳೂರು ಬಿಟ್ಟು ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿವೆ ಎಂಬ ಬೆದರುಗೊಂಬೆಯನ್ನು ನಿಲ್ಲಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರು ಕೇವಲ 'ಭಾಗ್ಯ'ಗಳ ಬಗ್ಗೆ ಮಾತನಾಡುತ್ತಾರೆ ಎಂಬುದು ಅವರ ಮೇಲಿರುವ ಮತ್ತೊಂದು ಟೀಕೆ. ಉಳ್ಳವರು, ಹೊಟ್ಟೆ ತುಂಬಿದವರು, ಬಂಡವಾಳಶಾಹಿಗಳು, ಮೇಲುಮಧ್ಯಮವರ್ಗ ಮುಂತಾದವರು ಸಹಜವಾಗಿ ಬಡವರ ಬಗ್ಗೆ, ಅಂಚಿನಲ್ಲಿರುವವರ ಬಗ್ಗೆ, ಸಾಮಾಜಿಕ ಪ್ರತ್ಯೇಕತೆ ಅನುಭವಿಸುವವರ, ಅಲ್ಪಸಂಖ್ಯಾತರ ಬಗ್ಗೆ ಅಸೂಯೆಯಿಂದ ಕರುಬುತ್ತಿದ್ದಾರೆ. ಇದಾವುದಕ್ಕೂ ಸಿದ್ದರಾಮಯ್ಯ ಸರ್ಕಾರ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಉಳ್ಳವರಿಗೆ 'ವರಮಾನದ ಮೊತ್ತವೇ ಜನರ ಬದುಕು'. ಆದರೆ ಆಹಾರ, ಅಕ್ಷರ, ಆರೋಗ್ಯ ಆಶ್ರಯ-ಇವು ಅಭಿವೃದ್ಧಿಯ ಅಂತರ್ಗತ ಭಾಗ ಅನ್ನುವುದು ಸಿದ್ದರಾಮಯ್ಯ ಅವರ ಜನರನ್ನು ಒಳಗೊಳ್ಳುವ ಸಿದ್ಧಾಂತದ ಸಾರವಾಗಿದೆ. ಬೆಂಗಳೂರಿನ ಬೆಳವಣಿಗೆಯನ್ನು ತಡೆಯುವುದರ ಬಗ್ಗೆ ನಾವು ತೀವ್ರವಾಗಿ ಯೋಚಿಸಬೇಕು. ನಮ್ಮ ರಾಜ್ಯದಲ್ಲಿ 2001 ರಿಂದ 2011ರ ಅವಧಿಯಲ್ಲಿ ಗ್ರಾಮೀಣ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ. 7.40 ರಷ್ಟಿದ್ದರೆ ನಗರ ಪ್ರದೇಶದ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ. 31.54ರಷ್ಟಿದೆ. ಅಂದರೆ 2021ರಲ್ಲಿ ಗ್ರಾಮೀಣ ಜನಸಂಖ್ಯೆಯ ಬೆಳವಣಿಗೆಯು ಅತ್ಯಂತ ಕಡಿಮೆಯಾಗುವ ಸಾಧ್ಯತೆಯಿದೆ ಮತ್ತು ನಗರ ಪ್ರದೇಶದ ಜನಸಂಖ್ಯೆಯು ಮಿತಿಮೀರಿ ಬೆಳೆಯುವ ಸಾಧ್ಯತೆಯಿದೆ. ಇದು ಆರೋಗ್ಯಕಾರಿ ಬೆಳವಣಿಗೆಯಲ್ಲ. ಇಂದು ನಾವು ಪರ್ಯಾಯ ಅಭಿವೃದ್ಧಿ ಕ್ರಮಗಳ ಬಗ್ಗೆ, ಆವಿಷ್ಕಾರಾತ್ಮಕ ಕ್ರಮಗಳ ಬಗ್ಗೆ ಚಿಂತಿಸುವ ಅಗತ್ಯವಿದೆ. ಬಜೆಟ್ಟಿನಲ್ಲಿ ಇದರ ಬಗ್ಗೆ ಯಾವುದೇ ಸೃಜನಶೀಲ ಕ್ರಮಗಳು ಕಂಡುಬರುವುದಿಲ್ಲ.

ಅಭಿವೃದ್ಧಿ ಎಂದರೆ ಕಾಮಗಾರಿಗಳು, ವರಮಾನ, ಉತ್ಪಾದನೆ, ಬಂಡವಾಳ ಇಷ್ಟೇ ಅಲ್ಲ. ಎಲ್ಲರನ್ನು ಒಳಗೊಳ್ಳುವುದು ಸಿದ್ದರಾಮಯ್ಯ ಸರ್ಕಾರದ ಘೋಷವಾಕ್ಯ. ಅದಕ್ಕಾಗಿ ನಾಡಿನ ವಿವಿಧ ಸಾಮಾಜಿಕ ಗುಂಪುಗಳಿಗೆ ಸರ್ಕಾರ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದೆ. ಇವೆಲ್ಲ ಜನರ 'ಅಗತ್ಯಗಳನ್ನು' ಆಧರಿಸಿದ ಕ್ರಮಗಳಲ್ಲ. ಇದು ಲಭ್ಯವಿರುವ ಸಂಪನ್ಮೂಲವನ್ನು ಹಂಚುವ ಬಜೆಟ್ಟು. ಇದರಿಂದ ಜನರನ್ನು ಒಳಗೊಳ್ಳುವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಬರುವುದಿಲ್ಲ.

■ *ಟಿ.ಆರ್.ಚಂದ್ರಶೇಖರ*, ಸಮಾಲೋಚಕರು, ನಾಲ್ಕನೆಯ ರಾಜ್ಯ ಹಣಕಾಸು ಆಯೋಗ, ಬೆಂಗಳೂರು


ಹಸಿರು ಬಣ್ಣ ಜೀವಂತಿಕೆಯ ಸಂಕೇತ, ಸಂಘಿಗಳ ಕೇಸರಿ ಬಣ್ಣ ಸಾವಿನ ಸಂಕೇತ

ಒಂದು ಪತ್ರ

ವಿಎಚ್‌ಪಿ ನೇತಾರ ಕಾವಿಧಾರಿ ವಜ್ರದೇಹಿಸ್ವಾಮಿ ಎಂಬಾತ ಮಂಗಳೂರು ಜಿಲ್ಲಾಧಿಕಾರಿ ಇಬ್ರಾಹಿಂರಿಗೆ ಸವಾಲು ಹಾಕುತ್ತಾ "ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಗರ್ಭಗುಡಿಯ ಮುಂದೆ ನಿಂತು ನೀವು ಶಿವನ ಪ್ರಸಾದ ಸ್ವೀಕರಿಸಲು ಸಿದ್ಧರಿದ್ದೀರಾ?" ಎಂದು ಕೇಳಿದ್ದಾನೆ. ಇದಕ್ಕೆ ಮುಂಚೆ ಈ ವಜ್ರದೇಹಿಯೇ ಸ್ವತಃ ಒಂದು ಸವಾಲು ಸ್ವೀಕರಿಸಲಿ.

ಈ ಶೂದ್ರ ಬಂಟ ಜಾತಿಯ ಸ್ವಾಮೀಜಿ ತನ್ನ ಹಣೆಯಲ್ಲಿ ಮಾಧ್ವ ಬ್ರಾಹ್ಮಣ ವೈಷ್ಣವ ಚಿಹ್ನೆ ಧರಿಸುತ್ತಾರೆ. ಅವರಿಗೆ ಈ ದೀಕ್ಷೆ ಯಾರು ಕೊಟ್ಟಿದ್ದೋ ಗೊತ್ತಿಲ್ಲ. ಆದರೆ ಪುತ್ತೂರು ಮಹಾಲಿಂಗೇಶ್ವರ ಒಂದು ಶೈವ ದೇವರು. ಶೈವ ದೇವರಿಗೆ ವಿಭೂತಿ ಮಾತ್ರ ಇಷ್ಟ. ವೈಷ್ಣವರ ಗಂಧ ಮತ್ತು ತುಲಸಿ ಶೈವ ದೇವರಿಗೆ ಸುತರಾಂ ಇಷ್ಟವಿಲ್ಲ. ಹಾಗಾದರೆ ವಜ್ರದೇಹಿ ಸ್ವಾಮಿಗಳೇ, ನೀವು ನಿಮ್ಮ ಹಣೆಯ ಮೇಲಿನ ವೈಷ್ಣವ ಮುದ್ರೆ ಅಳಿಸಿ ಹಾಕಿ ಶೈವ ಮುದ್ರೆಯಾದ ವಿಭೂತಿ ಬಳಿದುಕೊಂಡು ಕೊರಳಲ್ಲಿ ಶೈವರಂತೆ ಲಿಂಗಧಾರಣೆ ಮಾಡಿ ಗರ್ಭಗುಡಿಯ ಮುಂದೆ ನಿಂತು ಮಹಾಲಿಂಗೇಶ್ವರನ ಪ್ರಸಾದ ಸ್ವೀಕರಿಸುವ ನೈತಿಕತೆ ನಿಮಗೆ ಇದೆಯೇ?

"ಈಗಿನ ಕರಪತ್ರದ ಗೊಂದಲ ನಿವಾರಿಸದಿದ್ದರೆ ಮುಂದೊಂದು ದಿನ ದೇವರನ್ನೇ ಸರಕಾರಿ ಅಧಿಕಾರಿಗಳು



ಮಾರಿ ಬಿಡಬಹುದು" ಎಂದು ವಜ್ರದೇಹಿ ಹೇಳಿದ್ದಾರೆ. ಆದರೆ ನಿಜ ಹೇಳಬೇಕೆಂದರೆ ಇದೇ ಕಾವಿಧಾರಿ ಆಷಾಢಭೂತಿಗಳು ಹಾಗೂ ವೈಷ್ಣವ ಅರ್ಚಕರು ದೇವರನ್ನು ಈಗಾಗಲೇ ಬೆಂಗಳೂರಿನ ಭೂಗತದೊರೆಗಳಿಗೆ ಹಾಗೂ ಮುಂಬೈಯ ಲೇಡೀಸ್ ಬಾರ್ ಶೆಟ್ಟಿಗಳಿಗೆ ಮಾರಿ ಆಗಿದೆ. ಇನ್ನು ಮಾರಲು ಅಲ್ಲಿ ಏನು ಉಳಿದಿದೆ?

ಕಳೆದ ವರ್ಷ ಇದೇ ಜಾತ್ರೆಯ ಸಮಯದಲ್ಲಿ ಮಹಾಲಿಂಗೇಶ್ವರ ದೇವರ ಅವಿಭೃತ ಸ್ನಾನಕ್ಕಾಗಿ ಬೀರಮಂಗಲ ಕೆರೆಗೆ ಸವಾರಿಕೊಂಡು ಹೋಗಿದ್ದಾಗ ಅಲ್ಲಿ ದೇವರಿಗೆ ಸ್ನಾನ ಮಾಡಿಸಲು ಭಕ್ತರು ನೀರಿಗೆ ಇಳಿದಾಗ ಇಬ್ಬರು ಹಿಂದೂ ಯುವಕರು ಅಲ್ಲಿಯೇ ಮುಳುಗಿ ಸತ್ತಿದ್ದರು. ಆದರೆ ಅವರನ್ನು ಉಳಿಸಲು ಬೇರೆ ಯಾವುದೇ ಹಿಂದೂ ಯುವಕರು ಆ ಸಮಯದಲ್ಲಿ ನೀರಿಗಿಳಿಯುವ ಧೈರ್ಯ ಮಾಡಲಿಲ್ಲ. ನಂತರ ಅವರ ಹೆಣವನ್ನು ಮೇಲೆತ್ತಲೂ ಹಿಂದೂ ಯುವಕರು ಮುಂದಾಗಲಿಲ್ಲ. ಹಾಗಾಗಿ ನಂತರ ಪೊಲೀಸರು ಪಾಣೆಮಂಗಳೂರಿನಿಂದ ಇಬ್ಬರು ಮುಸ್ಲಿಂ ಯುವಕರನ್ನು ಕರೆಸಿ ಹೆಣ ಮೇಲೆತ್ತಿಸಿದರು. ಜೀವದ ಹಂಗು ತೊರೆದು ಈ ಮುಸ್ಲಿಂ ಯುವಕರು ನೀರಿಗೆ ಇಳಿಯದಿದ್ದರೆ ಆ ನತದೃಷ್ಟ ಹಿಂದೂ ಯುವಕರ ಹೆಣ ಅಲ್ಲಿಯೇ ಕೊಳೆತು ಹೋಗುತ್ತಿತ್ತು.

ಈಗ ದೇವಸ್ಥಾನ ಆವರಣದ ಒಳಗೆ ಇರುವ ಬಾವಿಯನ್ನು ತೋಡಿದ್ದು ಸಹ ಮುಸ್ಲಿಮರು. ದೇವಸ್ಥಾನದ ಜೀರ್ಣೋದ್ಧಾರ ಸಮಯದಲ್ಲಿ ಅಲ್ಲಿ ಕಾರ್ಮಿಕರಾಗಿ ಶ್ರಮ ಮಾಡಿದ್ದು ಸಹ ಮುಸ್ಲಿಮರೇ. ಆ ಮುಸ್ಲಿಮರು ತೋಡಿದ ಬಾವಿಯ ನೀರಿನಿಂದಲೇ ಇವತ್ತಿಗೂ ದೇವರಿಗೆ ದಿನಾಲೂ ಸ್ನಾನ ಮಾಡಿಸುವುದು ಮತ್ತು ಅರ್ಚಕರುಗಳು ದಿನಾಲೂ ಮೈಗೆ ಮಿಂಡಿ ನೀರು ಸುರಿದುಕೊಳ್ಳುವುದು (ಇದಕ್ಕೆ ಸ್ನಾನ ಎನ್ನುವುದು ಶುದ್ಧ ಮೂರ್ಖತನ). ಮುಸ್ಲಿಮರು ತೋಡಿದ ಬಾವಿಯ ನೀರಿನಿಂದ ಅರ್ಚಕರು ದೇವರಿಗೆ ಸ್ನಾನ ಮಾಡಿಸಬಹುದಾದರೆ ಕರಪತ್ರದಲ್ಲಿ ಮುಸ್ಲಿಂ ಡಿಸಿಯವರ ಹೆಸರು ಇದ್ದರೆ ಸಮಸ್ತ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಹೇಗಾಗುತ್ತದೆ?

ಹೆಚ್ಚಿನ ಹಿಂದೂಗಳಿಗೆ ಮುಸ್ಲಿಂ ಡಿಸಿಯ ಹೆಸರಿನ ಬಗ್ಗೆ ಅಭ್ಯಂತರವೇ ಇಲ್ಲ. ಹಾಗಿರುವಾಗ ಕೇವಲ 10% ಹಿಂದೂಗಳನ್ನು ಮಾತ್ರ ಪ್ರತಿನಿಧಿಸುವ ಸಂಘ ಪರಿವಾರದವರಿಗೆ ಉಳಿದ 90% ಹಿಂದೂಗಳ ಪರವಾಗಿ ಮಾತನಾಡುವ ಅಧಿಕಾರ ಕೊಟ್ಟಿದ್ದು ಯಾರು?

ಮೊನ್ನೆ ಇದೇ ಮಹಾಲಿಂಗೇಶ್ವರ ದೇವಲದ ಬಯಲಿನಲ್ಲಿ ಪ್ರತಿವರ್ಷ ಹಾಕುವಂತೆ ಜಾತ್ರೆಯ ಚಪ್ಪರ ಹಾಕಲು ಕಂಬ ನೆಟ್ಟು ಮೊದಲು ಅದರ ಮೇಲೆ ಹಸಿರು ನೈಲಾನ್ ಬಲೆಯನ್ನು ಅಳವಡಿಸಿದರು. ಕಾರಣ ನೈಲಾನ್ ಬಲೆಯ ಮೇಲೆ ಪಂಡಾಲ್ ಬಟ್ಟೆ ಹಾಸುವುದು ಸುರಕ್ಷಿತತೆಯ ದೃಷ್ಟಿಯಿಂದ ಹೆಚ್ಚು ಗಟ್ಟಿಮುಟ್ಟಾಗಿರುತ್ತದೆ. ಆದರೆ ಕೇಸರಿಪಡೆಗಳು ಈ ಹಸಿರು ಬಣ್ಣದ ಬಲೆಗೂ ಇಸ್ಲಾಂ ಧರ್ಮದ ಬಣ್ಣ ಬಳಿದು ಗಲಾಟೆ ಮಾಡಿದರು ಹಾಗೂ ಹಿಂದಿನ ವರ್ಷದಂತೆ ಚಪ್ಪರಕ್ಕೆ ಒಣಗಿದ ತೆಂಗಿನ ಗರಿಗಳನ್ನು ಅಳವಡಿಸುವಂತೆ ಒತ್ತಾಯಿಸಿದರು. ಬೆಸ್ತರು ಉಪಯೋಗಿಸುವ ಇಂತಹ ನೈಲಾನ್ ಬಲೆಗಳು ನಮ್ಮ ದೇಶದೆಲ್ಲೆಡೆ ಸಿಗುವುದು ಕೇವಲ ಹಸಿರು ಬಣ್ಣದಲ್ಲಿ ಮಾತ್ರ ಎಂಬ ಸಾಮಾನ್ಯ ಜ್ಞಾನವೂ ಕೇಸರಿ ಸಂಘಿಗಳಿಗೆ ಇಲ್ಲದಿರುವುದು ಆಶ್ಚರ್ಯ!

ಅಷ್ಟೇ ಅಲ್ಲ, ಬಹುಶಃ ಇವರಿಗೆ ಗೊತ್ತಿಲ್ಲದಿರುವ ಆದಿಮ ಪ್ರಕೃತಿಯ ರಂಗುರಂಗಿನ ಮೂಲ ನಿಯಮವೆಂದರೆ ಹಸಿರು ಬಣ್ಣ ಮಾತ್ರ ಪ್ರಕೃತಿಯಲ್ಲಿಯ ಜೀವಂತಿಕೆ ಹಾಗೂ ಫಲವಂತಿಕೆಯ ಸಂಕೇತ. ಜಗತ್ತಿನೆಲ್ಲೆಡೆ ನಳನಳಿಸುವ ಗಿಡಮರಗಳ ಎಲೆಗಳು ಮತ್ತು ಕಾಯಿಗಳು ಇರುವುದೇ ಹಸಿರು ಬಣ್ಣದಲ್ಲಿ. ಸಂಘಿಗಳ ಕೇಸರಿ-ಹಳದಿ ಬಣ್ಣವೆಂದರೆ ಆಯುಷ್ಯ ಮುಗಿದು ಸತ್ತು ಉದುರಿದ ಗಿಡದ ತರಗೆಲೆಯ ಬಣ್ಣ. ಅಂದರೆ ಸಸ್ಯಗಳ ಅವಧಿಯ ಅಂತ್ಯದ ಸಂಕೇತ. ಆದರೆ ಸಸ್ಯಗಳ ಮರುಹುಟ್ಟಿನ ಸಂಕೇತ ಮತ್ತದೇ ಹಸಿರು. ಪ್ರಕೃತಿಯ ಪುರಾತನ ವೈರಿಗಳಾದ ವೈದಿಕರ ಅನೈತಿಕ ಸಂತಾನವಾದ ಸಂಘಪರಿವಾರದವರು ಪ್ರಕೃತಿತಾಯಿಯ ಈ ಬಣ್ಣಗಳ ಸಂಕೇತ ಅರ್ಥಮಾಡಿಕೊಳ್ಳುವುದು ಎಂದು? ಹೆಚ್ಚಿನ ಪ್ರಾಣಿಗಳಿಗೆ ಬಣ್ಣಗಳ ಪ್ರಭೇದ ಗೊತ್ತೇ ಆಗುವುದಿಲ್ಲ. ಕಾರಣ ಅವುಗಳ ಕಣ್ಣು ಕೇವಲ ಕಪ್ಪು- ಬಿಳುಪು ಮಾತ್ರ ಗುರುತಿಸಲು ಶಕ್ತವಾಗಿರುತ್ತವೆ. ಪ್ರಾಕೃತಿಕ ಬಣ್ಣಗಳಿಗೂ ಧರ್ಮ ಅಂಟಿಸಿ ಪೂರ್ವಾಗ್ರಹಪೀಡಿತರಾಗುವವರು ಮೂರ್ಖ ಮಾನವರು ಮಾತ್ರ.

-ಜೆ. ರವಿಕಿರಣ್ ರೈ, ಮಂಗಳೂರು

ಛತ್ತೀಸ್‌ಗಢದಲ್ಲಿ ಪೊಲೀಸ್ ರಾಜ್ಯ

ಮೋದಿ ಸರ್ಕಾರದ ಆದ್ಯತೆಗಳು ಕೇವಲ ಹೊಟ್ಟೆಬಾಕ ಕಾರ್ಪೋರೇಟ್ ಖದೀಮರ ಹಸಿವನ್ನು ತಣಿಸುವುದಕ್ಕಷ್ಟೆ ಸೀಮಿತವಾಗಿವೆ ಎನ್ನುವುದಕ್ಕೆ 2016ರ ಬಜೆಟ್ ಪುರಾವೆಗಳಿಗಿಂತ ಹೆಚ್ಚಿನ ಪುರಾವೆಯೇನೂ ಬೇಕಾಗಿಲ್ಲ. ಕಾರ್ಪೋರೇಟುಗಳ ಲಕ್ಷಾಂತರ ಕೋಟಿ ಸಾಲವನ್ನು ಮನ್ನಾ ಮಾಡುವುದಷ್ಟೆ ಅಲ್ಲ, ಇನ್ನಷ್ಟು ಸಬ್ಸಿಡಿ ಗಳನ್ನು ತಟ್ಟೆ ಮೇಲಿಟ್ಟು ಸಮರ್ಪಿಸುತ್ತಾ ಆ ಖೋತಾವನ್ನು ತುಂಬಿಸಲು ಜನಸಾಮಾನ್ಯರ ಕಿಸೆಗೆ ಕನ್ನಹಾಕಲು ಹೊರಟಿರುವುದನ್ನು ನೋಡಿದರೆ ಸಾಲದೇ. ಹೆಚ್ಚುವರಿ ಸೇವಾ ತೆರಿಗೆಗಳನ್ನು ಹೇರುವುದರೊಂದಿಗೆ ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಮುಂತಾದ ಜನಪ್ರಿಯ ಸಾರ್ವಜನಿಕ ಠೇವಣಿಗಳ ಬಡ್ಡಿದರಗಳಲ್ಲಿ ಗಣನೀಯ ಕಡಿತ ಮಾಡಿರುವ ಲಜ್ಜೆಗೆಟ್ಟ ಸರ್ಕಾರ ಇದೀಗ ಛತ್ತೀಸ್‌ಗಢದ ನೆಲವನ್ನು ಬಗೆಯಲು ತುದಿಗಾಲಲ್ಲಿ ನಿಂತಿರುವ ಕಾರ್ಪೋರೇಟುಗಳ ಕನಸನ್ನು ನನಸಾಗಿಸಲು ಟೊಂಕಕಟ್ಟಿ ಕೊಂಡು ಸಜ್ಜಾಗಿದೆ. ಇದರ ಮೊದಲ ಹೆಜ್ಜೆಯಾಗಿ ಬಸ್ತರ್ ಜಿಲ್ಲೆಯ ಆದಿವಾಸಿಗಳನ್ನು ಅವರ ಸಾಂಪ್ರದಾಯಿಕ ತಾಣ ಗಳಿಂದ ಒಕ್ಕಲೆಬ್ಬಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಅವರ ಅರಣ್ಯ ಹಕ್ಕುಗಳ ಮೇಲೆ ಬುಲ್‌ಡೋಜರ್ ಚಲಾಯಿಸಲಾಗುತ್ತಿದೆ.

ಬಸ್ತರ್ ಜಿಲ್ಲೆ ಮತ್ತು ರಾಜ್ಯಾದ್ಯಂತ ಇದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಮುಜುಗರ ತರಬಲ್ಲ ಅನಾನುಕೂಲ ಸ್ಥಳೀಯ ಸುದ್ದಿಗಳು ಹೊರ ಜಗತ್ತಿಗೆ ತಲುಪದಂತಾಗಲು ಏನೆಲ್ಲ ವಿಧಾನಗಳನ್ನು ಬಳಸಬಹುದೊ ಅವನ್ನೆಲ್ಲ ಬಳಸಲಾಗುತ್ತಿದೆ. ಇದರ ಭಾಗವಾಗಿ ಆದಿವಾಸಿಗಳ ಹಕ್ಕು ಸಂರಕ್ಷಣೆಗೆ ಯತ್ನಿಸುತ್ತಿರುವ ಮಾನವ ಹಕ್ಕು ಹೋರಾಟಗಾರರು ಮತ್ತು ನೆಲದ ವಾಸ್ತವವನ್ನು ವರದಿ ಮಾಡುತ್ತಿರುವ ಪತ್ರಕರ್ತರ ಮೇಲೆ ಭಯೋತ್ಪಾದಕ ತಂತ್ರಗಳನ್ನು ಪ್ರಯೋಗಿಸಲಾಗುತ್ತಿದೆ. ಅವರಿಗೆ ವಿಪರೀತ ಕಿರುಕುಳ ನೀಡುವ ಮೂಲಕ ಅವರು ತಾವಾಗಿಯೆ ರಾಜ್ಯ ಬಿಟ್ಟು ಹೋಗುವಂತೆ ಮಾಡಲಾಗುತ್ತಿದೆ.

ಹಕ್ಕು ಕಾರ್ಯಕರ್ತರ ಪಾಡು

ಉದಾಹರಣೆಗೆ ಆದಿವಾಸಿಗಳಿಗೆ ಉಚಿತ ಕಾನೂನು ಸೇವೆ ಒದಗಿಸುತ್ತಿದ್ದ ಜಗ್ದಲ್‌ಪುರ ಲೀಗಲ್ ಏಯ್ಡ್ ತಂಡದ ಶಾಲಿನಿ ಗೇರಾ ಮತ್ತು ಇಶಾ ಖಂಡೇಲ್‌ವಾಲ್ ವಿರುದ್ಧ ಇದ್ದಕ್ಕಿದ್ದಂತೆ ಅನಾಮಧೇಯ ದೂರುಗಳು ಬರಲಾರಂಭಿಸಿದವು. ಅವರ ಮನೆ ಮಾಲಿಕನಿಗೆ ಜೀವ ಬೆದರಿಕೆ ಒಡ್ಡಲಾಯಿತು. ಜಿಲ್ಲಾ ವಕೀಲರ ಸಂಘ ಕೂಡ ಜಗ್ದಲ್‌ಪುರ ಲೀಗಲ್ ಏಯ್ಡ್ ತಂಡಕ್ಕೆ ವಿರೋಧ ವ್ಯಕ್ತಪಡಿಸಿತು. ಇವೆಲ್ಲದರ ಹಿನ್ನೆಲೆಯಲ್ಲಿ ತಂಡ ಊರು ಬಿಟ್ಟು ತೊಲಗಬೇಕಾಯಿತು. ಇನ್ನೊಂದು ಬೆಳವಣಿಗೆಯಲ್ಲಿ ಕಳೆದ 18 ವರ್ಷಗಳಿಂದ ದಾಂತೆವಾಡಾದಲ್ಲೊಂದು ಗಾಂಧಿ ಆಶ್ರಮ ನಡೆಸುತ್ತ ಆದಿವಾಸಿಗಳ ಉದ್ಧಾರಕ್ಕಾಗಿ ಶ್ರಮಿಸುತ್ತಿದ್ದ ಹಿಮಾಂಶು ಕುಮಾರ್ ಎಂಬವರು ಈಗ ಬಂಧನದಿಂದ ತಪ್ಪಿಸಿಕೊಳ್ಳಲು ಓಡಿಹೋಗಬೇಕಾದ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಪೊಲೀಸರು ಮತ್ತು ಸಲ್ವಾ ಜುಡುಂ ಜಂಟಿಯಾಗಿ ಸುಮಾರು 519 ನಕಲಿ ಎನ್ಕೌಂಟರ್ ನಡೆಸಿರುವುದನ್ನು ಪತ್ತೆ ಹಚ್ಚಿರುವ ಹಿಮಾಂಶು ಈ ಸಂಬಂಧ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನೂ ದಾಖಲಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಇಂದು ದೇಶದೆಲ್ಲೆಡೆ ಪಿಡುಗಿನಂತೆ ವ್ಯಾಪಿಸುತ್ತಿರುವ "ದೇಶಪ್ರೇಮಿ -ದೇಶದ್ರೋಹಿ ವಿಭಜನೆ"ಯ ಕಾಯಿಲೆ ಛತ್ತೀಸ್‌ಗಢದ ಪೊಲೀಸರಿಗೆ ವರದಾನವಾಗಿ ಬಂದಿದೆ. ಇದೀಗ ಹಿಮಾಂಶು "ದೇಶದ್ರೋಹಿ"ಗಳ ಜೊತೆ ಗುರುತಿಸಿಕೊಂಡಿರುವುದಾಗಿ ಆರೋಪಿಸಿರುವ ಪೊಲೀಸರು ಆತನ ವಿರುದ್ಧ ಸುಮಾರು 100 ಆರೋಪ ಪಟ್ಟಿಗಳನ್ನು ದಾಖಲಿಸಿದ್ದಾರೆ.

ಸೋನಿ ಸೋರಿ ಎಂಬ ಆದಿವಾಸಿ ಮಹಿಳೆ ಕೆಲಕಾಲದಿಂದ ಆದಿವಾಸಿಗಳ ಪರವಾಗಿ ಹೋರಾಟ ನಡೆಸುತ್ತಿದ್ದಾರೆ. ಜರ್ನಲಿಸಂ ವಿದ್ಯಾರ್ಥಿಯಾಗಿದ್ದ ಆಕೆಯ ಸೋದರಳಿಯ ಲಿಂಗಾರಂ ಕೊಡೊಪಿ ಕೂಡ ಆದಿವಾಸಿಗಳ ಸಂಕಷ್ಟಗಳನ್ನು ವೀಡಿಯೊ ಮತ್ತು ಛಾಯಾಚಿತ್ರಗಳ ಮೂಲಕ ಹೊರಜಗತ್ತಿಗೆ ತಿಳಿಸಲು ಪ್ರಯತ್ನಿಸುತ್ತಿರುವವರು. ಸೋನಿ ಸೋರಿ ಪೊಲೀಸರ ಕೈಲಿ ಅನುಭವಿಸಿರುವ ಅಮಾನುಷ ದೌರ್ಜನ್ಯಗಳ ಬಗ್ಗೆ ಈಗಾಗಲೆ ಸಾಕಷ್ಟು ವರದಿಗಳು ಪ್ರಕಟವಾಗಿವೆ. ಸೋನಿ ಇದೇ ಫೆಬ್ರವರಿ 20ರಂದು ಜಗ್ದಲ್‌ಪುರ ಲೀಗಲ್ ಏಯ್ಡ್‌ನ ಶಾಲಿನಿ ಮತ್ತು ಇಶಾರನ್ನು ಕಾಣಲೆಂದು ಹೋಗಿದ್ದರು. ಅಲ್ಲಿಂದ ವಾಪಸಾಗುತ್ತಿದ್ದಾಗ ದುಷ್ಕರ್ಮಿಗಳು ಆಕೆಯ ಮುಖಕ್ಕೆ ರಾಸಾಯನಿಕ ಎರಚಿದ್ದಾರೆ. ಲಿಂಗಾರಂ ಕೊಡೊಪಿ ಪ್ರಕಾರ ಈ ಘಟನೆಯ ತನಿಖೆಗಾಗಿ ನೇಮಿಸಲ್ಪಟ್ಟಿರುವ ವಿಶೇಷ ತನಿಖಾ ತಂಡವೊಂದು ಸೋನಿಯ ಕುಟುಂಬ ಸದಸ್ಯರ ಮೇಲೆಯೇ ದೋಷಾರೋಪಣೆ ಮಾಡುತ್ತಿದೆ. 'ರಾಸಾಯನಿಕ ಎಸೆದವರು ತಾವೇ; ಅದನ್ನು ಪ್ರಚಾರಕ್ಕೋಸ್ಕರ, ಅನುಕಂಪ ಗಿಟ್ಟಿಸಲು




ಮಾಡಿದೆವು' ಎಂದು ತಪ್ಪೊಪ್ಪಿಕೊಳ್ಳುವಂತೆ ಒತ್ತಾಯಿಸುತ್ತಿದೆ. ಇಲ್ಲಿ ಪೊಲೀಸರು ಮಾನವ ಹಕ್ಕು ಕಾರ್ಯಕರ್ತರಿಗೆ ಬೆದರಿಕೆ ಹಾಕುವುದು ಸಾಮಾನ್ಯವಾಗಿದೆ ಎನ್ನುವ ಕೊಡೊಪಿ ಇದೆಲ್ಲದರ ಕುರಿತು ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಆತ "ಇಲ್ಲಿನ ಜನ ಮಾನವ ಹಕ್ಕು ಉಲ್ಲಂಘನೆಗಳ ವಿಷಯವನ್ನು ಬಾಯಿಬಿಟ್ಟು ಹೇಳಲೂ ಹೆದರುತ್ತಿದ್ದಾರೆ ಏಕೆಂದರೆ ತಕ್ಷಣ ಅವರನ್ನು ಮಾವೋವಾದಿಗಳೆಂದು ಕರೆದು ಸುಳ್ಳು ಕೇಸುಗಳನ್ನು ಜಡಿಯಲಾಗುತ್ತದೆ ಅಥವಾ ನಕಲಿ ಎನ್ಕೌಂಟರ್ ಮೂಲಕ ಸಾಯಿಸಲಾಗುತ್ತದೆ. ಐಜಿಪಿ ಕಲ್ಲೂರಿ ಸರ್ಕಾರದ ಬಂಟನಂತೆ ವರ್ತಿಸುತ್ತಿದ್ದು ಆದಿವಾಸಿಗಳನ್ನು ಬಹಿರಂಗವಾಗಿ ಬೆದರಿಸುವ ಮಟ್ಟಿಗೆ ಹೋಗಿದ್ದಾರೆ. ನಕ್ಸಲರನ್ನು ಹತ್ತಿಕ್ಕುವ ಹೆಸರಿನಲ್ಲಿ ಆದಿವಾಸಿಗಳ ಮೇಲೆ ಭಯಂಕರ ದೌರ್ಜನ್ಯ ನಡೆಸುತ್ತಿದ್ದಾರೆ. ಸೋನಿ ಸೋರಿಯ ಮನೆಯವರು ಆತನನ್ನು ಭೇಟಿಯಾದಾಗ ಅವಳನ್ನು 'ಸೂಳೆ, ಶೀಲವಿಲ್ಲದ ಬತ್ತಲೆ ಹೆಂಗಸು' ಎಂದೆಲ್ಲ ಕೆಟ್ಟದಾಗಿ ಬೈದಿದ್ದಾರೆ. ತಾನು ಮತ್ತು ಇನ್ನಿತರ ಪೊಲೀಸ್ ಅಧಿಕಾರಿಗಳು ಆಕೆಯನ್ನು ರೇಪ್ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಖುದ್ದು ನನ್ನನ್ನು (ಕೊಡೊಪಿ) ಒಂದೊ ನಕಲಿ ಎನ್‌ಕೌಂಟರ್ ಮೂಲಕ ಮುಗಿಸುವೆವು ಅಥವಾ ನನ್ನ ಮೇಲೆ ಸೋನಿಯ ಮೇಲೆ ರಾಸಾಯನಿಕ ದಾಳಿ ನಡೆಸಿದ ಆರೋಪ ಹೊರಿಸುವೆವು ಎಂದು ಬೆದರಿಕೆ ಒಡ್ಡಿದ್ದಾರೆ. ನಕ್ಸಲರನ್ನು ಎದುರಿಸುವ ಹೆಸರಲ್ಲಿ ಪ್ರತಿನಿತ್ಯ ಆದಿವಾಸಿಗಳ ಕೊಲೆ ನಡೆಯುತ್ತಿದೆ. ದಿಲ್ಲಿಯಲ್ಲಿ ಅತ್ಯಾಚಾರ ನಡೆದರೆ ಇಷ್ಟೊಂದು ಗುಲ್ಲೆಬ್ಬಿಸುವ ಜನ ಛತ್ತೀಸ್‌ಗಢದ ಆದಿವಾಸಿ ಮಹಿಳೆಯರ ಮೇಲಿನ ಸಾಮೂಹಿಕ ಅತ್ಯಾಚಾರಕ್ಕೆಯಾಕೆ ಸ್ಪಂದಿಸುವುದಿಲ್ಲ?" ಎಂದು ತನ್ನ ಅಳಲನ್ನು ತೋಡಿಕೊಂಡಿದ್ದಾರೆ.

ಮಾಧ್ಯಮ ಪ್ರತಿನಿಧಿಗಳಿಗೆ ಪೀಡನೆ

ಛತ್ತೀಸ್‌ಗಢದಲ್ಲಿ ಕಾರ್ಯನಿರತ ಪತ್ರಕರ್ತರು ಕೆಲವೊಂದು ಕಡೆ ಮಾವೋವಾದಿಗಳಿಂದಷ್ಟೇ ಅಲ್ಲ, ಪೊಲೀಸರಿಂದಲೂ ಬೆದರಿಕೆ ಮತ್ತು ಕಿರುಕುಳ ಅನುಭವಿಸುತ್ತಿದ್ದಾರೆ. ಕಳೆದ ಒಂದು ವರ್ಷದಿಂದೀಚೆಗೆ ಹಲವಾರು ಪತ್ರಕರ್ತರು ಈ ರೀತಿಯ ಸಂಕಷ್ಟಕ್ಕೊಳಗಾಗಿದ್ದಾರೆ. ಉದಾಹರಣೆಗೆ 2015ರ ಜುಲೈ, ಸೆಪ್ಟೆಂಬರ್‌ನಲ್ಲಿ ದಕ್ಷಿಣ ಬಸ್ತರ್‌ನ ಸೋಮಾರು ನಾಗ್ ಮತ್ತು ಸಂತೋಷ್ ಯಾದವ್ ಎಂಬ ಇಬ್ಬರು ಹಿಂದಿ ಪತ್ರಕರ್ತರನ್ನು ಮಾವೋವಾದಿಗಳನ್ನು ಬೆಂಬಲಿಸಿದ ಆರೋಪದಲ್ಲಿ ಬಂಧಿಸಲಾಗಿದೆ. ಸೆರೆಮನೆಯಲ್ಲಿದ್ದ ವೇಳೆ ಅವರ ಮೇಲೆ ದೌರ್ಜನ್ಯ ಎಸಗಲಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ರಾಜ್ಯದಲ್ಲಿ ಈ ರೀತಿ ಮಾಧ್ಯಮಗಳಿಗೆ ಪ್ರತಿಕೂಲ ವಾತಾವರಣ ನಿರ್ಮಾಣವಾಗುತ್ತಿರುವುದರ ವಿರುದ್ಧ ಪತ್ರಕರ್ತರಿಂದ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ಅಕ್ಟೋಬರ್ 10, 2015ರಂದು ರಾಜ್ಯ ರಾಜಧಾನಿ ರಾಯಪುರದಲ್ಲಿ ಸಭೆ ಸೇರಿದ ಸುಮಾರು 300ರಷ್ಟು ಪತ್ರಕರ್ತರು ಪೊಲೀಸರು ಮತ್ತು ನಕ್ಸಲರ ಕಿರುಕುಳವನ್ನು ಬಲವಾಗಿ ಖಂಡಿಸಿದ್ದಾರೆ.

ಆದರೂ ಇದರಿಂದ ಆಡಳಿತದ ಮೇಲೆ ಯಾವುದೇ ಪರಿಣಾಮ ಆದಂತಿಲ್ಲ. ಇದೇ ಫೆಬ್ರವರಿ 8ರಂದು ಇನ್ಸ್ಕ್ರೋಲ್‌ ಸ್ವತಂತ್ರ ಪತ್ರಕರ್ತೆ ಮಾಲಿನಿ ಸುಬ್ರಮಣ್ಯಂರ ಜಗ್ದಲ್‌ಪುರದ ಮನೆಯ ಮೇಲೆ ಯೋಜಿತ ದಾಳಿ ನಡೆದಿದೆ. ಪರಿಣಾಮವಾಗಿ ಆಕೆ ಊರು ಬಿಡಬೇಕಾಗಿ ಬಂದಿದೆ. ಈ ಪ್ರಕರಣದಲ್ಲಿ ಸಾಮಾಜಿಕ್ ಏಕತಾ ಮಂಚ್ ಎಂಬ ಸಂಘಟನೆಯ ಹೆಸರು ಕೇಳಿಬಂದಿದೆ. ಸಂಘಟನೆಯ ಸದಸ್ಯರ ಪ್ರಕಾರ ಬಸ್ತರ್ ಜಿಲ್ಲೆಯಲ್ಲಿ ಮಾವೋವಾದವನ್ನು ಎದುರಿಸುವುದು ಮತ್ತು ಪೊಲೀಸರನ್ನು ಬೆಂಬಲಿಸುವುದು ಅದರ ಉದ್ದೇಶವಂತೆ. ವಾಸ್ತವದಲ್ಲಿ ಇದೊಂದು ಪೊಲೀಸರನ್ನು ಟೀಕಿಸುವಂತಹ ಪತ್ರಕರ್ತರು, ವಕೀಲರು ಮತ್ತು ಹಕ್ಕು ಕಾರ್ಯಕರ್ತರ ವಿರುದ್ಧ ಕಾರ್ಯಾಚರಿಸುವ ಖಾಸಗಿ ನೈತಿಕ ಪೊಲೀಸರ ಗುಂಪಾಗಿದೆ. ಇದಕ್ಕೆ ಪೊಲೀಸರ ಪೂರ್ಣ ಸಹಕಾರವಿದೆ ಎನ್ನಲಾಗಿದೆ. ಪತ್ರಕರ್ತೆ ಮಾಲಿನಿ ಪ್ರಕರಣದ ಬಗ್ಗೆ ವಿಚಾರಿಸಲು ಜಗ್ದಲ್‌ಪುರಕ್ಕೆ ತೆರಳಿದ್ದ ಬಿಬಿಸಿ ವರದಿಗಾರ ಅಲೋಕ್ ಪುಟುಲ್‌ರಿಗೆ ಬೆದರಿಕೆ ಕರೆಗಳು ಬಂದಬಳಿಕ ಆತ ಕೂಡ ಜಾಗ ಬಿಟ್ಟಿದ್ದಾರೆ. ಮೊನ್ನೆ ಮಾರ್ಚ್ 21ರಂದು ರಾಜಸ್ಥಾನ್ ಪತ್ರಿಕಾ ಬಳಗಕ್ಕೆ ಸೇರಿದ 'ಪತ್ರಿಕಾ' ದೈನಿಕದ ನಿರ್ಭೀತ ಪತ್ರಕರ್ತ ಪ್ರಭಾತ್ ಸಿಂಗ್ ಎಂಬವರನ್ನು ಪೊಲೀಸ್ ಅಧಿಕಾರಿಗಳ ವಿರುದ್ಧ ಅಶ್ಲೀಲ ಲೇಖನಗಳನ್ನು ಹರಡಿದ ಆರೋಪದಲ್ಲಿ ಜೈಲಿಗೆ ತಳ್ಳಲಾಗಿದೆ. ತಮ್ಮ ದಾಖಲೆಗಳಲ್ಲಿ ಸಿಂಗ್ ಹೆಸರು ಇಲ್ಲ; ಹಾಗಾಗಿ ಆತ ಪತ್ರಕರ್ತನೆ. ಅಲ್ಲವೆಂದು ಪೊಲೀಸರು ವಾದಿಸುತ್ತಿದ್ದಾರೆ. ಸಿಂಗ್ ಎದೆ ಮತ್ತು ಕೈಗಳ ಮೇಲೆ ಚಿತ್ರಹಿಂಸೆ ನಡೆದ ಗುರುತುಗಳಿವೆ ಎಂದು ಆತನ ವಕೀಲರು ತಿಳಿಸಿದ್ದಾರೆ. ಸಿಂಗ್ ವಿರುದ್ಧ ನಕಲಿ ಆಧಾರ್ ಕಾರ್ಡುಗಳನ್ನು ಹಂಚಿರುವ ಆರೋಪ ಸೇರಿದಂತೆ ಮೂರು ಪ್ರಕರಣಗಳು ಕಳೆದ ವರ್ಷವೆ ದಾಖಲಾಗಿದ್ದರೂ ಆತನನ್ನು ಇದುವರೆಗೆ ಬಂಧಿಸಿರಲಿಲ್ಲ. ಇತ್ತೀಚೆಗೆ ಈಟಿವಿಗೂ ವರದಿಗಾರರಾಗಿ ಸೇರಿದ್ದ ಆತನನ್ನು ಬಂಧನಕ್ಕೆ ಎರಡು ದಿನ ಮುಂಚಿತವಾಗಿ ಕೆಲಸದಿಂದ ಕಿತ್ತುಹಾಕಲಾಗಿದೆ. ಗಮನಾರ್ಹ ವಿಚಾರ ಏನೆಂದರೆ ಸಿಂಗ್ ಇದಕ್ಕೂ ಸ್ವಲ್ಪ ಸಮಯದ ಹಿಂದೆ ಸಾಮಾಜಿಕ್ ಏಕತಾ ಮಂಚ್ ತನ್ನನ್ನು "ದೇಶ ವಿರೋಧಿ" ಎಂದು ಕರೆಯುವ ಮೂಲಕ ತನ್ನ ಹೆಸರನ್ನು ಕೆಡಿಸಿ ವಿಶ್ವಾಸಾರ್ಹತೆಯನ್ನು ಕುಂದಿಸಲು ಯತ್ನಿಸಿದೆ ಎಂದು ದಾಂತೆವಾಡ ಪೊಲೀಸರಿಗೆ ದೂರು ನೀಡಿದ್ದರು.

ಇತ್ತೀಚೆಗಿನ ಘಟನೆಯೊಂದರಲ್ಲಿ 'ದೈನಿಕ್ ದೈನದಿನಿ'



ಎಂಬ ಹಿಂದಿ ಪತ್ರಿಕೆಯ ವರದಿಗಾರರೂ, ಪ್ರಭಾತ್ ಸಿಂಗ್ ನಿಕಟವರ್ತಿಯೂ ಆಗಿದ್ದ ದೀಪಕ್ ಜೈಸ್ವಾಲ್ ಎಂಬವರು ಕಳೆದ ವರ್ಷ ದಾಖಲಾಗಿದ್ದ ದೂರೊಂದರ ಮೇ[illegible] ಬಂಧಿಸಲಾಗಿದೆ. ಈತ ಸಿಂಗ್ ಪ್ರಕರಣಕ್ಕೆ ಸಂಬಂಧಿಸಿದ [illegible] ನ್ಯಾಯಾಲಯದ ಕಲಾಪಗಳನ್ನು ವರದಿ ಮಾಡ[illegible] ದಾಂತೆವಾಡಾಕ್ಕೆ ತೆರಳಿದ್ದ ವೇಳೆ ಈತನ ಬಂಧನ ನಡೆದಿ[illegible] ಪೊಲೀಸರ ಪ್ರಕಾರ ಸರ್ಕಾರದ ಪ್ರಸಾರಾಂಗ ಇಲಾಖೆ[illegible] ದಾಖಲೆಗಳಲ್ಲಿ ದೀಪಕ್ ಹೆಸರು ಇಲ್ಲವಂತೆ. ಆದರೆ ದಕ್ಷಿ[illegible] ಬಸ್ತರ್ ವರದಿಗಾರರ ಸಂಘ ಇದನ್ನು ಅಲ್ಲಗಳೆದಿದೆ. ನಮ್ಮ[illegible] ಪತ್ರಕರ್ತರೆಂದು ಗುರುತಿಸಲೊಪ್ಪದಿರುವವರ ಬಗ್ಗೆ ನಾವ[illegible] ವರದಿ ಮಾಡಬೇಕೆಂದು ಪ್ರಶ್ನಿಸಿರುವ ಸಂಘ ಇನ್ನು ಮುಂ[illegible] ಪೊಲೀಸರು ಅಥವಾ ಮಾವೋವಾದಿಗಳ ಕುರಿ[illegible] ಯಾವುದೇ ವರದಿ ಮಾಡದಿರಲು ನಿರ್ಧರಿಸಿದೆ. ಮಾತ್ರ[illegible] ಇತರ ಜಿಲ್ಲೆಗಳಲ್ಲಿರುವ ಪತ್ರಕರ್ತರಿಗೂ ಈ ನಿರ್ಧಾರವ[illegible] ಅನುಸರಿಸುವಂತೆ ಹೇಳಲಾಗುವುದೆಂದು ಸಂಘದ ಅಧ್ಯಕ್ಷ[illegible] ತಿಳಿಸಿದ್ದಾರೆ. ಛತ್ತೀಸ್‌ಗಢದಲ್ಲಿ ಮಾಧ್ಯಮ ಪ್ರತಿನಿಧಿ[illegible] ಬಾಯ್ಮುಚ್ಚಿಸುವ ಯತ್ನಗಳನ್ನು ಗಂಭೀರವಾಗಿ ಪರಿಗಣಿಸಿರು[illegible] ನ್ಯೂಯಾರ್ಕ್‌ನ ಪತ್ರಕರ್ತರ ಹಕ್ಕು ಸಂರಕ್ಷಣಾ ಸಮಿ[illegible] (Committee to Protect Journalists[illegible] ಆಮ್ನೆಸ್ಟಿ ಇಂಟರ್‌ನ್ಯಾಷನಲ್, ಪಿಯುಸಿಎಲ್ ಮುಂತಾ[illegible] ಸಂಸ್ಥೆಗಳು ಕೂಡ ರಾಜ್ಯದಲ್ಲಿ ಮಾಧ್ಯಮಗಳ ಮು[illegible] ಕಾರ್ಯಾಚರಣೆಗೆ ವಾತಾವರಣ ಕೆಡುತ್ತಿರುವ ಬಗ್ಗೆ ಕಳವ[illegible] ವ್ಯಕ್ತಪಡಿಸುವುದರೊಂದಿಗೆ ಬಂಧನದಲ್ಲಿರುವ ಎ[illegible] ಪತ್ರಕರ್ತರನ್ನು ಕೂಡಲೆ ಬಿಡುಗಡೆಗೊಳಿಸುವ[illegible] ಒತ್ತಾಯಿಸಿವೆ.


ಮೇಲೆ ಹೇಳಿರುವ ಪ್ರಕರಣಗಳ ಪೈಕಿ ಹೆಚ್ಚಿನವುಗಳ[illegible] ಐಜಿಪಿ ಕಲ್ಲೂರಿ ಹೆಸರು ಕೇಳಿಬರುತ್ತಿದೆ. ಜವಾಹರ್‌ಲಾ[illegible] ವಿವಿಯ ಉಮರ್ ಖಾಲಿದ್ ತನ್ನ ಒಂದು ಭಾಷಣದ[illegible] ಸೋನಿ ಸೋರಿ ಮೇಲಿನ ದಾಳಿಯ ಪ್ರಸ್ತಾಪ ಮಾಡಿ[illegible] ಕಾರಣಕ್ಕೆ ಆ ದಾಳಿಯ ಹಿಂದೆ ಆತನ ಕೈವಾಡ ಇರಬಹು[illegible] ದೆಂದು ಹೇಳಿದಾತ ಇದೇ ಭೂಪ. ದಿಲ್ಲಿಗೆ ಹೋ[illegible] ಸೋನಿಯನ್ನು ಭೇಟಿ ಮಾಡಿದ ಈತನ ವಿಶೇಷ ತನಿ[illegible] ತಂಡ ಅದೇಕೆ ಉಮರ್‌ರನ್ನು ವಿಚಾರಿಸದೆ ಹಿಂದಿರುಗಿತ್ತೆಂ[illegible] ಪ್ರಶ್ನೆಗೆ ಉತ್ತರವಿಲ್ಲ. ಆದಿವಾಸಿಗಳಿಗೆ ಸಹಾಯ ಮಾಡುತ್ತಿರು[illegible] ಎನ್‌ಜಿವೊಗಳ ವಿರುದ್ಧ ಕಳೆದ ಮೇ ತಿಂಗಳಲ್ಲಿ ಕಿಡಿಕಾರಿ[illegible] ಈತ ಈಗ ತನ್ನ ಮಾತುಗಳನ್ನು ಕಾರ್ಯರೂಪಕ್ಕಿಳಿ[illegible] ತ್ತಿರುವುದು ಸ್ಪಷ್ಟವಿದೆ. ರಾಜ್ಯ ಸರ್ಕಾರದ ಬೆಂಬಲವಿಲ್ಲ[illegible] ಈ ರೀತಿಯ ವರ್ತನೆ ಸಾಧ್ಯವೇ? ಇದನ್ನೆಲ್ಲ ನೋಡುವಾ[illegible] ಕಲ್ಲೂರಿ ಮತ್ತು ಸಂಘ ಪರಿವಾರ ಒಂದೇ ತರಂಗ ದೂರದ[illegible] ರುವಂತೆ ತೋರುವುದಿಲ್ಲವೇ? ಹೀಗಿರುವಾಗ ಛತ್ತೀ[illegible] ಗಢದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕೇಳುವವರಿ[illegible] ಲ್ಲವೆಂದಾಗಿದೆ, ನಿರ್ದಿಷ್ಟ ಹಿತಾಸಕ್ತಿಗಳಿಗಾಗಿ ಇಡೀ ರಾಜ್ಯವ[illegible] ಒಂದು ಪೊಲೀಸ್ ರಾಜ್ಯವಾಗಿ ಪರಿವರ್ತಿಸ ಲಾಗಿ[illegible] ಎಂಬ ಟೀಕೆಗಳಲ್ಲಿ ಅತಿಶಯೋಕ್ತಿಯೇನಿದೆ?




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸಂಪ್ರದಾಯ ವರ್ಸಸ್ ಪರಂಪರೆ







ಗ್ರೀಸ್ ಮತ್ತು ಭಾರತದ ಸಾಂಸ್ಕೃತಿಕ, ಧಾರ್ಮಿಕ ಮತ್ತು ಪೌರಾಣಿಕ ವಿಚಾರಗಳಿಗೆ ಬಹಳ ಸಾಮ್ಯತೆ ಇದೆ. ಹೋಮರನ ಇಲಿಯಡ್ ಮತ್ತು ಒಡೆಸ್ಸಿ, ರಾಮಾಯಣ ಮತ್ತು ಮಹಾಭಾರತಗಳ ಮಹಾಕಾವ್ಯಗಳಲ್ಲೂ ಕೂಡ ಇಂತಹ ಸಾದೃಶ್ಯವನ್ನು ಗುರುತಿಸಬಹುದು. ಗ್ರೀಸ್ ಮತ್ತು ಭಾರತ ದೇಶಗಳೆರಡೂ ಪ್ರಾಚೀನದಲ್ಲಿ ಮಾತೃ ಪ್ರಧಾನ ಸಂಸ್ಕೃತಿಯನ್ನೇ ಹೊಂದಿದ್ದು, ನಂತರ ಈ ಎರಡೂ ದೇಶಗಳೊಳಗೆ ಪಿತೃ ಪ್ರಧಾನ ಸಂಸ್ಕೃತಿಯನ್ನು ಹೊತ್ತು ತಂದವರು ಆರ್ಯರು. ಎರಡೂ ದೇಶಗಳಲ್ಲಿ ಮೂಲನಿವಾಸಿಗಳ ಮೇಲೆ ಆರ್ಯರು ದಾಳಿ ಮಾಡಿದರು. ಭೌಗೋಳಿಕ ಹಕ್ಕುದಾರಿಕೆಯೊಳಗೆ ಅತಿಕ್ರಮ ಪ್ರವೇಶ ಮಾಡಿದರು. ಸಾಂಸ್ಕೃತಿಕವಾಗಿ ಮಿಲನಗೊಂಡರು. ಒಟ್ಟಾರೆ ಸಾಂಸ್ಕೃತಿಕ ಕ್ಷೇತ್ರವನ್ನು ವೈಭವದಿಂದ ವಿಜೃಂಭಿಸಿದರು. ಆದರೆ ಸಾಮಾಜಿಕ ಮತ್ತು ರಾಜಕೀಯವಾಗಿ ಮೂಲನಿವಾಸಿಗಳನ್ನು ವಂಚಿಸುತ್ತಾ, ಒತ್ತರಿಸಿರುತ್ತಾ ತಮ್ಮ ಆಧಿಪತ್ಯವನ್ನು ಸ್ಥಾಪಿಸಲು ಸಾಕಷ್ಟು ಹುನ್ನಾರಗಳನ್ನು ನಡೆಸಿದರು. ಪ್ರಭಾವ ಯಾವುದೇ ಆದರೂ ಸಾಂಸ್ಕೃತಿಕವಾಗಿ, ಕಲೆ ಮತ್ತು ಕರಕುಶಲತೆಗಳಲ್ಲಿ ಮಾನ್ಯತೆ ದೊರಕಿಬಿಡುತ್ತದೆ. ಏಕೆಂದರೆ ಸಂಗೀತ, ನೃತ್ಯಾದಿ ಲಲಿತಕಲೆ, ಕರಕುಶಲತೆ ಮತ್ತು ಚಿತ್ರ ಹಾಗೂ ವರ್ಣಕಲೆಗಳಲ್ಲಿ ಚುಂಬಕ ಶಕ್ತಿಯಿರುತ್ತದೆ. ಅದು ಸಹಜವಾಗಿ ಎಲ್ಲರನ್ನೂ ಸೆಳೆಯುತ್ತದೆ. ಅಷ್ಟೇ ಅಲ್ಲದೇ ಅದನ್ನು ಅನುಕರಿಸುವ ಮತ್ತು ಅನುಸರಿಸುವ ಮೂಲಕ ತಮ್ಮ ಸಾಂಸ್ಕೃತಿಕ ಸಂಪದವನ್ನು ಹೆಚ್ಚಿಸಿಕೊಳ್ಳಲು ಅಥವಾ ವೈಭವೀಕರಿಸಿಕೊಳ್ಳಲು ಹಾತೊರೆಯುತ್ತಾರೆ. ಇದು ಗ್ರೀಸ್ ಮತ್ತು ಭಾರತ ಎರಡೂ ದೇಶಗಳಲ್ಲಾಯಿತು.





ಲಲಿತಕಲೆಗಳ ಪ್ರಭಾವ

ನಮ್ಮ ದೇಶದಲ್ಲೂ ಸಂಗೀತ, ನೃತ್ಯ, ಚಿತ್ರಕಲೆಗಳು, ಮೆಲೋಡ್ರಾಮ ಸಾಹಿತ್ಯಗಳು ಹಾಗೂ ರಂಗಭೂಮಿಯೂ ಪ್ರಖರವಾಗಿ ಆರ್ಯರ ಅಥವಾ ಬ್ರಾಹ್ಮಣ್ಯದ ಮನಸ್ಥಿತಿಗಳನ್ನು ನೆಲೆಗೊಳಿಸುವಲ್ಲಿ ಮತ್ತು ವಿಸ್ತರಿಸುವಲ್ಲಿ ತನ್ನ ಕಾಣಿಕೆಗಳನ್ನು ನೀಡಿತು. ಭಕ್ತಿಗೀತೆಗಳು, ಭಜನೆಗಳು, ದೇವದೇವಿಯರ ಚಿತ್ರ ಮತ್ತು ಶಿಲ್ಪಗಳು, ಕರಕೌಶಲ್ಯದ ಕಲಾಕೃತಿಗಳು ಕೂಡ ಜನರ ಮನಸ್ಸಿನೊಳಗೆ ಪ್ರವೇಶಿಸಿದವು. ಅದೂ ಭಾವನಾತ್ಮಕವಾಗಿ ಪ್ರವೇಶಿಸಿಬಿಟ್ಟವು. ನಮಗೆ ನೆನಪಿರಬೇಕು, ಲಲಿತಕಲೆಗಳು ತಲೆಗೆ ಸಂಬಂಧಪಟ್ಟದ್ದಲ್ಲ, ಅದರ ಗುರಿ ಹೃದಯ. ಅದು ಸಮಾಜದೊಳಗೆ ಪ್ರವೇಶಿಸುವುದೇ ಸಾಂಸ್ಕೃತಿಕ ಪ್ರಭಾವಗಳ ಮೂಲಕ. ಯಾವ ಸಂಸ್ಕೃತಿಯು ನಮ್ಮ ನಿತ್ಯ ಬದುಕಿಗೆ, ಜೀವನಾಧಾರಕ್ಕೆ ಸೊಬಗನ್ನು ಮತ್ತು ಹಿತವನ್ನು ಕೊಡುವುದೋ ಅದನ್ನು ಆಪ್ತಗೊಳಿಸಿಕೊಳ್ಳುತ್ತಾ ಪೀಳಿಗೆಯಿಂದ ಪೀಳಿಗೆಗಳೇ ಮುಂದುವರಿಯುತ್ತವೆ.

ಯಾವುದು ಸನಾತನ? ಯಾವುದು ಪುರಾತನ?

ಭಾರತೀಯ ಸಂಸ್ಕೃತಿಯ ಪ್ರತೀಕವೆಂದೇ ಬಿಂಬಿಸಲಾಗುವ ಸೀರೆ ಮೂಲತಃ ಭಾರತದ್ದೇ ಅಲ್ಲ, ಅದು ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಚಂದ್ರಗುಪ್ತನ ಗ್ರೀಸಿನ ಹೆಂಡತಿಯೊಡನೆ ಭಾರತವನ್ನು ಪ್ರವೇಶಿಸಿತು. ನಮ್ಮ ಸನಾತನ ಸಂಸ್ಕೃತಿ ಎಂದು ಗಂಟಲು ಹರಿದುಕೊಳ್ಳುವ ಸಂಸ್ಕೃತಿ ರಕ್ಷಕರು ಇದನ್ನು ತಿಳಿದುಕೊಳ್ಳುವುದಿರಲಿ, ಜುಬ್ಬ ಮತ್ತು ಪೈಜಾಮುಗಳೂ ಭಾರತದ್ದಲ್ಲ ಪರ್ಶಿಯಾವೇ ಮೊದಲಾದ ಇಸ್ಲಾಂ ನಾಡುಗಳ ಮೂಲದ್ದು ಎಂದೂ ಗೊತ್ತಿಲ್ಲ. ಆರು ಮಾರು ಉದ್ದದ ಬಟ್ಟೆಗಳನ್ನು ತೊಟ್ಟುಕೊಳ್ಳುವುದು ಭಾರತದ ಪ್ರಾಚೀನ ಸಂಸ್ಕೃತಿಯದ್ದಾಗಿರದೇ ಬರಿಯ ಮುಂಡ ಮತ್ತು ತುಂಡು ವಸ್ತ್ರಗಳನ್ನು ಧರಿಸುತ್ತಿದ್ದರು. ಪ್ರೇಮದ ಪ್ರತೀಕವೆಂದು ಗುರುತಿಸುವ ಗುಲಾಬಿಯನ್ನು ಭಾರತಕ್ಕೆ ಮೊದಲ ಬಾರಿ ಪರ್ಶಿಯಾದಿಂದ ತಂದವನು ಬಾಬರ್. ನಮ್ಮ ದೇಶದಲ್ಲಿ ಮೊಟ್ಟಮೊದಲ ಗುಲಾಬಿ ತೋಟವನ್ನು ಮಾಡಿಸಿದ್ದು. ಪೋರ್ಚುಗೀಸ್ ಮೂಲದ ಇಡ್ಲಿ ನಮ್ಮ ದೇಶದ್ದಲ್ಲ, ಪರಂಗಿ ಹಣ್ಣು ಮತ್ತು ಟೊಮ್ಯಾಟೋ ಮೊದಲಾದ ಹಣ್ಣು ತರಕಾರಿಗಳು ನಮ್ಮ ಪ್ರಾಚೀನ ಭಾರತದಲ್ಲಿರಲಿಲ್ಲ. ಭಾರತದ ಮೂಲೆಮೂಲೆಗಳಲ್ಲಿ ಬೇಲಿಗಿಡಗಳಾಗಿ ಬೆಳೆದು ಸಣ್ಣಪುಟ್ಟ ಪ್ರಾಣಿಪಕ್ಷಿಗಳ ಎಷ್ಟೆಷ್ಟೋ ಸಂಸಾರಗಳಿಗೆ ಆಶ್ರಯತಾಣವಾಗಿದ್ದು, ನಮ್ಮ ನಾಯಿನರಿಗಳಿಗೆ ಔಷಧಿಯಾಗಿ ಅಗತ್ಯವಾಗಿ ಬೇಕಾಗಿರುವ ಲಾಂಟಾನದ ಗಿಡಗಳು ನಮ್ಮ ದೇಶದ್ದು ಸುತಾರಾಂ ಅಲ್ಲ. ಪೋರ್ಚುಗೀಸರ ನಾಡಿನಿಂದ ಸಸಿಯಾಗಿ ಬಂದಿದ್ದು. ಆದರೆ ಆ ಗಿಡಗಳಿಲ್ಲದ ಯಾವುದೇ ಹಳ್ಳಿಯನ್ನೂ ನೋಡಲು ಸಾಧ್ಯವಿಲ್ಲ! ಭಾರತದ ಸನಾತನ ಸಂಸ್ಕೃತಿಯೆಂದು ತೊಡುವ ಕಚ್ಚೆ, ಸೀರೆಗಳು ಗ್ರೀಸ್ ದೇಶದ್ದೆಂದು ತಿಳಿಯುವುದಿರಲಿ, ಅವುಗಳಲ್ಲಿ ಒಳಗೆ ತೊಡುವ ಜಾಕಿ ಕಾಚಾಗಳು ಯಾವ ಸಂಸ್ಕೃತಿಯದು? ನಮ್ಮ ಭಾರತೀಯ ಕೌಪೀನವನ್ನೇ ನೋಡಿ ಪ್ರಪಂಚಾದ್ಯಂತ ಕಾಚಾಗಳನ್ನು ಹೊಲೆದಿದ್ದು, ಅದು ನಮ್ಮ ಭಾರತೀಯ ಸನಾತನ ಸಂಸ್ಕೃತಿಯ ಕೊಡುಗೆ ಎಂಬ ದನಿ ಕೇಳಿದರೂ ಆಶ್ಚರ್ಯವೇನಿಲ್ಲ! ಇರಲಿ, ಹೇಳಲು ಹೊರಟಿದ್ದೇನೆಂದರೆ, ಯಾವುದೇ ಸಂಸ್ಕೃತಿಯ ಪ್ರಭಾವ ಮತ್ತು ಕೊಡುಗೆ ಹಿತವೆನಿಸಿದ್ದಲ್ಲಿ ಅವನ್ನು ಆಪ್ತವಾಗಿಸಿ ಕೊಳ್ಳುವ ಸಮಾಜವು ಅದನ್ನು ತನ್ನದಾಗಿಸಿಕೊಂಡು ಪೀಳಿಗೆಯಿಂದ ಪೀಳಿಗೆಗೆ ದಾಟಿಸಿಕೊಂಡು, ಅದನ್ನು ಅನುಕೂಲಕ್ಕೆ ತಕ್ಕಂತೆ ರೂಪಾಂತರಿಸಿಕೊಂಡು ನಡೆಯುತ್ತದೆ. ಮನುಷ್ಯನಿಗೆ ಕೊನೆಗೆ ಬೇಕಾಗಿರುವುದು ಅನುಕೂಲಕರವಾದ ಜೀವನ ಮತ್ತು ಆದರಿಂದ ದೊರಕುವ ನೆಮ್ಮದಿ. ಹಾಗಾಗಿಯೇ ಸಮಾಜದಲ್ಲಿ ಅನೇಕಾನೇಕ ಹೊರಗಿನ ಪ್ರಭಾವಗಳನ್ನು ಪ್ರತಿರೋಧಿಸದೇ ತನ್ನ ವರ್ತುಲದೊಳಕ್ಕೆ ಬರಲುಬಿಡುವುದು ಮತ್ತು ಅಳವಡಿಸಿಕೊಳ್ಳುವುದು.

ಇಲ್ಲಿ ಸರಿ ತಪ್ಪು ಎಂಬುವ ಚರ್ಚೆಯೇ ಬರುವುದಿಲ್ಲ. ಆದರೆ, ಸಾಹಿತ್ಯ ಲಲಿತಕಲೆಗಳು ಪರೋಕ್ಷವಾಗಿ ಸಮೂಹಗಳಲ್ಲಿ ಪ್ರವೇಶಿಸುತ್ತಾ ವ್ಯಕ್ತಿಗತವಾಗಿ ಮನಸ್ಸುಗಳ ಮೇಲೆ ತಮ್ಮ ಶಾಶ್ವತ ಪ್ರಭಾವಗಳನ್ನು ಬೀರುವುದರ ಬಗ್ಗೆ ಪ್ರಶ್ನೆ ಎತ್ತಬೇಕಿದೆ. ಏಕೆಂದರೆ ಇಂಥಾ ಲಲಿತಕಲೆಗಳನ್ನು ಬಲ್ಲವರು ತಮ್ಮ ಸಿದ್ಧಾಂತಗಳನ್ನು, ಧೋರಣೆಗಳನ್ನು ಹೇರುವುದಕ್ಕಷ್ಟೇ ಅಲ್ಲ, ಮರುಳು ಮಾಡಲು ಮತ್ತು ಅಧೀನದಲ್ಲಿಟ್ಟುಕೊಳ್ಳಲೂ ಬಳಸಿಬಿಟ್ಟರು. ಅದೇ ಈ ಲಲಿತಕಲಾಕ್ಷೇತ್ರದಲ್ಲಿ ಆದ ಬಹು ದೊಡ್ಡ ಎಡವಟ್ಟು.

ರಾಮ ಭಜನೆ, ಕೃಷ್ಣ ಗೀತೆ

ವ್ಯಕ್ತಿಗತವಾಗಿ ನಾನು ಪ್ರತಿಶತ ನಾಸ್ತಿಕನೇ (ಕಟ್ಟರ್ ಅಲ್ಲ) ಆದರೂ ದೇವರುಗಳಿಗೆ ಸಂಬಂಧಿಸಿದ ಕಲಾಕೃತಿಗಳನ್ನು ಉಡುಗೊರೆಗಳಾಗಿ ಪಡೆದಾಗ ಅವನ್ನು ನಿರಾಕರಿಸಲು ಮನಸ್ಸಾಗುವುದಿಲ್ಲ. ದೇವರನ್ನು ನಂಬದಿದ್ದರೇನಂತೆ ನಾನೊಬ್ಬ ಕಲೋಪಾಸಕ ಎಂಬ ವ್ಯಕ್ತಿಗತ ಒಲವು ಮತ್ತು ನಿಲುವುಗಳು ಗಟ್ಟಿಯಾಗಿರುವುದರಿಂದ ಯಾವ ದೇವರ ಕಲಾಕೃತಿಯನ್ನು ಮತ್ತು ಗೀತೆ ಹಾಗೂ ನೃತ್ಯಗಳನ್ನು ಅಲ್ಲಗಳೆದಿರುವುದು ಅಥವಾ ಖಂಡಿಸಿರುವುದು ನೆನಪೇ ಇಲ್ಲ. ರಾಮಾಯಣದ ಮತ್ತು ಶ್ರೀ ರಾಮನ ಲೋಪದೋಷಗಳನ್ನು ವಿಮರ್ಶೆ ಮಾಡುತ್ತಾ ಖಂಡಿಸಿದರೂ ಕೂಡ ತುಳಸೀದಾಸರ, ಕಬೀರರ ರಾಮನ ಭಜನೆಗಳನ್ನು ಹಾಡದೇ ಇರಲಾಗುವುದಿಲ್ಲ. ಕೃಷ್ಣನನ್ನು ಓರ್ವ ಪೋಲಿ ಅಥವಾ ಬಿಂದಾಸ್ ಕೌಬಾಯ್ ಎಂಬಂತೆ ತಮಾಷೆ ಮಾಡಿದರೂ ಸೂರದಾಸ್, ಮೀರಾಬಾಯಿಯ ಕೃಷ್ಣನ ಭಜನೆಗಳನ್ನು ಹಾಡದೇ ಬಿಡುವುದಿಲ್ಲ.

"ಪ್ರೇಮಮುದಿತ ಮನಸೆ ಕಹೋ, ರಾಮ ರಾಮ ರಾಮ್" ಎಂದು ಹಾಡುವಾಗ ಹೆಂಡತಿಯನ್ನು ಕಾಡಿಗಟ್ಟಿದ, ಶಂಭೂಕನನ್ನು ವಧಿಸಿದ, ಸುಗ್ರೀವನಿಗೆ ಶರಸಂಧಾನ ಮಾಡಿದ ರಾಮ ನೆನಪಿಗೇ ಬರುವುದಿಲ್ಲ. ರಾಮ ಎಂದು ವಿರಾಮ ನೀಡುವಂತಹ ಶಬ್ದ ಅದಾಗಿರುತ್ತದೆ. ನಾದಮಯವಾಗಿ, ಸ್ವರಸಂಚಾರ ಮಾಡುತ್ತಾ ಸುಲಲಿತವಾಗಿ ನಮ್ಮ ಹೃದಯವನ್ನು ಪ್ರವೇಶಿಸುವ ಸಂಗೀತ ಅದಾಗಿರುತ್ತದೆ. "ಮೇರೆ ತೋ ಗಿರಿಧರ ಗೋಪಾಲ, ದೂಸರೋನ ಕೋಯಿ" ಎಂದು ಮೀರಾಳೊಂದಿಗೆ ಜೊತೆಯಾಗಿ ನಾವೂ ನನಗೆ ಗಿರಿಧರ ಗೋಪಾಲ ಬಿಟ್ಟರೆ ಬೇರೆ ಯಾರೂ ಇಲ್ಲ ಎಂದು ದನಿಗೂಡಿಸಿಬಿಡುತ್ತೇವೆ. ಆದರೆ ಇದರರ್ಥ ನಾವು ರಾಮನಾರಾಧಕರೋ ಅಥವಾ ಕೃಷ್ಣನಾರಾಧಕರೋ ಆದೆವೆಂದಲ್ಲ.

ಕಬೀರ ಮತ್ತು ತುಳಸೀದಾಸರೇ ಮೊದಲಾದ ಸಂತರು ರಾಮನನ್ನು ತಮ್ಮ ಶ್ರದ್ಧೆಯ ಕುರುಹನ್ನಾಗಿಸಿಕೊಂಡಿದ್ದು, ಸೂರದಾಸ್, ಮೀರಾಬಾಯಿ ಕೃಷ್ಣನಿಗೆ ಶರಣು ಹೋಗಿದ್ದು, ನಾಮದೇವ್, ಚೋಕಾಮೇಲಾ, ತುಕಾರಾಂ, ಜ್ಞಾನದೇವ, ಸಕ್ಕೂಬಾಯಿ, ಸಾವರಿಯೇ ಮೊದಲಾದ ಸಂತರು ಅಚಲವಾದ ಭಕ್ತಿಯನ್ನು ವಿಠಲನಲ್ಲಿ ನೆಲೆಗೊಳಿಸಿದ್ದು, ಸೂಫಿಗಳು ಅಲ್ಲಾಹನಿಗೆ, ಕ್ರೈಸ್ತ ಸಂತರು ಟ್ರಿನಿಟಿ ಪರಿಕಲ್ಪನೆಗೆ ಶರಣಾಗುವುದು ಯಾವುದೂ ತಪ್ಪೆಂದೋ, ಸರಿಯೆಂದೋ ಚರ್ಚಿಸುವ ಅಗತ್ಯವೇ ಇಲ್ಲ. ಏಕೆಂದರೆ ಶರಣರ ಪರಿಕಲ್ಪನೆಯಂತೆ ದೇವರನ್ನು ಕಾಣುವುದಲ್ಲ, ಕಂಡುಕೊಳ್ಳುವುದು. ಇಷ್ಟದೈವವೆಂಬುದು ಬಸವಣ್ಣನಿಗೆ ಕೂಡಲ ಸಂಗಮನಾಗಿದ್ದರೆ, ಅಕ್ಕನಿಗೆ ಚನ್ನಮಲ್ಲಿಕಾರ್ಜುನ, ಸೂಳೆ ಸಂಕವ್ವಳಿಗೆ ನಿರ್ಲಜ್ಜೇಶ್ವರನಾಗಿರುತಿತ್ತು. ಆದರೆ ಅವರೆಲ್ಲರ ಒಲವು, ನಿಲುವು ಮತ್ತು ಧೋರಣೆಗಳು ಪ್ರಾಮಾಣಿಕವಾಗಿದ್ದವು, ಮುಕ್ತವಾಗಿದ್ದವು, ಮುಗ್ಧವಾಗಿದ್ದವು ಎಂಬುದಷ್ಟೇ ಅಲ್ಲಿ ತೋರುವುದು. ಅವಕ್ಕಷ್ಟೇ ಅಲ್ಲಿ ಮಾನ್ಯತೆ. ಹಾಗಾಗಿಯೇ ಗಿರಿಧರ ಗೋಪಾಲ, ರಾಮ, ಕೂಡಲಸಂಗಮದೇವ, ವಿಠಲರು ಮುಖ್ಯವಾಗದೇ ಮೀರಾ, ಕಬೀರ, ಬಸವ, ತುಕಾರಾಂ ಮುಖ್ಯವಾಗಿರುತ್ತಾರೆ. ಅವರು ಪ್ರಾಮಾಣಿಕವಾಗಿ ಕಂಡುಕೊಂಡ ಶ್ರದ್ಧೆ ಮತ್ತು ಬದ್ಧತೆಗಳ ಪರಿಕಲ್ಪನೆಯೋ ಅಥವಾ ಕುರುಹುಗಳೋ ಅಥವಾ ಪ್ರೇಮವೋ ಆದಂತಹ ಅವರ ದೈವಗಳೂ ಅವರ ಮೂಲಕ ನಮ್ಮ ಗೌರವಕ್ಕೆ, ಆದರಕ್ಕೆ ಪ್ರಾಪ್ತರಾಗುತ್ತಾರೆ.


ಪೂಜಾರಿಗಳು ಸಂತರಲ್ಲ

ಹತ್ತಾರು ವರ್ಷಗಳಿಂದ ಸಂಪ್ರದಾಯಬದ್ಧವಾಗಿ ಪೂಜಿಸುತ್ತಾ, ನೇಮನಿಷ್ಠೆಗಳಿಂದ ನೈವೇದ್ಯ ಇಡುತ್ತಿದ್ದ ಪೂಜಾರಿಯಿಂದ ಒಂದಗಳನ್ನೂ ಸೇವಿಸದ ಶಿವ ಲಿಂಗವೊಡೆದು ಬಂದು ಕೋಳೂರಿನ ಕೊಡಗೂಸು ತರುವ ಅನ್ನಕ್ಕೆ ಕೈ ಚಾಚುತ್ತಾನೆ. ಅವಳಿಂದ ಪ್ರಸಾದ ಸೇವಿಸುವ ಕಥೆ ರೂಪಕವೇ ಆದರೂ ಒಂದು ಬಹುದೊಡ್ಡ ಧ್ವನಿಯನ್ನು ಎತ್ತುತ್ತದೆ, ಸಂಪ್ರದಾಯದ ಚೌಕಟ್ಟುಗಳನ್ನು ಒಡೆದು ಬನ್ನಿ ಎಂದು. ವಿಶೇಷವೆಂದರೆ ಆ ಸಾಂಪ್ರದಾಯಿಕವಾದಂತಹ ಸರಪಳಿಗಳನ್ನು ಕಡಿದುಕೊಳ್ಳುವುದೂ ವೈಚಾರಿಕತೆಯಿಂದ ಅಲ್ಲ, ಮುಗ್ಧತೆಯಿಂದ. ಭಾವುಕತೆಯಿಂದ. ಆಮೇಲೆ ಯಾವಾಗ ಸಂಪ್ರದಾಯದ ನೇಮಮುರಿದ ಸಂಗತಿ ಜನಪ್ರಿಯತೆಯನ್ನೂ ಪಡೆಯುವುದೋ ನಂತರ ಅದೂ ಕೂಡ ಸಂಪ್ರದಾಯದ ಮುಂದುವರಿಕೆಯ ಮತ್ತೊಂದು ಭಾಗವಾಗುತ್ತದೆ. ಅದೊಂದು ದುರಂತ.

ಬಹಳಷ್ಟು ಜನರಿಗೆ ಸಂಪ್ರದಾಯ ಮತ್ತು ಪರಂಪರೆಯ ವ್ಯತ್ಯಾಸಗಳು ತಿಳಿದಿರುವುದಿಲ್ಲ, ಪರಂಪರೆ ಎಂದು ಮಾತಾಡುತ್ತಾರೆ. ಆದರೆ ಆದರ ಕುರಿತಾದ ಸ್ಪಷ್ಟತೆಗಳು ಇರುವುದಿಲ್ಲ. ಸಂಪ್ರದಾಯಗಳು ಚೌಕಟ್ಟುಗಳನ್ನು ನಿರ್ಮಿಸುತ್ತವೆ. ಅದನ್ನು ಮೀರಿ ಹೋಗದಿರಲು ನಿರ್ಬಂಧವಿಧಿಸುತ್ತದೆ. ಆದರೆ ಪರಂಪರೆಗಳು ಇಂತಹ ಚೌಕಟ್ಟುಗಳಲ್ಲ. ಅವು ಮಾರ್ಗ. ಮಾರ್ಗದಲ್ಲಿರುವ ಮೌಲ್ಯಗಳನ್ನು ಎತ್ತಿ ಹಿಡಿಯುವ ಘನವೆತ್ತ ನಡಿಗೆ ಪರಂಪರೆಯದ್ದಾಗಿರುತ್ತದೆ. ತುಂಬಾ ಸರಳವಾದ ಉದಾಹರಣೆ ನೀಡಬೇಕೆಂದರೆ, ಒಂದು ದೇವರನ್ನು ಹೀಗೇ ಪೂಜಿಸಬೇಕು, ಹೀಗೇ ನಡೆದುಕೊಳ್ಳಬೇಕು, ಇದನ್ನು ಹೊರತಾಗಿ ಬೇರೊಂದು ಹೊಸತನ್ನು ಮಾಡಬಾರದು ಎಂದು ಚೌಕಟ್ಟಿನಲ್ಲಿರುವುದು ಸಂಪ್ರದಾಯವಾದರೆ. ದೇವರನ್ನು ಕಂಡುಕೊಳ್ಳಲು, ಅವನನ್ನು ಆರಾಧಿಸಲು ಸಂತರು, ಸಾಧುಗಳು, ಶರಣರು, ಭಕ್ತರು, ಸೂಫಿಗಳು ತಮ್ಮದೇ ಆದಂತಹ ಮಾರ್ಗವನ್ನು ಹುಡುಕಿಕೊಂಡರು. ಅವರು ದೈವ ಸಾಕ್ಷಾತ್ಕಾರದ, ಜೀವ ಪ್ರೇಮದ ವಿಷಯಗಳನ್ನು ತಮ್ಮ ನಡೆನುಡಿಗಳಲ್ಲಿ, ಆಚಾರವಿಚಾರಗಳಲ್ಲಿ ತಮ್ಮದೇ ನೆಲೆಗಟ್ಟಿನ ಪ್ರಭಾವದಲ್ಲಿಯೇ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುತ್ತಿದ್ದರು. ಯಾವುದೇ ಹಿನ್ನೆಲೆಯವರಾದರೂ ಅವರೆಲ್ಲರೂ ದೈವೀ ಸಾಕ್ಷಾತ್ಕಾರದ, ಜೀವಪ್ರೇಮದ ವಿಷಯವನ್ನು ಎತ್ತಿ ಹಿಡಿವ ಪರಂಪರೆಗೆ ಸೇರಿದವರಾಗುತ್ತಾರೆ.

ಯಾವುದೋ ಒಬ್ಬ ಸಂಪ್ರದಾಯಸ್ಥ ಪೂಜಾರಿ, ದೇವಸ್ಥಾನ ಪುರೋಹಿತ ಸಾಂಸ್ಕೃತಿಕ, ಆಧ್ಯಾತ್ಮಿಕ ಕ್ಷೇತ್ರದ ಪರಂಪರೆಯಲ್ಲಿ ತನ್ನ ಗುರುತನ್ನು ಮೂಡಿಸಲಾರ. ಆದರೆ ಸಂಪ್ರದಾಯವನ್ನು ಮುರಿದ, ತಮ್ಮ ಶ್ರದ್ಧಾಭಕ್ತಿಗಳಿಗೆ, ಒಲವು ನಿಲುವುಗಳಿಗೆ ಬದ್ಧವಾಗಿದ್ದ ಕ್ರಾಂತಿಕಾರರೆಲ್ಲಾ ಪರಂಪರೆಯಲ್ಲಿ ಹೆಜ್ಜೆಗುರುತುಗಳನ್ನು ಮೂಡಿಸಿರುತ್ತಾರೆ. ಆದರೆ ಅವರು ತಮ್ಮ ಜೀವಿತಾವಧಿಯಲ್ಲಿ ನೆಮ್ಮದಿ ಯಾಗೇನೂ ಇರುವುದಿಲ್ಲ, ಅವರು ಪಡುವ ಪಡಿಪಾಟಲು ಗಳಿಗೆ ಅವರು ಸೊರಗಿರುತ್ತಾರೆ. ಹೆಚ್ಚಿನ ಪಾಲು ಅದರಲ್ಲೇ ಭೌತಿಕವಾಗಿ ನಾಶವೂ ಆಗುತ್ತಾರೆ. ಆದರೆ ಅವರ ಚೈತನ್ಯ ಮತ್ತು ಪರಂಪರೆಯಲ್ಲಿ ಉಳಿಸಿದ ಹೆಜ್ಜೆಗುರುತು ಮಾತ್ರ ಸರ್ವಕಾಲಿಕ ಗೌರವಕ್ಕೆ ಪಾತ್ರವಾಗಿಬಿಡುತ್ತದೆ.

ಆದರೆ, ಇಲ್ಲೊಂದು ದೊಡ್ಡ ವಿಷಯವಿದೆ. ಇವರನ್ನೆಲ್ಲಾ ತಮ್ಮ ಪ್ರಭಾವದೊಳಕ್ಕೆ ಜನರನ್ನು ಮೂಢರನ್ನಾಗಿಸಿ ಸೆಳೆದುಕೊಳ್ಳುವುದಕ್ಕೆ ಬಳಸಿಕೊಳ್ಳುವುದೂ ಕೂಡ ಮೂಲಭೂತವಾದಿಗಳೇ. ಸಂಸ್ಕೃತಿ ರಕ್ಷಕರೆಂದು ಬಿಂಬಿಸಿಕೊಳ್ಳುವ ರೋಗಗ್ರಸ್ತ ಸಂಕುಚಿತ ಮನಸ್ಥಿತಿಯವರೇ. ಅವರು ಸಂಸ್ಕೃತಿ ಮತ್ತು ಪರಂಪರೆಯ ಹೆಸರಿನಲ್ಲಿ ಬಳಸಿಕೊಳ್ಳುವ ವಿಷಯಗಳನ್ನು ಪ್ರಗತಿಪರರೆನಿಸಿಕೊಳ್ಳುವವರು, ಜಾತ್ಯತೀತ ಮನೋಭಾವದವರು ಹಿಂದೊಮ್ಮೆ ತಮ್ಮಂತೆಯೇ ಕ್ರಾಂತಿಯನ್ನು ಬೆಂಬಲಿಸುತ್ತಿದ್ದ ಚೈತನ್ಯಗಳನ್ನು ನಿರಾಕರಿಸಿಬಿಡುತ್ತಾರೆ. ಇದರಿಂದ ಅವರೇ ಒಂದು ಕ್ರಾಂತಿ ಮುಖವಾದ ಪರಂಪರೆಯನ್ನು ಧಿಕ್ಕರಿಸಿ, 'ನಿರಾಕರಿಸುವಂತಹ' ಒಂದು ಸಂಪ್ರದಾಯಕ್ಕೆ ಬದ್ಧವಾಗಿಬಿಡುತ್ತಾರೆ. ಬಹಳಷ್ಟು ಜಾತ್ಯತೀತ ಮತ್ತು ಮೌಢ್ಯವಿರೋಧಿಗಳ ಮನಸ್ಥಿತಿ ಇದು. ಸಂಪ್ರದಾಯಸ್ಥರ ಆಕ್ರಮಣ, ಅತಿಕ್ರಮಣ ಮತ್ತು ಬಂಧನಗಳನ್ನು ನಿರಾಕರಿಸುವ ಭರದಲ್ಲಿ ಪ್ರಾಮಾಣಿಕವಾಗಿ ಕ್ರಾಂತಿಯ ಪರಂಪರೆಯಲ್ಲಿ ಮೂಡಿರುವ ಚೈತನ್ಯದ ಹೆಜ್ಜೆಗಳನ್ನೂ ತಳ್ಳಿಹಾಕಿಬಿಡುತ್ತಾರೆ. ಇದರಿಂದ ಪ್ರಗತಿಪರ ಶಕ್ತಿಗಳು ಮತ್ತು ಜಾತ್ಯತೀತ ಧೋರಣೆಗಳು ಬೃಹತ್ ಸಮಾಜದ ಯಾವುದೋ ಮೂಲೆಯೊಂದರಲ್ಲಿ ಗೊಣಗುವ ದುರ್ಬಲ ದನಿಗಳಾಗುವವೇ ಹೊರತು ಭಾವನಾತ್ಮಕವಾಗಿ ಜನರನ್ನು ಒಳಗೊಳ್ಳುವುದಿಲ್ಲ, ಸಾಮಾಜಿಕ ಕ್ರಾಂತಿಯ ಹೋರಾಟಕ್ಕೆ ಇದೊಂದು ಪೆಟ್ಟು. ಏನೇ ಆಗಲಿ, ಪ್ರಾಚೀನ ಗ್ರೀಸ್ ಮತ್ತು ಭಾರತದಲ್ಲಿ ಮಿಥಿಕಗಳು ಮೂಡಿದ ವಿಷಯಗಳಾಗಲಿ, ಮಹಾಕಾವ್ಯಗಳು ಅರಳಿದ ವಿಷಯಗಳಾಗಲಿ, ಮಾತೃ ಪ್ರಾಧಾನ್ಯತೆ ನಶಿಸುತ್ತಾ ಪಿತೃ ಪ್ರಾಧಾನ್ಯತೆಯು ನುಸುಳುತ್ತಾ ಬಂದಂತಹ ವಿಷಯಗಳಾಗಲಿ ಸಾಧಾರಣವಲ್ಲ, ಅಲಕ್ಷಿಸುವಂತಿಲ್ಲ, ಅವು ನಮ್ಮ ಇಂದಿನ ಸಾಂಸ್ಕೃತಿಕ ರಾಜಕಾರಣವನ್ನು ತಿಳಿದು ಕೊಳ್ಳಲು ಅತ್ಯಂತ ಅಗತ್ಯವಾಗಿವೆ. ಮುಂದೆ ತಿಳಿಯೋಣ. ■



ದಿನಕ್ಕೊಂದು ಸುಳ್ಳು-ಪ್ರಧಾನ ಸೇವಕರಿಂದ


ಕಳೆದ ಡಿಸೆಂಬರ್ ತಿಂಗಳ ಕೊನೆಯಲ್ಲಿ ಹೊಸಪೇಟೆಯಲ್ಲಿ ಒಬ್ಬ ಮುಸ್ಲಿಂ ಫೋಟೋಗ್ರಾಫರನ ಹೆಸರಲ್ಲಿ ಸಂಘ ಪರಿವಾರದವರೇ ಹಿಂದೂ ಧರ್ಮದ ವಿರುದ್ಧ ಪ್ರಚೋದಕ ಕರಪತ್ರ ಮುದ್ರಿಸಿ ಕೋಮುಗಲಭೆ ಸೃಷ್ಟಿಸಿದ್ದರು. ಆ ನಿರಪರಾಧಿ ಫೋಟೋಗ್ರಾಫರನನ್ನು ಪೊಲೀಸರು ಬಂಧಿಸಿ ಜೈಲಿನಲ್ಲಿಟ್ಟು ನಾಲ್ಕು ತಿಂಗಳಾದರೂ ಅವನನ್ನು ಇನ್ನೂ ಬಿಡುಗಡೆಗೊಳಿಸಿಲ್ಲವಂತೆ. ಕಳೆದ ವಾರ ಅಂಬೇಡ್ಕರ್ ಅಧ್ಯಯನ ಕೇಂದ್ರದವರು ಮಂಗಳೂರಿನಲ್ಲಿ ಆಯೋಜಿಸಿದ್ದ ಡಾ. ಅಂಬೇಡ್ಕರ್ ಅಭಿಯಾನದ ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಬಳ್ಳಾರಿಯ ಪ್ರಗತಿಪರ ಲೇಖಕ ಮತ್ತು ಸಾಮಾಜಿಕ ಚಿಂತಕ ಪೀರ್ ಬಾಷಾ ಇವರು ಆ ಹೊಸಪೇಟೆಯ ಫೋಟೋಗ್ರಾಫರ್ ಇನ್ನೂ ಜೈಲಿನಲ್ಲಿ ಕೊಳೆಯುತ್ತಿರುವ ವಿಷಯ ತಿಳಿಸಿದಾಗ ಮಂಗಳೂರಿನ ಸಭಿಕರಿಗೆ ಆಘಾತವಾಯಿತು. ಹೈದರಾಬಾದ್ ವಿವಿಯ ರೋಹಿತ್ ವೇಮುಲ ಮತ್ತು ಜೆಎನ್‌ಯುನ ಕನ್ಹಯ್ಯ ಕುಮಾರ್ ಇವರಿಬ್ಬರ ಪ್ರಕರಣಗಳ ಹೈ ಪ್ರೊಫೈಲ್ ಸುದ್ದಿಗಳ ನಡುವೆ ಕರ್ನಾಟಕದ ನಿರಪರಾಧಿ ಮುಸ್ಲಿಂ ಫೋಟೋ ಗ್ರಾಫರನ ಪ್ರಕರಣ ಎಲ್ಲರೂ ಮರೆತಿರುವುದು ಖೇದಕರ. ಈಗ ಈ ಬಗ್ಗೆ ಕರ್ನಾಟಕದ ಗೃಹಮಂತ್ರಿಗಳು ಜನರಿಗೆ ಸರಿಯಾದ ಮಾಹಿತಿ ಕೊಡಲು ಬಾಧ್ಯರು.

ಜೆಎನ್‌ಯು ವಿವಾದದ ಮೊದಲ ದಿನವೇ ದೇಶದ್ರೋಹದ ಘೋಷಣೆ ಕೂಗಿದ್ದಕ್ಕಾಗಿ ಜೆಎನ್‌ಯು ವಿದ್ಯಾರ್ಥಿಗಳನ್ನು ಪಾಕಿಸ್ತಾನದ ಉಗ್ರವಾದಿ ಹಾಫೀಜ್ ಸಯೀದನ ಹೆಸರಲ್ಲಿ ಅಭಿನಂದಿಸುವ ನಕಲಿ ಟ್ವೀಟ್ ಬಂದಿತ್ತು ಹಾಗೂ ಆ ಟ್ವೀಟ್ ಕಳುಹಿಸಿದ್ದು ಭಾರತದವರೇ ಎಂದೂ ಸಾಬೀತಾಗಿತ್ತು, ಆದರೆ ಈವರೆಗೂ ಈ ಟ್ವೀಟರ್ ಕಿಡಿಗೇಡಿಗಳನ್ನು ದಿಲ್ಲಿ ಪೊಲೀಸರು ಬಂಧಿಸದಿರುವುದು ಆಶ್ಚರ್ಯ. ಈಗಿನ ಉನ್ನತ ತಂತ್ರಜ್ಞಾನದ ಕಾಲದಲ್ಲಿ ಆ ಟ್ವೀಟರ್‌ನ ಮೂಲ ಕಂಡುಹಿಡಿದು ಟ್ವೀಟರ್ ಕಳುಹಿಸಿದ ಭಾರತೀಯನನ್ನು ಹಿಡಿಯುವುದು ಕಷ್ಟವಲ್ಲ. ಆದರೂ ದಿಲ್ಲಿ ಪೊಲೀಸರು ಇದನ್ನು ಮಾಡುತ್ತಿಲ್ಲ, ಯಾಕೆಂದರೆ ಇದರ ಮೂಲ ತನಿಖೆಯಾದರೆ ಅದು ಸೀದಾ ಹೋಗಿ ಮುಟ್ಟುವುದು ಸಂಘಪರಿವಾರದವರ ಬುಡಕ್ಕನೇ. ಹಾಗಾಗಿ ಈ ನಕಲಿ ಟ್ವೀಟರ್ ಖಾತೆ ಬಗ್ಗೆ ತನಿಖೆ ಆಗಲೇ ಇಲ್ಲ.

ಚಂಡೀಗಢ್ ವಿಮಾನ ನಿಲ್ದಾಣಕ್ಕೆ ಶಹೀದ್ ಭಗತ್ ಸಿಂಗ್ ಇವರ ಹೆಸರಿಡಬೇಕು ಎಂದು ಹಿಂದೆ ಯುಪಿಎ ಸರಕಾರವಿದ್ದಾಗಲೇ ನಿರ್ಧಾರವಾಗಿತ್ತು. ಆದರೆ ಈಗಿನ ನಕಲಿ ದೇಶಭಕ್ತ ಸರಕಾರ ಅಧಿಕಾರಕ್ಕೆ ಬಂದಕೂಡಲೇ ಹರ್ಯಾಣ ರಾಜ್ಯ ಸರಕಾರ ಭಗತ್‌ಸಿಂಗರ ಬದಲು ಆರ್‌ಎಸ್‌ಎಸ್ ನೇತಾರ ಮಂಗಲ್ ಸೈನ್ ಎಂಬಾತನ ಹೆಸರು ಆ ವಿಮಾನ ನಿಲ್ದಾಣಕ್ಕೆ ಇಡಬೇಕೆಂದು ಶಿಫಾರಸು ಮಾಡಿದೆ. ಇದು ಯಾವ ಪರಿ ದೇಶಪ್ರೇಮ ನೋಡಿ!

ಕೆಲವು ದಿನಪತ್ರಿಕೆಗಳು "ದಿನಕ್ಕೊಂದು ಸುಭಾಷಿತ" ಎಂಬ ಆಧ್ಯಾತ್ಮಿಕ ಅಂಕಣ ಪ್ರಸಾರ ಮಾಡುತ್ತವೆ. ಇನ್ನು ಮುಂದೆ ಅವು "ದಿನಕ್ಕೊಂದು ಸುಳ್ಳು - ಪ್ರಧಾನ ಸೇವಕರಿಂದ" ಎಂಬ ಅಂಕಣ ಶುರು ಮಾಡಿದರೆ ಒಳಿತು. ಯಾಕೆಂದರೆ ಮೋದಿಯವರು 2014 ರಿಂದಲೂ ತಾನು ಭೇಟಿ ಕೊಡುತ್ತಿರುವ ಸ್ಥಳದ ವಿಶೇಷತೆಗೆ ಅನುಗುಣವಾಗಿ ಒಂದೊಂದು ಸುಳ್ಳು ಹೇಳಿ ಸಾಮಾಜಿಕ ಜಾಲತಾಣದಲ್ಲಿ ಹಾಸ್ಯದ ವಸ್ತು ಆಗುತ್ತಿರುವುದು ನಡೆದೇ ಇದೆ. ಇತ್ತೀಚೆಗೆ ಅಸ್ಸಾಮಿಗೆ ಚುನಾವಣೆ ಪ್ರಚಾರಕ್ಕೆ ಹೋದಾಗ ತಾನು ಚಿಕ್ಕಂದಿನಲ್ಲಿ ಗುಜರಾತಿನಲ್ಲಿ ಕೇವಲ ಅಸ್ಸಾಮ್ ಟೀ ಮಾರುತ್ತಿದ್ದುದಾಗಿ ಹೇಳಿದ್ದಾರೆ. ಮಂಗಳೂರಿಗೆ ಬಂದಿದ್ದಾಗ ತಾನು ರಾಜಕೋಟ್‌ನಲ್ಲಿದ್ದ ಉಡುಪಿ ಶೆಟ್ಟರ ಹೋಟೆಲಿನಲ್ಲಿ ಕೆಲಸ ಮಾಡುತ್ತಾ ಟೀ ಚೆನ್ನಾಗಿ ಮಾಡುವುದು ಕಲಿತಿದ್ದಾಗಿ ಹೇಳಿದ್ದರು. ಮೈಸೂರಿಗೆ ಹೋದಾಗ ತಾನು ಕೊಡಗಿನ ಕಾಫಿ ಮತ್ತು ನೀಲಗಿರಿ ಟೀ ಮಾರುತ್ತಿದ್ದುದಾಗಿ ಹೇಳಿದ್ದರು. ಹೀಗೆ ಅವರ 56 ಇಂಚು ನಾಲಿಗೆ ನಿಲ್ಲುತ್ತಲೇ ಇಲ್ಲ.

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು



ಮೋದಿ ನಾಟಕಕ್ಕೆ ಶಿಷ್ಯನ ಕೋಡಂಗಿ ಪಾತ್ರ

ಕಳೆದ ಯುಪಿಎ ಸರಕಾರದ ಕೊನೆಯ ಎರಡು ವರ್ಷಗಳಿಂದ ಭರ್ಜರಿ ಪ್ರಚಾರಕ್ಕಾಗಿ ಬಳಸಿಕೊಂಡ ಮೋದಿ ಭಜನೆಯ ಕ್ಯಾಸೆಟ್ ಸೀಡಿಗಳನ್ನು ಈಗ ಮೂಸುವವರೇ ಇಲ್ಲ, ಆಗೊಂದು ಕಾಲವಿತ್ತು. ಸಾಮಾಜಿಕ ಜಾಲತಾಣ, ಪ್ರಿಂಟ್ ಹಾಗು ಇಲೆಕ್ಟ್ರಾನಿಕ್ ಮೀಡಿಯಾವನ್ನು (ದುರ್) ಉಪಯೋಗಿಸಿಕೊಂಡ ಚೆಡ್ಡಿ ಪಡೆ ಭಾರತವನ್ನು ಕಾಪಾಡಲು ದೇವರೇ ಕಳುಹಿಸಿದಂತಹ ವಿಷ್ಣುವಿನ ಹನ್ನೊಂದನೇ ಅವತಾರ ಎಂಬ ಮಟ್ಟಕ್ಕೆ ಮೋದಿಯನ್ನು ಬಿಂಬಿಸಿದ್ದವು. ಅದು ಯಾವ ರೀತಿಯಲ್ಲಿಂದರೆ ಜನರೂ ಅದನ್ನು ಬಹುತೇಕ ನಂಬೇ ಬಿಟ್ಟಿದ್ದರು. ಆಗ ಜನರು ಬೇಸ್ತು ಬಿದ್ದಿರಬಹುದು ಆದರೆ ಅವರು ಹುಟ್ಟು ಮೂರ್ಖರೇನೂ ಅಲ್ಲ ತಾನೆ? ಅದನ್ನು ತೋರಿಸಿಕೊಡುವಂತೆ ಡೆಲ್ಲಿ ಮತ್ತು ಬಿಹಾರದಲ್ಲಿ ಮೋದಿ ಅಲೆಯ ಟೊಳ್ಳುತನವನ್ನು ಪ್ರಪಂಚಕ್ಕೆ ಇದೇ ಜನ ಎತ್ತಿ ತೋರಿಸಿದ್ದು ಇತಿಹಾಸ.

ಮೋದಿ ಅಧಿಕಾರಕ್ಕೇರುವ ಮೊದಲು ಅಥವಾ ಅಧಿಕಾರಕ್ಕೇರಿದ ಆರಂಭದಲ್ಲಿ ಬೇಡಿಕೆಯಿದ್ದಂತಹ ಹೀಮ್ಯಾನ್ ಮೋದಿಯ ಅತಿರಂಜಿತ ಕತೆ ಹಬ್ಬಿಸುವ ಚಾಳಿಯನ್ನು ಮೋದಿ ಮಂತ್ರಿಮಂಡಲದ ಗ್ರೇಟ್ ಮಂತ್ರಿಯೊಬ್ಬ ಮೊನ್ನೆ ಪುನರಾರಂಭಿಸಲು ಹೋಗಿ ಜನರಿಂದ ಎಕ್ಕಾಮುಕ್ಕ ಉಗಿಸಿಕೊಂಡಿದ್ದ. ಫ್ರೆಂಚ್ ಭವಿಷ್ಯಕಾರ ನಾಸ್ಟ್ರಡೊಮಸ್ ನಾಲ್ಕುವರೆ ಶತಮಾನಗಳ ಹಿಂದೆಯೇ ಮೋದಿಯ ಬಗ್ಗೆ ಹೇಳಿದ್ದನಂತೆ. ಅದು ಹತ್ತರಲ್ಲಿ ಒಂದು ಎನ್ನುವಂತಹ ಉಲ್ಲೇಖವಲ್ಲ; ದೇಶಕ್ಕೆ ಅಲ್ಲ, ಇಡೀ ವಿಶ್ವಕ್ಕೇ ಸಂಬಂಧಿಸಿದ ಉಲ್ಲೇಖವಂತೆ. 2014 ರಿಂದ 2026ರ ವರೆಗೆ ಭಾರತವನ್ನಾಳುವ ಮೋದಿ ಭಾರತವನ್ನು ಸುವರ್ಣಯುಗಕ್ಕೆ ಕೊಂಡೊಯ್ಯುತ್ತಾನಲ್ಲದೇ ಇಡೀ ವಿಶ್ವವೇ ಅವನಿಗೆ ತಲೆಬಾಗುತ್ತದಂತೆ. ಉಪೇಂದ್ರನ ಯಾವುದೋ ಗೊಡ್ಡು ಸಿನಿಮಾದಂತೆ ವಿದೇಶಿಯರು ನಮ್ಮೀ ಭಾರತವನ್ನಾಶ್ರಯಿಸುತ್ತಾರಂತೆ. ಕೇಳಲು ಎಷ್ಟು ಮಜವಾಗಿದೆಯಲ್ಲ; ಇದು ಯಾವುದೋ ದಾರಿಬದಿ ಕವಡೆ ಜೋತಿಷಿ ಅಥವ ಬಾರೊಂದರಲ್ಲಿ ಟೈಟಾದ ವ್ಯಕ್ತಿಯೊಬ್ಬನಿಂದ ಬಂದಂತಹ ಅಭಿಪ್ರಾಯವಲ್ಲ, ಮಾನ್ಯ ಜವಾಬ್ದಾರಿಯುತ ಕೇಂದ್ರ ಮಂತ್ರಿಯೊಬ್ಬರು ತಮ್ಮ ಫೇಸ್‌ಬುಕ್ಕಿನಲ್ಲಿ ತನ್ನ ಸಂಪುಟದ ನಾಯಕನ ಬಗ್ಗೆ ಕೊಚ್ಚಿಕೊಂಡಿದ್ದು. (ಚೆಡ್ಡಿಗಳ ಮಾಮೂಲಿ ಚಾಳಿಯಂತೆ ಟೀಕೆಗಳು ಬಂದ ಮೇಲೆ ಈತ ಅದು ನನ್ನ ಅಧಿಕೃತ ಅಕೌಂಟ್ ಅಲ್ಲ ಅಂದನಾದರೂ ಆತ ಅದನ್ನು ಪ್ರತಿನಿತ್ಯ ಬಳಸುತ್ತಿದ್ದ ಬಗ್ಗೆ ಸಾಕ್ಷ್ಯಾಧಾರಗಳನ್ನಿಟ್ಟು ಕೇಳಿದಾಗ ಆತ ಬಾಯಿ ತೆರೆಯಲಿಲ್ಲ.)

ಕಿರಣ್ ರಿಜಿಜು ಪ್ರಕಾರ ನಾಸ್ಟ್ರಡೊಮಸ್ ಹೇಳುವಂತೆ ಈ ನಾಯಕನನ್ನು ಮೊದಲಿಗೆ ಹೆಚ್ಚಿನವರು ದ್ವೇಷಿಸಿದರೂ ದಿನಗಳೆದಂತೆ ಕೊನೆಗೆ ಎಲ್ಲರೂ ಮೆಚ್ಚುತ್ತಾರಂತೆ. ವಾಸ್ತವವಾಗಿ ಅದು ಮೋದಿಯ ವಿಚಾರದಲ್ಲಿ ತೀರಾ ಉಲ್ಟಾ ಆಗಿದೆ. ಆರಂಭದಲ್ಲಿ ಕೋಟ್ಯಾಂತರ ಸಂಖ್ಯೆಯಲ್ಲಿದ್ದ ಆತನ ಅಭಿಮಾನಿಗಳು ಈಗ ಕಾಲುಭಾಗದಷ್ಟು ಇಲ್ಲ. ಇದ್ದರೂ ಕೂಡ ಮೊದಲಿನ "ಮಹಾನ್ ಹೀಮ್ಯಾನ್ ಮೋದಿ" ಎನ್ನುವ ಭಾವ ಖಂಡಿತಾ ಅವರ್‍ಯಾರೂ ಹೊಂದಿಲ್ಲ. ಮೋದಿಯೂ ದಿನಕಳೆದಂತೆ ಕಳಪೆ ಟೆಕ್ನಿಕ್‌ಗಳ ಮೊರೆಹೋಗುತ್ತಿದ್ದಾನೆಯೇ ಹೊರತು ದೊಡ್ಡ ದೇಶವೊಂದರ ಪ್ರಧಾನಿಯಂತೆ ನಡೆದುಕೊಳ್ಳಲು ಇನ್ನಿಲ್ಲದ ಪಡಿಪಾಟಲು ಪಡುತ್ತಿದ್ದಾನೆ. ಉದಾಹರಣೆಗೆ ಮೊನ್ನೆ ಡೆಲ್ಲಿಯಲ್ಲಿ ನಡೆದ ಸಾಬರ ಸೂಫಿ ಸಮಾರಂಭಕ್ಕೆ ಹೋಗಿ ಇಸ್ಲಾಮ್ ಹಾಗು ಅವರು ಪೂಜಿಸುವ ಅಲ್ಲಾನನ್ನೂ ಇನ್ನಿಲ್ಲದಂತೆ ಅಟ್ಟಕ್ಕೇ[…] ಹೊಗಳುತ್ತಾನೆ. ಹಿಂದೆ ತಾನು ಮಾಡಿರುವುದು ಹಾ[…] ಈಗ ತಮ್ಮವರು ಮುಂದುವರೆಸುತ್ತಿರುವುದನ್ನು ಮರೆಮ[…] ಧರ್ಮಕ್ಕೂ ಭಯೋತ್ಪಾದನೆಗೂ ತಳಕು ಹಾಕುವುದ[…] ನಾಟಕೀಯವಾಗಿ ಖಂಡಿಸುತ್ತಾನೆ. (ಕಾಂಗ್ರೆಸ್ಸಿಗರು ಈ ರೀ[…] ಮಾತನ್ನಾಡಿದರೆ ಚೆಡ್ಡಿಗಳು "ತುಷ್ಟೀಕರಣ" ಎಂ[…] ಕೂಗೆಬ್ಬಿಸುತ್ತವೆ. ಮೋದಿಯ ಪರಿಸ್ಥಿತಿ ಅವಕ್ಕೂ ತಿಳಿದಿರು[…] ಕಾರಣಕ್ಕೆ ಬಾಯ್ಮುಚ್ಚಿಕೊಂಡು ಸುಮ್ಮನಿವೆ.)


ಚೆಡ್ಡಿ ಸರಕಾರದ ಹಿನ್ನೆಲೆಯ ಸೂತ್ರಧಾರ ಮೋಹ[…] ಭಾಗವತ್ ಮೀಸಲಾತಿ ವಿರುದ್ಧ ಮಾತನ್ನಾಡಿದಾಗ ಬಾಯ[…] ಇಪ್ಪತ್ತೊಂದು ಲಿವರ್‌ನ ಬೀಗ ಹಾಕಿಕೊಂಡಿದ್ದ ಮೋ[…] ಅಂಬೇಡ್ಕರರ ಕುರಿತ ಕಾರ್ಯಕ್ರಮದಲ್ಲಿ ಈಗ ಅಂಬೇಡ್[…] ಹೇಳಿದರೂ ಮೀಸಲಾತಿ ತೆಗೆಯಲಾರೆ ಎನ್ನುತ್ತಾ ತಾನೂ[…] ಅಂಬೇಡ್ಕರ್ ಭಕ್ತ ಎಂದು ಈ ಗೋಲ್ವಾಲ್ಕರ್-ಹಿಟ್ಲ[…] ಭಕ್ತ ಭೋಂಗು ಬಿಡುತ್ತಾನೆ. ಇದಕ್ಕೂ ತಮಾಷೆಯ[…] ಮೊನ್ನೆ ಅಸ್ಸಾಮಿನ ಚುನಾವಣಾ ಪ್ರಚಾರಕ್ಕೆ ಹೋಗಿ ಅ[…] ತನ್ನ ಹಳಸಲು 'ಚಾಯ್ ವಾಲಾ' ಟೆಕ್ನಿಕನ್ನೇ ತಿರು[…] ತಾನು ಮಾರುತ್ತಿದ್ದದ್ದು ಅಸ್ಸಾಮ್ ಟೀ ಎಂದು ಹ[…] ಕಿಸಿಯುತ್ತಾನೆ. ಇಂತಹ ನಾಲಾಯಕ್‌ನನ್ನು (ಏಕೈಕ ಹಿಂದ[…] ರಾಷ್ಟ್ರ ಎಂದು ಹಿಂದೂಗಳು ಕೊಚ್ಚಿಕೊಳ್ಳುವ ನೇಪ[…] ಇದೀಗ ಭಾರತದಿಂದ ದೂರವಾಗಿ ನಮ್ಮ ಶತ್ರುರಾ[…] ಚೀನಕ್ಕೆ ಹತ್ತಿರವಾಗುತ್ತಿದೆಯಲ್ಲದೇ ಚೀನಾ ಇದೀಗ ರೈ[…] ಸಂಪರ್ಕಕ್ಕೂ ಮುಂದಡಿಯಿಟ್ಟಿದೆ. ಇದು ವಿದೇಶಿಯ[…]



ಪೇಜಾವರ ಶ್ರೀಗಳ ಮೌನದ ಮರ್ಮವೇನು?

ಪ್ರತಿಯೊಂದು ಧಾರ್ಮಿಕ ಅಥವಾ ರಾಜಕೀಯ ವಿಷಯದಲ್ಲಿ ಯಾರೂ ಕೇಳದಿದ್ದರೂ ತಮ್ಮ ಪರಿಣಿತ ಅಭಿಪ್ರಾಯ ಕೊಡುವುದು ಪೇಜಾವರ ಶ್ರೀಗಳ ಅತ್ಯಂತ ನೆಚ್ಚಿನ ಹವ್ಯಾಸ. ಆದರೆ ತಮ್ಮದೇ ಕರಾವಳಿಯ ಪುತ್ತೂರು ಮಹಾಲಿಂಗೇಶ್ವರ ದೇವಾಲಯದ ಕರಪತ್ರದ ವಿವಾದದಲ್ಲಿ ಈವರೆಗೂ ಪೇಜಾವರರು ಬಾಯಿ ಬಿಚ್ಚಿಲ್ಲವೆಂಬುದು ಅತಿ ಆಶ್ಚರ್ಯ. ಅವರ ಆರೋಗ್ಯ ಸರಿಯಾಗಿದೆ ಎಂದು ಆಶಿಸೋಣ. ಬಹುಶಃ ಜನವರಿ ತಿಂಗಳಲ್ಲಿ ಅತಿ ವೈಭವದಿಂದ ನಡೆದ ಅವರ ಪರ್ಯಾಯಕ್ಕೆ ಮಂಗಳೂರು ಡಿಸಿ ಇಬ್ರಾಹಿಮರು ಸಹ ಕಾನೂನಿನ ಮಿತಿಯೊಳಗೆ ತಮ್ಮಿಂದ ಆದಷ್ಟು ಗರಿಷ್ಠ ಸಹಾಯ ಮಾಡಿದ್ದರೆಂಬ ಕೃತಜ್ಞತೆಯ ಭಾರದಿಂದ ಪೇಜಾವರರು ಮೌನವಾಗಿರುವರು ಎಂದು ಭಾವಿಸಬಹುದೇ?

ಪೇಜಾವರರ ಕಾರ್ ಡ್ರೈವರ್ ಮುಸ್ಲಿಮನಾಗಿದ್ದು ಅವನು ಪರ್ಯಾಯದ ಸಂದರ್ಭದಲ್ಲಿ ಮಠದ ಪರವಾಗಿ ಮುಸ್ಲಿಮರ ಬೃಹತ್ ರಕ್ತದಾನ ಶಿಬಿರ ಆಯೋಜಿಸಿದ್ದಕ್ಕಾಗಿ ದುಬೈಯಿಂದ ಯಾರೋ ಮುಸ್ಲಿಮರು ಅವನಿಗೆ ಜೀವ ಬೆದರಿಕೆ ಕರೆ ಮಾಡಿದ್ದರು ಎಂಬ ಆರೋಪದ ಮೇಲೆ ಉಡುಪಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು, ಆದರೆ ಈಗ ಎರಡು ತಿಂಗಳಿಗಿಂತಲೂ ಹೆಚ್ಚು ಸಮಯವಾದರೂ ಆ ಬೆದರಿಕೆ ಕರೆಯ ಮೂಲ ಉಡುಪಿ ಪೊಲೀಸರು ಕಂಡುಹಿಡಿಯದಿರುವುದು ಖೇದಕರ. ಒಂದು ಸೂತ್ರದ ಪ್ರಕಾರ ಇಂತಹ ಯಾವುದೇ ಬೆದರಿಕೆ ಕರೆ ಮಠದ ಡ್ರೈವರನಿಗೆ ಬಂದೇ ಇರಲಿಲ್ಲ, ಕೇವಲ ಪೇಜಾವರರ ಡ್ರೈವರ್ ಮುಸ್ಲಿಮನಾಗಿದ್ದಾನೆ ಹಾಗೂ ಅವರು ಕೋಮು ಸೌಹಾರ್ದದಲ್ಲಿ ಭಾರಿ ನಂಬಿಕೆಯುಳ್ಳವರು ಮತ್ತು 1992 ಬಾಬ್ರಿ ಧ್ವಂಸದಲ್ಲಿ ಅವರು ಪಾಲುಗೊಂಡಿರಲಿಲ್ಲ ಎಂಬುದಾಗಿ ಪ್ರಚಾರ ಮಾಡಲು ಅವರ ಮುಸ್ಲಿಂ ಡ್ರೈವರ್‌ಗೆ ಬೆದರಿಕೆ ಕರೆ ಬಂದಿತ್ತು ಎಂಬ ಪೊಳ್ಳು ವದಂತಿ ವಿಎಚ್‌ಪಿ ಸದಸ್ಯರೇ ಹಬ್ಬಿಸಿದ್ದರು ಎಂಬ ಆರೋಪ ನಿಜವಿರಬಹುದೇ?



ಕಳೆದ ಸೋಮವಾರ ಉಡುಪಿ ಮಠದ ಒಳಗೆಯೇ ಒಂದು ಭಜನೆ ಕಾರ್ಯಕ್ರಮ ನಡೆಯಿತು. ಅದರಲ್ಲಿ ಏಳು ಯತಿಗಳ ನಡುವೆ ಕುಳಿತು ಸ್ವತಃ ಪೇಜಾವರ ಶ್ರೀಗಳು ಭಯಂಕರವಾಗಿ ತಬಲಾ ಬಾರಿಸುವ ಚಿತ್ರ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಹೆಚ್ಚಿನ ಎಲ್ಲಾ ಚರ್ಮವಾದ್ಯಗಳು ಎಮ್ಮೆ ಆಕಳು ಅಥವಾ ಆಡಿನ ಚರ್ಮದಿಂದ ತಯಾರಾದರೆ ಕೆಲವು ಪಾಶ್ಚಾತ್ಯ ಮಾದರಿ ಚರ್ಮವಾದ್ಯಗಳು ಜಪಾ[…] ಸಿಂಥೆಟಿಕ್ (ಕೃತ್ರಿಮ) ಚರ್ಮದಿಂದ ತಯಾರಾಗುತ್ತ[…] ಇಂತಹ ಕೃತ್ರಿಮ ಚರ್ಮದಿಂದ ತಯಾರಾದ ವಾದ್ಯಗಳ[…] ಸ್ವಾಮಿಗಳು ಮುಟ್ಟಿದರೆ ಮೈಲಿಗೆ ಆಗುವುದಿಲ್ಲ ನಿ[…] ಆದರೆ ನೈಜ ಪ್ರಾಣಿಗಳ ಚರ್ಮದಿಂದ ಮಾಡಿದ ವಾದ್ಯಗಳ[…] ಮುಟ್ಟಿದರೆ ಸ್ವಾಮಿಗಳಿಗೆ ಭಾರಿ ಮೈಲಿಗೆಯಾಗುತ್ತ[…] ಮೂಲತಃ ಇಂತಹ ನಿಜ ಚರ್ಮದ ವಾದ್ಯಗಳ[…] ಮಠದೊಳಗೆ ತರುವುದೇ ಅಪಚಾರ. ಆದರೆ ಮೊ[…] ಮಠದ ಒಳಗೆಯೇ ಸ್ವತಃ ಪೇಜಾವರ ಶ್ರೀಗಳು ಆ[…] ಚರ್ಮದಿಂದ ಮಾಡಿರುವ ತಬಲಾ ಮುಟ್ಟಿ ಮುಟ್ಟಿ ಬಾರಿ[…] ಸಂಭ್ರಮಿಸಿದ್ದು ಶೂದ್ರ ದೇವರಾದ ಕೃಷ್ಣನಿಗೆ ಮೈಲಿಗೆಯ[…] ದಿದ್ದರೂ ಮಠದ ಸ್ಥಾಪಕ ಮಧ್ವರಾಜರಿಗೆ ಭಾರಿ ಮೈಲಿ[…] ಆಗಿದೆ. ಇದಕ್ಕೆ ಪರಿಹಾರವಾಗಿ ಸ್ವಾಮೀಜಿಗಳು ಏನೇ[…] ಪ್ರಾಯಶ್ಚಿತ್ತ ಮಾಡಲಿರುವರು ಎಂದು ನಮ್ಮಂತಹ ಪಾ[…] ಜನರಿಗೆ ತಿಳಿದರೆ ಒಳಿತು.

ತ್ರಿಮತಸ್ಥ ಬ್ರಾಹ್ಮಣರು ತಮ್ಮ ಮೂರು ಉಪಜಾ[…] ಯೊಳಗೆ ಮದುವೆಯಾದರೆ ಅಭ್ಯಂತರವಿಲ್ಲ, ಆದರೆ ಕೆಳಜಾ[…] ಯ ಹುಡುಗಿಯೊಂದಿಗೆ ಬ್ರಾಹ್ಮಣರು ಅಂತರ್ಜಾತಿ ವಿವಾ[…] ಆಗುವುದು ತಮಗೆ ಸಮ್ಮತವಿಲ್ಲ ಎಂದು ಪೇಜಾವ[…] ಶ್ರೀಗಳು ಇತ್ತೀಚೆಗೆ ಹೇಳಿಕೆ ಕೊಟ್ಟಿದ್ದರು. ಆದರೆ ನಿನ್ನೆಯ[…] ಕಟೀಲು ದೇವಸ್ಥಾನದ ಒಬ್ಬ ಮಧ್ಯ ವಯಸ್ಸಿನ ಅರ್ಚಕ[…] ಹುಬ್ಬಳ್ಳಿಯ ಒಂದು ಅನಾಥ ಹುಡುಗಿಯನ್ನು ಮದುವೆಯಾಗಿ ಘನ ಕೆಲಸ ಮಾಡಿ ಎಲ್ಲಾ ವೈದಿ[…] ಸ್ವಾಮಿಗಳ ಮುಖಕ್ಕೆ ಹೊಡೆದಿರುವುದು ಸ್ತುತ್ಯಾರ್ಹ.

-ಹರೀಶ್ ಎಮ್.ಆರ್. ಉಡು[…]

ನಮ್ಮನ್ನಾಶ್ರಯಿಸಲು ಕಾರಣೀಕರ್ತನಾಗುವ ನಮ್ಮ ಮೋದಿಯ ಕೊಡುಗೆ) ಐನೂರು ವರ್ಷಗಳ ಹಿಂದೆ ನಾಸ್ಟ್ರಡ ಭುಸ್ ಕೊಂಡಾಡಿ ಬರೆದಿಟ್ಟದ್ದನೆಂದರೆ ಎಂಥಾ ಗತಿಗೇಡಿ ಆತನಿದ್ದಿರಬೇಕು.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ನಾಸ್ಟ್ರಡಾಮಸ್‌ಗೆ ಫ್ರೆಂಚ್ ಹುಚ್ಚು ನಾಯಿ ಕಡಿದಿತ್ತೇ?

ಪ್ರಧಾನಿ ಮೋದಿ 2014 ರಿಂದ 2026 ರ ವರೆಗೆ ಭಾರತದಲ್ಲಿ ಆಡಳಿತ ಚುಕ್ಕಾಣಿ ಹಿಡಿಯುತ್ತಾರೆ ಹಾಗೂ ಅವರ ಕಾಲದಲ್ಲಿ ಭಾರತಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೇ ಸ್ವರ್ಣಕಾಲವಾಗಲಿದೆ ಎಂದು ಫ್ರಾನ್ಸ್ ದೇಶದ ಕಾಲಜ್ಞಾನಿ ನಾಸ್ಟ್ರಡಾಮಸ್ 450 ವರ್ಷಗಳ ಹಿಂದೆಯೇ ಭವಿಷ್ಯ ನುಡಿದಿದ್ದಾನೆಂದು ಕೇಂದ್ರ ಸಹಾಯಕ ಗೃಹ ಸಚಿವ ಕಿರಣ್ ರಿಜಿಜು ತನ್ನ ಫೇಸ್ಬುಕ್ಕಿನಲ್ಲಿ ಪ್ರಕಟಿಸಿ ಅಚ್ಚರಿಯ ವಿಷಯ ಎಂಬ ತಲೆಬರಹ ಅಂಟಿಸಿದ್ದಾರಂತೆ. ಇದನ್ನು ಓದಿದ ನಾಸ್ಟ್ರಡಾಮಸ್-ಈ ಭಾರತೀಯರು ಎಷ್ಟು ದೊಡ್ಡ ಫೇಕೂಗಳು ಎಂದು ಹಳಿಯುತ್ತಾ - ತನ್ನ ಗೋರಿಯೊಳಗೆಯೇ ಹೊರಳಾಡುತ್ತಾ ತನ್ನ ಕುಂಡೆಗೆ ತಾನೇ ಒದೆದುಕೊಳ್ಳುತ್ತಿರಬಹುದು. ಭಾರತದೊಳಗೆಯೇ ಲಕ್ಷಾಂತರ ಕಳ್ಳ ಜ್ಯೋತಿಷಿಗಳು ಇರುವಾಗ ತನ್ನ ಹೆಸರನ್ನು ಈ ಸುಳ್ಳರು ಯಾಕೆ ಕೆಡಿಸುತ್ತಿದ್ದಾರೆ ಎಂದು ನಾಸ್ಟ್ರಡಾಮಸನ ಆತ್ಮ ಕೂಗುತ್ತಿರಬಹುದು. ರಾಷ್ಟ್ರಭಕ್ತಿ ಬಗ್ಗೆ ವಿಪರೀತ ನಾಟಕ ಆಡುವ ಬಿಜೆಪಿ ಪಕ್ಷದವರೇ ಒಬ್ಬ ವಿಕ್ಷಿಪ್ತ ವಿದೇಶಿ ಕಾಲಜ್ಞಾನಿಯ ಹೆಸರು ದುರುಪಯೋಗಪಡಿಸಿ ತನ್ನ ತಾಯಿ ನಾಡನ್ನೇ ಪೆದ್ದು ಮಾಡಿ ದೇಶದ್ರೋಹ ಬಗೆಯುತ್ತಿರುವಾಗ ಈ ಕಿರಣ್ ರಿಜಿಜುವಿನ ದೇಶಭಕ್ತಿಯ ವಿಕಿರಣ ಎಲ್ಲಿ ಅಡಗಿತ್ತೋ? ಏನಾದರೊಂದು ಮೂರ್ಖತನ ತೋರಿ ನಗೆಪಾಟಲಿಗೀಡಾಗುವುದು ಬಿಜೆಪಿಯವರ ಜಾಯಮಾನ.

ಮೂಲತಃ ಈ ನಾಸ್ಟ್ರಡಾಮಸ್ ಬರೆದಿರುವುದು ಫ್ರೆಂಚ್ ಭಾಷೆಯಲ್ಲಿ ಹಾಗೂ ಒಗಟು ರೂಪದ ಕಾವ್ಯಮಯ ರೀತಿಯಲ್ಲಿ. ಈವರೆಗೂ ಅವನು ಬರೆದಿರುವುದು ನಿರ್ದಿಷ್ಟವಾಗಿ ಏನು ಎಂದು 450 ವರ್ಷಗಳಿಂದ ಹೇಳಲು ಯಾರಿಗೂ ಸಾಧ್ಯವಾಗಿಲ್ಲ. ಒಗಟುಗಳು ಹಾಗೂ ನಿಗೂಢ ರೇಖಾಚಿತ್ರಗಳೇ ಅವನ ಪುಸ್ತಕದಲ್ಲಿ ತುಂಬಿವೆಯಂತೆ. ಸ್ವತಃ ಫ್ರೆಂಚ್ ವಿದ್ವಾಂಸರಿಗೇ ಅರ್ಥವಾಗದ ಈ ಕಾವ್ಯ ರೂಪದ ಒಗಟುಗಳು ಕಿರಿಕ್ ರಿಜಿಜುಗೆ ಅರ್ಥ ಹೇಗಾಯಿತೋ? ಜಗತ್ತಿನಲ್ಲಿ ಯಾವುದೇ ಘಟನೆ ಘಟಿಸಿ ಹೋದಮೇಲೆ ಅದನ್ನು ನಾಸ್ಟ್ರಡಾಮಸ್‌ನ ಯಾವುದಾದರೂ ಒಂದು ಒಗಟಿಗೆ ಹೋಲಿಸುವುದು ಜಗತ್ತಿನೆಲ್ಲೆಡೆ ನಡೆದು ಬಂದ ರೂಢಿ. ಯಾವುದೇ ಘಟನೆ ಘಟಿಸುವುದಕ್ಕೆ ಮುಂಚೆ ಅವನ ಒಗಟಿನ ಅರ್ಥ ಹೇಳಿ ಮುನ್ನೆಚ್ಚರಿಕೆ ವಹಿಸಲು ಇವತ್ತಿನವರೆಗೂ ಯಾರಿಂದಲೂ ಸಾಧ್ಯವಾಗಿಲ್ಲ. ಒಂದು ವೇಳೆ ಅದು ಸಾಧ್ಯವಾಗಿದ್ದರೆ ಒಂದನೇ ವಿಶ್ವಯುದ್ಧ ಅಲ್ಲದಿದ್ದರೂ ಎರಡನೇ ವಿಶ್ವಯುದ್ಧ ತಪ್ಪಿಸಲು ಸಾಧ್ಯವಿತ್ತು. ಇಂದಿರಾ ಗಾಂಧಿ ಬಗ್ಗೆ ನಾಸ್ಟ್ರಡಾಮಸ್ ಹೇಳಿದ್ದಾನೆಂದು ಪ್ರಚಾರ ಮಾಡಿದ್ದೆಲ್ಲ ಬೋಗಸ್ ಎಂದು ಎಂದೋ ಸಾಬೀತಾಗಿದೆ. ಇಡೀ ಜಗತ್ತೇ ಗೌರವಿಸುವ ಮಹಾತ್ಮ ಗಾಂಧೀಜಿ ಮತ್ತು ಡಾ.ಅಂಬೇಡ್ಕರ್ ಇವರ ಬಗ್ಗೆ ನಾಸ್ಟ್ರಡಾಮಸ್ ಏನೂ ಬರೆಯದಿರುವಾಗ ಮೋದಿಯ ಬಗ್ಗೆ ವೈಭವೀಕರಿಸಿ ಭವಿಷ್ಯ ಹೇಳಲು ಅವನಿಗೆ ಫ್ರೆಂಚ್ ಹುಚ್ಚು ನಾಯಿ ಕಡಿದಿತ್ತೇ?


ಏನೇ ಆಗಲಿ ನಾಸ್ಟ್ರಡಾಮಸ್ ಭಾರತೀಯ ಮೂಲದವನಿರಬೇಕು ಎಂದು ನನ್ನ ಬಲವಾದ ಸಂಶಯ. ಯಾಕೆಂದರೆ ಅವನು ಎಲ್ಲವನ್ನೂ ನಮ್ಮ ವೈದಿಕರಂತೆಯೇ ಒಗಟಿನ ರೂಪದಲ್ಲಿ ಹಾಗೂ ವಿಚಿತ್ರ ಭಾಷೆಯಲ್ಲಿ ದ್ವಂದ್ವಾರ್ಥದಲ್ಲಿಯೇ ಹೇಳಿದ್ದಾನೆ. ಭಾರತಿಯ ವೈದಿಕರಿಗೂ ಏನನ್ನೂ ನೇರವಾಗಿ ಜನರ ಆಡುಭಾಷೆಯಲ್ಲಿ ಹೇಳುವ ಅಭ್ಯಾಸ ಹಿಂದಿನ ಕಾಲದಲ್ಲಿ ಇರಲಿಲ್ಲ ಹಾಗೂ ಈಗಲೂ ಇಲ್ಲ. ಯಾರಿಗೂ ತಿಳಿಯದ ಸಂಸ್ಕೃತ ಎಂಬ 'ಕೋಡ್' ಭಾಷೆಯನ್ನೇ ವೈದಿಕರು ಬಳಸುತ್ತಿದ್ದದ್ದು.

ನನ್ನ (ಕು)ಸಂಶೋಧನೆ ಪ್ರಕಾರ ಗುಜರಾತಿನ ನವಸಾರಿ ಎಂಬ ನಗರಕ್ಕೆ 500 ವರ್ಷಗಳ ಹಿಂದೆ ನವಸ್ಥಿರ ಎಂಬ ಹೆಸರಿತ್ತು ಹಾಗೂ ಅಮಿತ್ ಶಾ ಇವರ ಪೂರ್ವಜ ದಾಮೇಶ್ ಶಾ ಅಲ್ಲಿ ಜ್ಯೋತಿಷಿಯಾಗಿದ್ದ. ಈ ನವಸ್ಥಿರ ದಾಮೇಶ್ ಶಾ ಎಂಬವನೇ ಫ್ರಾನ್ಸಿಗೆ ವಲಸೆ ಹೋಗಿ ನಾಸ್ಟ್ರಡಾಮಸ್ ಆಗಿರುವಂತಿದೆ. ನನ್ನ ಈ (ಕು)ಸಂಶೋಧನೆಯಿಂದ ಖುಷಿಯಾಗಿ ಮೋದಿ-ಅಮಿತ್ ಶಾ ಜೋಡಿ ನನಗೆ ಈ ವರ್ಷ ಪದ್ಮ-ವಿಭೂಷಣ ಕ್ಷಮಿಸಿ ಪದ್ಮವಿಭೂಷಣ ಕೊಟ್ಟರೂ ಕೊಡಬಹುದು. ಈ ಪುರಸ್ಕಾರಗಾಗಿ ಯಾವುದಾದರೂ ಢೋಂಗಿ ಕಾವಿಧಾರಿಯ ಶಿಫಾರಸಿನೊಂದಿಗೆ ಈಗಲೇ ನಾಗಪುರ್ ಹೆಡ್ ಆಫೀಸಿಗೆ ಅರ್ಜಿ ಗುಜರಾಯಿಸುತ್ತೇನೆ.

-ಆರ್.ಬಿ. ಶೆಣವ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಭಾವ ಪ್ರಧಾನ ಪಾತ್ರ ನನಗಿಷ್ಟ: ರಕ್ಷಿತ್ ಶೆಟ್ಟಿ



'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದಲ್ಲಿ ರಕ್ಷಿತ್ ಶೆಟ್ಟಿ ವಿಭಿನ್ನ ಪಾತ್ರ ಪೋಷಿಸಿದ್ದಾರೆ. ಅಲ್ಲಿ ಅವರು ಅನಂತ್ ನಾಗ್‌ನ ಮಗನಾಗಿ ಕಾಣಿಸಿಕೊಂಡಿದ್ದು ವಿಶೇಷ.

ನಿರ್ದೇಶಕ ಕಂ ನಟ ರಕ್ಷಿತ್ ಶೆಟ್ಟಿ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾದಲ್ಲಿ ವಿಭಿನ್ನ ಪಾತ್ರ ಮಾಡಿದ್ದಾರೆ. ಈ ಪಾತ್ರವು ಇವರ ವೃತ್ತಿ ಬದುಕಿಗೆ ಮತ್ತೊಂದು ತಿರುವು ನೀಡುವ ಸಾಧ್ಯತೆ ಇದೆಯಂತೆ. ಅಲ್ಲದೇ ಸ್ಕ್ರಿಪ್ಟ್ ಕೂಡ ವಿಭಿನ್ನವಾಗಿದೆಯಂತೆ. ತಮ್ಮ ಪಾತ್ರ ಮತ್ತು ಮುಂದಿನ ಪ್ರಾಜೆಕ್ಟ್‌ಗಳ ಕುರಿತು ಅವರು ಮಾತಾಡಿದ್ದು ಇಲ್ಲಿದೆ.


** 'ರಿಕ್ಕಿ' ಸಿನಿಮಾ ನಿಮ್ಮ ನಿರೀಕ್ಷೆಗೆ ತಕ್ಕಂತೆ ಗೆದ್ದಿದೆಯಾ?*

ಅನುಮಾನವೇ ಇಲ್ಲ, ಯಾವುದೇ ಕಾರಣಕ್ಕೂ ಅದು ನಷ್ಟ ಮಾಡಿಲ್ಲ, ಅಂದುಕೊಂಡಂತೆ ಗಲ್ಲಾ ಪೆಟ್ಟಿಗೆಯನ್ನು ತುಂಬಿಸದೇ ಇರಬಹುದು. ಆದರೆ ಅದು ಜನರ ಮನಸ್ಸನ್ನು ಗೆದ್ದಿದೆ. ಹೀಗಾಗಿ ಸಿನಿಮಾದ ಗೆಲುವನ್ನು ಕೇವಲ ಹಣದಿಂದ ಮಾತ್ರ ಅಳೆಯಬಾರದು.

** ಸುದೀಪ್ ಜತೆಗಿನ ನಿಮ್ಮ ಪ್ರಾಜೆಕ್ಟ್ ಎಲ್ಲಿಗೆ ಬಂತು? ಯಾವಾಗ ಶೂಟಿಂಗ್ ಶುರು?*

ಇನ್ನೂ ಸ್ಕ್ರಿಪ್ಟ್ ವರ್ಕ್ ನಡೆಯುತ್ತಿದೆ. ಸುದೀಪ್ ಅವರು ಕೂಡ ಬೇರೆ ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ. ಹೀಗಾಗಿ ಈ ವರ್ಷದ ಕೊನೆಯಲ್ಲಿ ಆ ಚಿತ್ರ ಬರಬಹುದು. ಸ್ಟಾರ್ ನಟರ ಜತೆ ಈ ಬಾರಿ ಕೆಲಸ ಮಾಡುತ್ತಿರುವುದರಿಂದ ಹೊಸ ರೀತಿಯಲ್ಲೇ ನಾನೂ ಯೋಚಿಸಬೇಕಿದೆ.

** ನಿಮ್ಮ ಮತ್ತು ನಿರ್ದೇಶಕ ರಿಷಭ್ ಜೋಡಿಯ ಮತ್ತೊಂದು ಸಿನಿಮಾ ಬರಲಿದೆಯಂತೆ?*



ಹೌದು, ಏಪ್ರಿಲ್ ಎರಡನೇ ವಾರದಿಂದ ಚಿತ್ರೀಕರಣ. 'ರಿಕ್ಕಿ' ರೀತಿಯಲ್ಲೇ ಆ ಸಿನಿಮಾ ವಿಭಿನ್ನವಾದ ಕತೆಯನ್ನು ಒಳಗೊಂಡಿದೆ. ಈ ಬಾರಿ ಮತ್ತೊಂದು ವಿಷಯವನ್ನು ಎತ್ತಿಕೊಂಡು ಸಿನಿಮಾ ಮಾಡುತ್ತಿದ್ದೇವೆ. 'ರಿಕ್ಕಿ'ಯ ಕತೆಯ ಬಗ್ಗೆ ಮೆಚ್ಚುಗೆಯ ಮಾತು ಕೇಳಿಬಂದಿತ್ತು. ಈ ಸಿನಿಮಾದಲ್ಲೂ ಅಂಥದ್ದೇ ಮತ್ತೊಂದು ಹೊಸ ಕತೆ ಇದೆ.

** ''ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾದಲ್ಲಿ ನಿಮ್ಮ ಪಾತ್ರ ಎಂಥದ್ದು?*

ನಾನಲ್ಲಿ ಅನಂತ್ ನಾಗ್ ಅವರ ಮಗನ ಪಾತ್ರ ಮಾಡುತ್ತಿದ್ದೇನೆ. ಇದೇ ಮೊದಲ ಬಾರಿಗೆ ನಾನು ಆ ರೀತಿಯ ಪಾತ್ರವನ್ನು ಒಪ್ಪಿಕೊಂಡಿದ್ದೇನೆ. ಹೀಗಾಗಿ ಅದನ್ನು ಜನ ಹೇಗೆ ಸ್ವೀಕರಿಸುತ್ತಾರೆ ಅನ್ನುವ ಕುತೂಹಲವೂ ಇದೆ.

** ನಿಮ್ಮ ಪಾತ್ರದ ಹಿನ್ನೆಲೆ ಏನು? ಯಾಕೆ ನಿಮಗೆ ಅದು ನಿರೀಕ್ಷೆ ಹುಟ್ಟಿಸಿದೆ?*

ನಾನು ಇಷ್ಟ ಪಡುವ ಪಾತ್ರವೇ ನನಗೆ ಸಿಕ್ಕಿದೆ. ಅದೊಂದು ಭಾವ ಪ್ರಧಾನ ಪಾತ್ರ. ನನ್ನ ತಂದೆ ಕಳೆದುಹೋಗುತ್ತಾರೆ. ಅವರನ್ನು ಹುಡುಕುವ ಪಾತ್ರ ನನ್ನದು. ಇಲ್ಲಿ ಎರಡು ಹುಡುಕಾಟವಿದೆ. ಕಾಣೆಯಾದ ತಂದೆಯ ಜತೆಗೆ ಅವರ ಬದುಕಿನ ಕ್ಷಣಗಳನ್ನೂ ಹುಡುಕಬೇಕಿದೆ. ಹೀಗಾಗಿಯೇ ಇದೊಂದು ಹೊಸ ರೀತಿಯ ಪಾತ್ರ.

** ನಿರ್ದೇಶಕನಾಗಿ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾದ ಬಗ್ಗೆ ಏನು ಹೇಳುತ್ತೀರಿ?*

ಈವರೆಗೂ ಇಂತಹ ಸ್ಕ್ರಿಪ್ಟ್ ಕನ್ನಡದಲ್ಲಿ ಬಂದಿಲ್ಲ, ನಿರ್ದೇಶಕ ಹೇಮಂತ್ ನನಗೆ ಕತೆ ಹೇಳಿದಾಗ ಥ್ರಿಲ್ ಆದೆ. ಈ ಸಣ್ಣ ವಯಸ್ಸಿನಲ್ಲಿ ಅವರಿಗೆ ಬಂದ ಆಲೋಚನೆಗೆ ನಾನೇ ಅಚ್ಚರಿಪಟ್ಟೆ. ಅಲ್ಲದೇ ತಾಂತ್ರಿಕವಾಗಿಯೂ ಚೆನ್ನಾಗಿ ಮೂಡಿಬಂದಿದೆ. ಸಿನಿಮಾಟೋಗ್ರಫಿ, ಸಂಗೀತ ಎಲ್ಲವೂ ಚೆನ್ನಾಗಿದೆ. ಇಂತಹ ಚಿತ್ರಗಳು ಎಲ್ಲಾ ಸಿನಿಮಾ ರಂಗದಲ್ಲೂ ಹೆಚ್ಚಾಗಬೇಕು.


** ಅನಂತ್ ನಾಗ್ ಜತೆಗಿನ ಅಭಿನಯ ಹೇಗಿತ್ತು?*

ಮೊದಲ ದಿನವೇ ನಾನು ನರ್ವಸ್ ಆಗಿದ್ದೆ, ಅವರ ಜತೆ ನಟಿಸುವುದು ಅಂದರೆ ಅದೊಂದು ಗೌರವ. ನಮಗೆ ಗೊತ್ತಿಲ್ಲದಂತೆ ಭಯ ಶುರುವಾಗುತ್ತದೆ. ಅದನ್ನು ಅವರು ಆನಂತರ ಸರಿ ಮಾಡುತ್ತಾರೆ. ಖುಷಿಯಿಂದ ನಮ್ಮೊಂದಿಗೆ ಮಾತಾಡುತ್ತಾ ಧೈರ್ಯ ತುಂಬುತ್ತಾರೆ. ಗೋಧಿ ಬಣ್ಣದಲ್ಲಿ ನಮ್ಮಿಬ್ಬರ ಕಾಂಬಿನೇಷನ್ ತುಂಬಾ ಬರುವುದಿಲ್ಲ, ಆದರೆ, ಒಂದಷ್ಟು ದೃಶ್ಯಗಳು ನನಗೆ ಖುಷಿ ಕೊಟ್ಟಿವೆ. ಅವರಿಂದ ನಾನು ತುಂಬಾನೇ ಕಲಿತಿದ್ದೇನೆ.

** ಮಲ್ಟಿಪ್ಲೆಕ್ಸ್ ಥಿಯೇಟರ್ ವಿರುದ್ಧ ನಡೆದ ಟಿಕೆಟ್ ಚಳವಳಿ ಬಗ್ಗೆ ನಿಮ್ಮ ಅಭಿಪ್ರಾಯ ಏನು?*

ಮಲ್ಟಿಪ್ಲೆಕ್ಸ್ ಥಿಯೇಟರ್‌ಗೆ ಸಂಬಂಧಿಸಿದ ಆನ್‌ಲೈನ್ ಚಳವಳಿಯಲ್ಲಿ ನಾನೂ ಭಾಗವಹಿಸಿದ್ದೆ. ಆದರೆ ಈ ಹೋರಾಟ ಕೇವಲ ಟಿಕೆಟ್‌ಗೆ ಮಾತ್ರ ಸೀಮಿತ ಆಗಬಾರದು. ಅಲ್ಲಿ ಇನ್ನಷ್ಟು ನ್ಯೂನತೆಗಳಿವೆ. ಅವೆಲ್ಲವೂ ಸರಿಹೋಗಬೇಕು. ಇದು ಕೇವಲ ನನ್ನದಷ್ಟೇ ಮಾತಲ್ಲ, ಅನೇಕರು ಇದೇ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ. ■

ಲೂಸ್‌ಮಾದ ಯೋಗಿಗೆ ಸಂಕಷ್ಟ



ಕಳೆದ ವಾರವಷ್ಟೇ ಲೂಸ್‌ಮಾದ ಯೋಗಿ ಅವರ 'ಕಾಲಭೈರವ' ಸಿನಿಮಾ ರಿಲೀಸ್ ಆಗಿದೆ. ಮೊದಲನೆ ದಿನವೇ ಪ್ರೇಕ್ಷಕರಿಲ್ಲದೇ ಚಿತ್ರಮಂದಿರ ಸೊರಗಿತ್ತು, ಈ ವಾರ ಅನೇಕ ಚಿತ್ರಮಂದಿರಗಳಿಂದ ಈ ಚಿತ್ರವನ್ನು ತೆಗೆದುಹಾಕಲಾಗುತ್ತಿದೆ. ಹೀಗಾಗಿ ಯೋಗಿಗೆ ಇನ್ನಷ್ಟು ಸಂಕಟ ಎದುರಾಗಿದೆ.

ಎರಡ್ಮೂರು ವರ್ಷಗಳಿಂದ ಯೋಗಿ ಅಕ್ಷರಶಃ ಖಾಲಿ ಇದ್ದಾರೆ. ರಿಯಾಲಿಟಿ ಶೋನಲ್ಲಿ ನಿರೂಪಕರಾಗಿ ಗುರುತಿಸಿಕೊಂಡಿದ್ದು ಬಿಟ್ಟರೆ, ಆನಂತರ ಪುಟ್ಟ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡರು. ಮೂರು ಚಿತ್ರಗಳು ಶೂಟಿಂಗ್ ಆಗಿ ಅರ್ಧಕ್ಕೆ ನಿಂತಿದ್ದರೂ ಅವು ಪೂರ್ಣಗೊಳ್ಳುತ್ತಿಲ್ಲ, ಅಲ್ಲದೇ ದರ್ಶನ್ ಜತೆ ನಟಿಸುವುದಾಗಿ ಹೇಳಿಕೊಂಡಿದ್ದ ಚಿತ್ರ ಕೂಡ ಸೆಟ್ಟೇರುವುದು ಅನುಮಾನ ಎನ್ನಲಾಗುತ್ತಿದೆ. ಹೀಗಾಗಿ ಯೋಗಿ ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ.

'ದುನಿಯಾ', 'ಅಂಬಾರಿ'ಯಂಥ ಅಪರೂಪದ ಸಿನಿಮಾ ಕೊಟ್ಟ ಯೋಗಿಗೆ ಇಂತಹ ಸ್ಥಿತಿ ಬರಲು ಕಾರಣ ಅವರೇ ಒಪ್ಪಿಕೊಂಡ ಹಲವು ಚಿತ್ರಗಳು. ಅವರು ನಟಿಸಿರುವ ಬಹುತೇಕ ಚಿತ್ರಗಳಲ್ಲಿ ಒಂದೇ ರೀತಿಯ ಪಾತ್ರಗಳಿದ್ದವು. ಅಲ್ಲದೇ ನಿರ್ಮಾಣದಲ್ಲೂ ಕೈ ಸುಟ್ಟುಕೊಂಡರು. ಈ ಎಲ್ಲಾ ಟೆನ್‌ಷನ್ ಮಧ್ಯೆ ಅವರಿಗೆ ನಟಿಸುವುದಕ್ಕೆ ಆಗಲೇ ಇಲ್ಲ, ಯೋಗಿ ಪ್ರತಿಭಾವಂತ ನಟ. ಈ ಎಲ್ಲಾ ಸುಳಿಗಳಿಂದ ಅವರು ಆಚೆ ಬರಲಿ.

ಸಿಂಗಾರಗೊಳ್ಳುತ್ತಿರುವ ದೊಡ್ಮನೆ ಹುಡುಗ

ಪುನೀತ್ ರಾಜ್‌ಕುಮಾರ್ ನಟನೆಯ 'ದೊಡ್ಮನೆ ಹುಡುಗ' ಸಿನಿಮಾದ ಶೂಟಿಂಗ್ ಅರ್ಧಕ್ಕೆ ನಿಂತಿತ್ತು, ಮುಂದುವರೆಯುವುದು ಅನುಮಾನ ಅಂತಲೂ ಸುದ್ದಿ ಆಗಿತ್ತು, ಸದ್ಯ ಸಿಕ್ಕಿರುವ ಮಾಹಿತಿಯ ಪ್ರಕಾರ, ಶೂಟಿಂಗ್‌ಗೆ ಮತ್ತೆ ಚಾಲನೆ ನೀಡಲಾಗಿದೆ. ಬೆಂಗಳೂರಿನಲ್ಲಿ ಹಾಡುಗಳ ಚಿತ್ರೀಕರಣ ನಡೆಸಿದ್ದಾರೆ ನಿರ್ದೇಶಕ ಸೂರಿ.

ಎರಡು ವರ್ಷದ ಹಿಂದೆಯೇ ಶುರುವಾದ ಚಿತ್ರವಿದು. ಒಂದು ಹಂತದ ಚಿತ್ರೀಕರಣ ಮುಗಿಸಿ ಆನಂತರ ಶೂಟಿಂಗ್ ನಿಲ್ಲಿಸಲಾಗಿತ್ತು, ಅರ್ಧಕ್ಕೆ ಶೂಟಿಂಗ್ ನಿಲ್ಲಲು ಹಣಕಾಸಿನ ಸಮಸ್ಯೆ ಕಾರಣ ಎನ್ನಲಾಗಿತ್ತು, ಈ ಕಡೆ ಸೂರಿ 'ಕೆಂಡಸಂಪಿಗೆ' ಸಿನಿಮಾದ ಶೂಟಿಂಗ್‌ನಲ್ಲಿ ತೊಡಗಿಕೊಂಡರೆ, ಪುನೀತ್ ಎರಡು ಚಿತ್ರಗಳಿಗೆ ಸಹಿ ಮಾಡಿದ್ದರು. 'ಕೆಂಡಸಂಪಿಗೆ' ರಿಲೀಸ್ ಆಗಿ ನೂರು ದಿನದ ಪ್ರದರ್ಶನ ಕಂಡರೂ 'ದೊಡ್ಮನೆ'ಗೆ ಮುಕ್ತಿ ಸಿಗುವ ಲಕ್ಷಣ ಕಂಡಿರಲಿಲ್ಲ, ಈಗ ಮತ್ತೆ ಚಿತ್ರಕ್ಕೆ ಚಾಲನೆ ನೀಡಲಾಗಿದೆ. ಪುನೀತ್ ರಾಜ್‌ಕುಮಾರ್ ಮತ್ತು ರಾಧಿಕಾ ಪಂಡಿತ್ ಸದ್ಯ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ಅಲ್ಲದೇ ರಾಧಿಕಾ ಡಬ್ಬಿಂಗ್ ಕಾರ್ಯದಲ್ಲೂ ನಿರತರಾಗಿದ್ದಾರೆ. ಪುನೀತ್ ಅವರ 'ಚಕ್ರವ್ಯೂಹ' ಸಿನಿಮಾದ ನಂತರ ಈ ಚಿತ್ರವು ಬಿಡುಗಡೆ ಆಗಲಿದೆಯಂತೆ.




ತಮಿಳಿನತ್ತ ಹರಿಪ್ರಿಯಾ ಚಿತ್ತ

ಕನ್ನಡದಲ್ಲಿ ಹೇಳಿಕೊಳ್ಳುವಂತಹ ಅವಕಾಶ ಸಿಗಲಿಲ್ಲ ಅನ್ನುವ ಕಾರಣಕ್ಕೆ ಐದಾರು ವರ್ಷಗಳ ಹಿಂದೆ ಹರಿಪ್ರಿಯಾ ತಮಿಳಿನತ್ತ ಪಯಣ ಬೆಳೆಸಿದ್ದರು. ಈಗ ಮತ್ತೆ ಅವರಿಗೆ ಅದೇ ಸ್ಥಿತಿ ನಿರ್ಮಾಣ ಆಗಿದೆ. ಕಾರಣ, ಒಪ್ಪಿಕೊಂಡಿರುವ ಬಹುತೇಕ ಸಿನಿಮಾಗಳು ಸೋಲು ಕಾಣುತ್ತಿವೆ. 'ಬುಲೆಟ್ ಬಸ್ಯಾ', 'ರಿಕ್ಕಿ', 'ರಣತಂತ್ರ' ಹೀಗೆ ಸಾಲು ಸಾಲು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ ಕಾರಣ ಹರಿಪ್ರಿಯಾಗೆ ಡಿಮಾಂಡ್ ಕಡಿಮೆ ಆಗಿದೆ. ಹೀಗಾಗಿಯೇ ಎರಡನೇ ನಾಯಕಿಯ ಪಾತ್ರಗಳು ಅವರನ್ನು ಹುಡುಕಿಕೊಂಡು ಬರುತ್ತಿವೆ. ಈಗಾಗಲೇ 'ಭರ್ಜರಿ' ಚಿತ್ರದಲ್ಲಿ ಅವರು ಸೆಕೆಂಡ್ ಹೀರೋಯಿನ್ ಆಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ತಮಿಳಿನ ಚಿತ್ರದಲ್ಲೂ ಅವರು ನಟಿಸಲು ಒಪ್ಪಿಕೊಂಡಿದ್ದಾರೆ.

ನಂಬರ್ ಒನ್ ನಟಿಯ ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದ್ದವರು ಏಕಾಏಕಿ ಇಂತಹ ಸ್ಥಿತಿಗೆ ಬರಲು ಕಾರಣ, ದುಡ್ಡಿನ ಆಸೆಗಾಗಿ ಬರುವ ಎಲ್ಲಾ ಪಾತ್ರವನ್ನೂ ಅವರು ಒಪ್ಪಿಕೊಳ್ಳುತ್ತಿದ್ದಾರಂತೆ. ಹೆಚ್ಚು ದುಡ್ಡು ತೋರಿಸಿದರೆ, ಕತೆಯನ್ನೂ ಕೇಳುವುದಿಲ್ಲ ಅನ್ನುತ್ತಿದೆ ಗಾಂಧಿನಗರ. ಈ ಮಧ್ಯೆಯೂ ಅಪರೂಪದ ಪಾತ್ರವನ್ನೂ ಅವರು ಒಪ್ಪಿಕೊಂಡಿದ್ದಾರೆ. 'ನೀರ್‌ದೋಸೆ' ಸಿನಿಮಾದಲ್ಲಿ ಹರಿಪ್ರಿಯಾಗೆ ವಿಭಿನ್ನ ಕ್ಯಾರೆಕ್ಟರ್ ಇದೆ. ಅದಾದರೂ ಕೈ ಹಿಡಿಯುತ್ತಾ ಕಾದು ನೋಡಬೇಕಿದೆ.



ಪಡ್ಡೆಹುಲಿಗಾಗಿ ಸತೀಶ್ ಕಸರತ್ತು



ಜಯತೀರ್ಥ ನಿರ್ದೇಶನದ 'ಬ್ಯೂಟಿಫುಲ್ ಮನಸುಗಳು' ಸಿನಿಮಾದ ಶೂಟಿಂಗ್‌ನಲ್ಲಿ ಬ್ಯುಸಿ ಆಗಿರುವ ಸತೀಶ್ ನೀನಾಸಂ, ಈ ಮಧ್ಯೆ ಬಿಡುವು ಮಾಡಿಕೊಂಡು 'ಪಡ್ಡೆಹುಲಿ'ಗಾಗಿ ರೆಡಿ ಆಗುತ್ತಿದ್ದಾರೆ. ಈ ಚಿತ್ರದಲ್ಲಿ ಇವರು ಡಿಫರೆಂಟ್ ಪಾತ್ರ ನಿರ್ವಹಿಸುತ್ತಿರುವುದರಿಂದ ಕಸರತ್ತು ಮಾಡುವುದು ಅನಿವಾರ್ಯವಂತೆ. 'ಬ್ಯೂಟಿಫುಲ್ ಮನಸುಗಳು' ಸಿನಿಮಾದಲ್ಲಿ ಲವರ್‌ಬಾಯ್ ಆಗಿ ಕಾಣಿಸಿಕೊಂಡರೆ, 'ಪಡ್ಡೆಹುಲಿ'ಯಲ್ಲಿ ರಗ್ಗೆಡ್ ಪಾತ್ರವಂತೆ. ಅಲ್ಲದೇ ಹುರಿಮೀಸೆಯ ಚೆಲುವನಾಗಿ ಕಾಣಬೇಕಿದೆಯಂತೆ. ಹಾಗಾಗಿಯೇ ಸತೀಶ್ ಕೊಂಚ ವಿಭಿನ್ನವಾಗಿ ರೆಡಿ ಆಗುತ್ತಿದ್ದಾರೆ. 'ರಾಜಾಹುಲಿ' ಸಿನಿಮಾದ ನಂತರ ಗುರು ದೇಶಪಾಂಡೆ 'ಪಡ್ಡೆಹುಲಿ'ಯನ್ನು ನಿರ್ದೇಶಿಸುತ್ತಿದ್ದಾರೆ. 'ರಾಜಾಹುಲಿ' ಯಶ್‌ಗೆ ಬ್ರೇಕ್ ನೀಡಿದ ಚಿತ್ರ. ಹೀಗಾಗಿ ಸತೀಶ್‌ಗೂ 'ಪಡ್ಡೆಹುಲಿ' ಮೇಲೆ ನಿರೀಕ್ಷೆ ಇದೆ. ಈ ಹಿಂದೆಯೇ ಸತೀಶ್ ಮತ್ತು ಗುರು ಜೋಡಿ[illegible] ಸಿನಿಮಾವೊಂದು ಬರಬೇಕಿತ್ತು, ಆದರೆ ಸತೀಶ್ 'ರಾಕೆಟ್' ಚಿತ್ರದ[illegible] ತೊಡಗಿಕೊಂಡಿದ್ದರಿಂದ ಆಗಿರಲಿಲ್ಲ, ಈಗ ಆ ಆಸೆ ಈಡೇರುತ್ತಿದೆ.

ಸ್ಟೈಲ್ ಗ್ಯಾಪ್‌ನಲ್ಲಿ ಜೂಮ್

ಗಣೇಶ್‌ನ ಗಲಾಟೆ ಇಲ್ಲಿಗೆ ನಿಲ್ಲುವಂತೆ ಕಾಣುತ್ತಿಲ್ಲ, 'ಸ್ಟೈಲ್‌ಕಿಂಗ್' ಸಿನಿಮಾದ ವಿಚಾರವಾಗಿ ನಿರ್ದೇಶಕರ ಮತ್ತು ಗಣೇಶ್ ನಡುವೆ ಮತ್ತೆ ಶೀತ[illegible] ಸಮರ ಶುರುವಾಗಿದೆ. ಅಂದುಕೊಂಡಂತೆ ಆಗಿದ್ದರೆ 'ಸ್ಟೈಲ್‌ಕಿಂಗ್' ಸಿನಿಮಾ[illegible] ವರ್ಷದ ಹಿಂದೆಯೇ ಬಿಡುಗಡೆ ಆಗಬೇಕಿತ್ತು, ಅದು ಆಗಲಿಲ್ಲ, ಹೀಗಾ[illegible] 'ಬುಗುರಿ' ಸಿನಿಮಾ ಬಂತು. ಈಗ 'ಜೂಮ್' ರಿಲೀಸ್‌ಗೆ ರೆಡಿ ಆಗಿದೆ. ನಡುವೆ ಮತ್ತೆ 'ಸ್ಟೈಲ್‌ಕಿಂಗ್' ಕಾಣಿಸಿಕೊಂಡಿದ್ದಾನೆ. 'ಜೂಮ್'ಗಿಂತ ಮುಂಚೆ[illegible] 'ಸ್ಟೈಲ್‌ಕಿಂಗ್' ಸಿನಿಮಾವನ್ನು ಬಿಡುಗಡೆ ಮಾಡುವುದಾಗಿ ನಿರ್ದೇಶಕ ಶೇಖ[illegible] ಹೇಳುತ್ತಿದ್ದಾರೆ. ಹೀಗಾಗಿ 'ಜೂಮ್' ಮತ್ತು 'ಸ್ಟೈಲ್‌ಕಿಂಗ್' ನಿರ್ಮಾಪ[illegible] ಮಧ್ಯೆ ಕಿತ್ತಾಟ ಶುರುವಾಗಿದೆ.

ಈ ಕುರಿತು ಗಣೇಶ್ ಯಾವ ಪ್ರತಿಕ್ರಿಯೆಯನ್ನೂ ನೀಡುತ್ತಿಲ್ಲ, ಅಲ್ಲ[illegible] ಅವರಿಗೆ 'ಸ್ಟೈಲ್‌ಕಿಂಗ್' ಸಿನಿಮಾದ ನಿರ್ದೇಶಕರ ಮೇಲೆ ಸಾಕಷ್ಟು ಕೋಪವಿದೆ. ಹೀಗಾಗಿ ಸಿನಿಮಾ ರಿಲೀಸ್ ಆದರೂ ಪ್ರಚಾರಕ್ಕೆ ಹೋಗುವುದು ಅನುಮಾನ ಅಂತಿದ್ದಾರೆ ಅವರ ಆಪ್ತರು. ಈ ಮಧ್ಯೆ ಗಣೇಶ್ ಅವರ ನಾಲ್ಕು ಚಿತ್ರಗಳು ರಿಲೀಸ್‌ಗೆ ರೆಡಿ ಆಗಿವೆ. ಇನ್ನೂ ಮೂರು ಚಿತ್ರಗಳಿಗೆ ಅವರು ಸಹಿ ಮಾಡಿದ್ದಾರೆ. ಸಿನಿಮಾ ರಿಲೀಸ್ ಆಗದೇ ಹೊಸ ಸಿನಿಮಾದ ಶೂಟಿಂಗ್ ಮಾಡಲು ಸಾಧ್ಯವಿಲ್ಲದ ಕಾರಣ ಗಣೇಶ್ ಸಂಕಷ್ಟಕ್ಕೆ ಸಿಲುಕಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com